ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ 18ನೇ ಮಾರ್ಚ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 12.30 ಗಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು
ಪೀಠವನ್ನು ಅಲಂಕರಿಸಿದ್ದರು.

ಆಯವ್ಯಯ ಮಂಡನೆ - 1997-98

ಅಧ್ಯಕ್ಷರು : ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) ಅವರು - 1997-98ನೇ ಸಾಲಿನ ಆಯವ್ಯಯವನ್ನು ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಆಯವ್ಯಯವನ್ನು ಮಂಡನೆ ಮಾಡುತ್ತಿದ್ದಾರೆ. ಅದಕ್ಕೆ ನನ್ನದೇನೂ ವಿರೋಧ ಇಲ್ಲ. ಒಂದು ಕಡೆ ಬಸ್ಸು ದರವನ್ನು ವಿಪರೀತ ಏರಿಸಿ ಮತ್ತೊಂದೆಡೆ ಆಯವ್ಯಯವನ್ನು ಮಂಡಿಸುತ್ತಿರುವುದು ಸರಿಯೇ? ಮಾನ್ಯ ಅರ್ಥ ಸಚಿವರ ಬಗ್ಗೆ ನನಗೆ ಗೌರವ ಇದೆ, ಅವರು ಇಲ್ಲಿ ಆಯವ್ಯಯ ಮಂಡಿಸುವುದಕ್ಕೆ ನನ್ನದೇನು ಅಭ್ಯಂತರವಿಲ್ಲ, ತಕರಾರೂ ಇಲ್ಲ. ಅವರು ಆಯವ್ಯಯವನ್ನು ಮಂಡಿಸಲಿ. ಈ ರಾಜ್ಯದ ಜನತೆಯ ಮೇಲೆ ಬಸ್ಸು ದರಗಳನ್ನು ಏರಿಸಿ ಹೊರೆಹೊರಿಸತಕ್ಕ ಕೆಲಸ ಮಾಡಿರತಕ್ಕದ್ದು ಒಳ್ಳೆಯದಲ್ಲ. ಇದು ಒಳ್ಳೆಯ ನೀತಿ ಅಲ್ಲ ......

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು ಮತ್ತು ಅರ್ಥ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ,

1. ನಾನು 1997-98ನೇ ಸಾಲಿನ ಆಯ-ವ್ಯಯದ ಅಂದಾಜುಗಳನ್ನು ಮಂಡಿಸುತ್ತೇನೆ.

2. ಕಳೆದ ವರ್ಷ ರಾಷ್ಟ್ರರಾಜಕಾರಣದಲ್ಲಿ ಬದಲಾವಣೆಯ ಗಾಳಿ ಬೀಸಿತು. ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರವು 1996ನೇ ಜೂನ್ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂತು. ರಾಷ್ಟ್ರೀಯ ವ್ಯಾಪ್ತಿಯ ಪಕ್ಷಗಳ ಮತ್ತು ಪ್ರಾಂತೀಯ ನಿಲುವುಗಳನ್ನು ಬಲವಾಗಿ ಪ್ರತಿನಿಧಿಸುವ ಪ್ರಾದೇಶಿಕ ಪಕ್ಷಗಳ ಈ ಐತಿಹಾಸಿಕ ಘಟನೆಯಲ್ಲಿ ಒಗ್ಗೂಡಿದವು. ಈ ಅಪೂರ್ವ ಮಿಲನದಲ್ಲಿ ಜನತಾ ದಳ ಪಕ್ಷವು ಪ್ರಮುಖ ಘಟಕವಾಗಿದೆ. ಈಗ ಸಂಯುಕ್ತರಂಗ ಸರ್ಕಾರವು ರಾಜ್ಯಗಳ ನಡುವಿನ ಉತ್ಸಾಹಪೂರ್ಣ ಸಹಕಾರ ದೊಡನೆ ಒಂದು ಉಜ್ವಲ ಭವಿಷ್ಯದತ್ತ ಮುನ್ನಡೆಯುತ್ತಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಬಸ್ಸು ದರ ಏರಿಕೆಯನ್ನು ವಿರೋಧಿಸುತ್ತಾ, ಬಸ್ಸು ದರ ಏರಿಸಲಾಗಿದ್ದ ಸರ್ಕಾರಿ ಆದೇಶವನ್ನು ಚೂರು ಮಾಡಿ ಗಾಳಿಗೆ ತೂರಿದರು ಮತ್ತು ದರ ಏರಿಕೆ ವಿರುದ್ಧ ಪ್ರತಿಭಟಿಸುತ್ತಾ ಸದನದ ಬಾವಿಯಲ್ಲಿ ಧರಣಿ ಮಾಡಿದರು.)

3. ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡ ಅವರು ಈ ಬೃಹತ್ ರಾಷ್ಟ್ರದ ಪ್ರಧಾನಿಯಾಗಿರುವುದು ಮಹತ್ವದ ಸಂಗತಿ. ಕಳೆದ ವರ್ಷದವರೆಗೂ ಕರ್ನಾಟಕದ ಮುಖ್ಯಮಂತ್ರಿಯಾಗಿ ರಾಜ್ಯವನ್ನು ಮುನ್ನಡೆಸಿದ್ದ ಶ್ರೀ ಹೆಚ್.ಡಿ. ದೇವೇಗೌಡ ಅವರು ಇಂದು ಭಾರತದ ಪ್ರಧಾನಿಯಾಗಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆ ತರುವ ವಿಚಾರ. ಸಾಮಾನ್ಯ ರೈತಾಪಿ ವರ್ಗದ ವ್ಯಕ್ತಿಯೊಬ್ಬರು ರಾಜಕೀಯವಾಗಿ ಹಂತಹಂತವಾಗಿ ಮೇಲೇರಿ ಈ ಮಹಾನ್ ರಾಷ್ಟ್ರದ ಪ್ರಧಾನಿಯಾಗಿರುವುದು, ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆ ಜೀವಂತವಾಗಿ ಪುಟಿಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇದಕ್ಕಿಂತ ಮುಖ್ಯ ಸಂಗತಿಯೆಂದರೆ, ಈ ಬೆಳವಣಿಗೆಯು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಅಪಾರ ಬದಲಾವಣೆಯನ್ನು ತಂದಿದೆ. ಜನಸಾಮಾನ್ಯರ ಬಗೆಗಿನ ಸರ್ಕಾರದ ಕಾಳಜಿ ಮತ್ತೆ ಅಗ್ರಸ್ಥಾನ ಗಳಿಸಿದೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಸರ್ಕಾರದವರು ಬಸ್ ದರವನ್ನು ಆಯವ್ಯಯಕ್ಕೆ ಮುಂಚೆಯೇ ಏರಿಸಿ ಜನತೆಯ ಮೇಲೆ ಹೊರೆ ಹೊರಿಸಿರುವುದನ್ನು ವಿರೋಧಿಸಿ ಕಾಂಗ್ರೆಸ್ (ಐ) ಪಕ್ಷದವರು ಸಭಾತ್ಯಾಗ ಮಾಡಿದರು.)

4. ಭಾರತವು ತನ್ನ ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ಸಂದರ್ಭದಲ್ಲಿಯೇ ಈ ಪ್ರಮುಖ ಘಟನೆಗಳು ನಡೆದಿರುವುದು ಒಂದು ಅಪೂರ್ವ ಪ್ರಸಂಗ. ಕಳೆದ ಐವತ್ತು ವರ್ಷಗಳಲ್ಲಿ ನಾವು ಪ್ರಗತಿಯ ಹಾದಿಯಲ್ಲಿ ಸಾಕಷ್ಟು ಮುನ್ನಡೆದಿದ್ದೇವೆ, ನಿಜ. ಆದರೂ, ನಮ್ಮ ಮುಂದೆ ಇನ್ನೂ ಹಲವಾರು ಸವಾಲುಗಳಿವೆ. ಇವುಗಳ ಬಗ್ಗೆ ಚಿಂತಿಸಲು ಇದು ಸಕಾಲ. ಈ ಸಂದರ್ಭದಲ್ಲಿ ಸ್ವತಂತ್ರ ಭಾರತದ ಸ್ವರೂಪದ ಬಗ್ಗೆ ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯವನ್ನು ನಾನು ಇಲ್ಲಿ ಸ್ಮರಿಕೊಳ್ಳುತ್ತೇನೆ.

"ನನ್ನ ಕಲ್ಪನೆಯ ಸ್ವರಾಜ್ಯವೆಂದರೆ ಜೀವನದ ಮೂಲ ಅವಶ್ಯಕತೆಗಳನ್ನು ಎಲ್ಲರೂ ಪಡೆಯಲಾಗುವ ರಾಷ್ಟ್ರವನ್ನು ರೂಪಿಸುವುದು. ಜೀವನಕ್ಕೆ ಬೇಕಾದ ಅವಶ್ಯಕತೆಗಳು ಎಲ್ಲರಿಗೂ ದೊರೆಯದಿದ್ದಲ್ಲಿ ಅದು ಪೂರ್ಣ ಸ್ವರಾಜ್ಯವೆನಿಸುವುದಿಲ್ಲ"

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಬೆಂಬಲಿಸಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಮತ್ತು ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರೂ ಸಹ ಸದನದ ಬಾವಿಯಲ್ಲಿ ಧರಣಿ ಕುಳಿತರು.)

5. ಬಾಪೂಜಿಯವರ ಈ ಕನಸುಗಳು ಇನ್ನೂ ನನಸಾಗಬೇಕಾಗಿದೆ. ಕೋಟ್ಯಾಂತರ ದುರ್ಬಲರು ನಮ್ಮ ಆರ್ಥಿಕ ಫಲಶ್ರುತಿಯಿಂದ ಇನ್ನೂ ದೂರವೇ ಉಳಿದಿದ್ದಾರೆ. ನಮ್ಮ ಪ್ರಗತಿಯಲ್ಲಿ ಅವರಿನ್ನೂ ಸಮಾನ ಪಾಲುದಾರರಾಗಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿದ್ಯುತ್ ದರ ಏಕೆ ಏರಿಸಿದ್ದೀರಿ? ಬಸ್ಸು ದರ ಏಕೆ ಜಾಸ್ತಿ ಮಾಡಿದ್ದೀರಿ?

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸಣ್ಣ ನೀರಾವರಿಗೆ ಏನೂ ಆದ್ಯತೆ ಕೊಟ್ಟಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರೈತರ ಮೇಲೆ ಚಪ್ಪಡಿ ಕಲ್ಲು ಎಳೆಯುತ್ತಿದ್ದೀರಿ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ವಿರೋಧ ಪಕ್ಷದ ಸದಸ್ಯರು ಧರಣಿ ಮಾಡುವುದನ್ನು, ಸಭಾತ್ಯಾಗ ಮಾಡುವುದನ್ನು, ಸದನದಲ್ಲಿ ಪ್ರತಿಭಟನೆ ಮಾಡುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಅದರ ಪ್ರಕಾರ ಪ್ರಜಾತಂತ್ರೀಯ ಮಾರ್ಗದಲ್ಲಿ ಇವತ್ತು ಕರ್ನಾಟಕದ ಐದು ಕೋಟಿ ಜನ ಇದನ್ನು ನೋಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ರೈತರ ಮೇಲೆ ಮಾರಣ ಹೋಮ ಮಾಡುತ್ತಿದ್ದೀರಿ. ಇವತ್ತು ಎರಡು ಲಕ್ಷ ಸಂಪಾದನೆ ಮಾಡಿ 40,000 ಕೊಡಬೇಕು. ನಮ್ಮನ್ನು ಹೊಂಚು ಹಾಕುತ್ತಿದ್ದೀರಿ. ಮೊದಲನೇ ಬಾರಿಗೆ ಇದನ್ನು ಕೊಟ್ಟಿದ್ದೀರಿ. ನಿಮ್ಮ ಫೈನಾನ್ಸ್ ಸೆಕ್ರೆಟರಿ ಯಾರು? ಯಾರನ್ನು ಕೇಳಿ ರೈತರ ಮೇಲೆ 40,000 ರೂಪಾಯಿ ಬಡ್ಡಿ ಹಾಕುತ್ತೀರಿ? ಎರಡು ಲಕ್ಷ ಸಂಪಾದನೆ ಮಾಡಿದ ರೈತ ಇವತ್ತು ಎಷ್ಟು ಕೊಡಬೇಕು?

ಶ್ರೀ ಜೆ.ಹೆಚ್. ಪಟೇಲ್ : ವಿರೋಧ ಮಾಡಲಿಕ್ಕೆ ನಮಗೆ ಅಭ್ಯಂತರವಿಲ್ಲ. ಆದರೆ ಮಧ್ಯೆ ಮಧ್ಯೆ ಹೀಗೆ ಎದ್ದು ಈ ರೀತಿ ಮಾಡುವುದು ಸದನಕ್ಕೆ ಗೌರವ ತರುವುದಿಲ್ಲ. ಇದು ಅವರಿಗೂ ಶೋಭೆ ಅಲ್ಲ, ಸದನಕ್ಕೂ ಶೋಭೆ ಅಲ್ಲ.

(ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು.)

ಶ್ರೀ ಸಿದ್ಧರಾಮಯ್ಯ :

6. ಈ ಹಿನ್ನೆಲೆಯಲ್ಲಿ ಸಂಯುಕ್ತರಂಗ ಸರ್ಕಾರವು ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳಡಿಯಲ್ಲಿ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಕುಡಿಯುವ ನೀರು, ಗ್ರಾಮೀಣ ರಸ್ತೆ ಮತ್ತು ವಸತಿಗಳಿಗೆ ವಿಶೇಷ ಆದ್ಯತೆ ನೀಡಿರುವುದನ್ನು ನಾವು ಸ್ವಾಗತಿಸಬೇಕು. ರಾಷ್ಟ್ರ ಎದುರಿಸುತ್ತಿರುವ ಈ ಸಮಸ್ಯೆಗಳನ್ನು ನಿವಾರಿಸಲು ರಾಜ್ಯ ಸರ್ಕಾರವೂ ಬದ್ಧವಾಗಿದ್ದು, ಈಗಾಗಲೇ ಈ ವಲಯಗಳಿಗೆ ಆದ್ಯತೆ ನೀಡಿರುವುದನ್ನು ನಾನು ಇಲ್ಲಿ ಸ್ಮರಿಸುತ್ತೇನೆ.

7. ಕೇಂದ್ರ ಹಣಕಾಸು ಸಚಿವರು ಮಂಡಿಸಿದ 1997-98ರ ಮುಂಗಡ ಪತ್ರವು ಸಮಾಜದ ಎಲ್ಲಾ ವರ್ಗದ ಜನರಲ್ಲಿ ಭರವಸೆ ಮೂಡಿಸಿದೆ. ಇದು ಸುಧಾರಣೆಯ ಹಾದಿಯಲ್ಲಿ ಇಟ್ಟ ದೊಡ್ಡ

ಹೆಚ್ಚೆಯಾಗಿದ್ದು ಉದ್ಯೋಗ, ಅಭಿವೃದ್ಧಿ ಮತ್ತು ಬಂಡವಾಳ ಹೂಡಿಕೆಯ ಬೆಳವಣಿಗೆಗೆ ವೇಗವರ್ಧಕವಾಗುವ ನಿರೀಕ್ಷೆ ಇದೆ. ಮಾನವ ಅಭಿವೃದ್ಧಿಯಲ್ಲಿ ಆರ್ಥಿಕ ಬೆಳವಣಿಗೆಯ ಪಾತ್ರ ಪ್ರಮುಖವಾಗಿದೆ. ನಿಜ; ಆದರೆ, ಬಡವರೇ ಹೆಚ್ಚಾಗಿರುವ ಈ ದೇಶದಲ್ಲಿ ಆರ್ಥಿಕ ಅಭಿವೃದ್ಧಿಯ ಫಲಶ್ರುತಿಗಳು ಎಲ್ಲರಿಗೂ ಸಮಾನವಾಗಿ ವಿತರಣೆಯಾಗುವಂತೆ ಸರ್ಕಾರ ಕಾಳಜಿ ವಹಿಸಬೇಕು. ಕೇಂದ್ರ ಬಜೆಟಿನಲ್ಲಿ ಸಾಮಾಜಿಕ ವಲಯಕ್ಕೆ ಸೇರುವ ಶಿಕ್ಷಣ, ಪೌಷ್ಟಿಕ ಆಹಾರ, ಆರೋಗ್ಯ ಮತ್ತು ಗ್ರಾಮೀಣ ಮೂಲ ಸೌಲಭ್ಯಗಳಿಗೆ ಕೇಂದ್ರ ಸರ್ಕಾರವು ತನ್ನ ಶಕ್ತ್ಯಾನುಸಾರ ನೆರವನ್ನು ನೀಡಿದೆ. ಆದರೂ ಈ ವಲಯದಲ್ಲಿ ಉಳಿಯಬಹುದಾದ ಕೊರತೆಯನ್ನು ಭರಿಸಲು ರಾಜ್ಯ ಸರ್ಕಾರವು ಆದ್ಯತೆ ನೀಡುತ್ತದೆ.

8. ಸಂಯುಕ್ತರಂಗ ಸರ್ಕಾರವು "ತ್ವರಿತ ಫಲದಾಯಕ ನೀರಾವರಿ ಯೋಜನೆ"ಯನ್ನು (ಆಕ್ಸಿಲರೇಟೆಡ್ ಇರಿಗೇಷನ್ ಬೆನಿಫಿಟ್ ಪ್ರೋಗ್ರಾಮ್) (ಎಐಬಿಪಿ) ಜಾರಿಗೊಳಿಸಿರುವುದಕ್ಕಾಗಿ ಮತ್ತು 'ಗ್ರಾಮೀಣ ಮೂಲ ಸೌಲಭ್ಯ ನಿಧಿ'ಯನ್ನು (ಆರ್‌ಐಡಿಎಫ್) ಬಲಪಡಿಸಿರುವುದಕ್ಕಾಗಿ ನಾನು ಸಂಯುಕ್ತರಂಗ ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಎರಡು ಕಾರ್ಯಕ್ರಮಗಳಿಂದ ಗ್ರಾಮೀಣ ವಲಯ ಮತ್ತು ರೈತ ಸಮುದಾಯಗಳು ನೇರ ಫಲ ಪಡೆಯುತ್ತವೆ. ಆದರೆ, ಈ ಯೋಜನೆಗಳಿಗೆ ಕೇಂದ್ರ ನೀಡುವ ನೆರವನ್ನು ರಾಜ್ಯ ಸರ್ಕಾರಗಳು ಬಳಕೆ ಮಾಡಿಕೊಳ್ಳುವಲ್ಲಿ ನಾನಾ ಕಾರಣಗಳಿಂದಾಗಿ ವಿಳಂಬವಾಗುತ್ತಿದೆ. ಈ ಕಾರ್ಯಕ್ರಮಗಳು ಸಾಲ ಆಧಾರಿತವಾಗಿದ್ದು ರಾಜ್ಯ ಸರ್ಕಾರಗಳು ತಮ್ಮ ಪಾಲಿನ ವಂತಿಗೆ ನೀಡಬೇಕಾಗಿರುತ್ತದೆ. ಇವುಗಳಿಗೆ ರಿಯಾಯಿತಿ ನೀಡುವುದರ ಜೊತೆಗೆ ಇತರ ಷರತ್ತುಗಳನ್ನು ಸಡಿಲಗೊಳಿಸಬೇಕೆಂದು ನಾನು ಕೇಂದ್ರ ಸರ್ಕಾರವನ್ನು ವಿನಂತಿಸುತ್ತೇನೆ.

ಕೇಂದ್ರ-ರಾಜ್ಯ ಹಣಕಾಸು ಸಂಬಂಧ

9. ರಾಜ್ಯಗಳಿಗೆ ಸಂಪನ್ಮೂಲಗಳನ್ನು ವರ್ಗಾಯಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿಲುವು ಅಭಿನಂದನೀಯವಾಗಿದೆ. ಭಾರತ ಸರ್ಕಾರವು ರಾಜ್ಯ ಹತ್ತನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ತೆರಿಗೆಗಳ ಹಂಚಿಕೆಗಾಗಿ ಸಿಂಗಲ್ ಡಿವಿಷಬಲ್ ಪೂಲ್ ವ್ಯವಸ್ಥೆಯನ್ನು ಜಾರಿಗೆ ತಂದಿರುವುದು ಸಂತಸದ ವಿಷಯ. ಇದರಲ್ಲಿ ಕನಿಷ್ಠ ಶೇಕಡಾ 40 ರಷ್ಟಾದರೂ ತೆರಿಗೆ ರಾಜ್ಯಗಳಿಗೆ ವರ್ಗಾವಣೆಯಾಗಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದೆ. ಆದರೆ ಹತ್ತನೇ ಹಣಕಾಸು ಆಯೋಗದ ಶಿಫಾರಸಿನಂತೆ ಕೇಂದ್ರದ ಸಂಪನ್ಮೂಲಗಳ ಶೇಕಡ 29 ರಷ್ಟನ್ನು ರಾಜ್ಯಗಳಿಗೆ ವರ್ಗಾಯಿಸಲು ಕೇಂದ್ರ ಹಣಕಾಸು ಸಚಿವರು ಒಪ್ಪಿರುವುದರಿಂದ ರಾಜ್ಯಗಳ ಪಾಲಿನಲ್ಲಿ ತುಸು ಏರಿಕೆಯಾಗಿದ್ದು ಸ್ವಲ್ಪ ಮಟ್ಟಿನ ಪರಿಹಾರ ದೊರಕಿದಂತಾಗಿದೆ. ರಾಜ್ಯಗಳ ಪಾಲನ್ನು ಸೂಕ್ತವಾಗಿ ಹೆಚ್ಚಿಸಲು ಒಂದು ಸರ್ವಸಮ್ಮತ ನಿರ್ಧಾರಕ್ಕೆ ಬರುವುದಕ್ಕಾಗಿ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಬೇಕೆಂದು ನಾನು ಭಾರತ ಸರ್ಕಾರವನ್ನು ಒತ್ತಾಯಿಸುತ್ತೇನೆ. ಈ ನಿಟ್ಟಿನಲ್ಲಿ ಸಂವಿಧಾನ ತಿದ್ದುಪಡಿ ವಿಧೇಯಕವನ್ನು ರೂಪಿಸುವುದಕ್ಕೆ ಮುಂಚೆ ಈ ವಿಷಯದ ಬಗ್ಗೆ ಚರ್ಚಿಸಲು ಕೇಂದ್ರ ಹಣಕಾಸು ಸಚಿವರು ಒಪ್ಪಿರುವುದನ್ನು ನಾನು ಸ್ವಾಗತಿಸುತ್ತೇನೆ.

10. ಸಾಮಾನ್ಯ ಕನಿಷ್ಠ ಕಾರ್ಯಕ್ರಮದನ್ವಯ ರಾಜ್ಯಕ್ಕೆ ಹೆಚ್ಚುವರಿ ಮೊತ್ತ ದೊರಕಿದೆ. ಆದರೆ ಮಾಮೂಲು ಕೇಂದ್ರ ಯೋಜನೆಗಳ ನೆರವಿನ ಮೊತ್ತ ಕಳೆದ ಎರಡು ವರ್ಷಗಳಿಂದ ಏರಿಕೆಯಾಗದೆ

ಹಾಗೆ ಉಳಿದಿದೆ. ಕೇಂದ್ರದ ಆದಾಯದಲ್ಲಿ ಆಗುವ ಸರಾಸರಿ ಬೆಳವಣಿಗೆಗೆ ಅನುಗುಣವಾಗಿ ರಾಜ್ಯಕ್ಕೆ ವಾಡಿಕೆಯಂತೆ ದೊರೆಯುವ ಕೇಂದ್ರ ಯೋಜನಾ ನೆರವನ್ನು ಕೂಡಾ ವರ್ಷಕ್ಕೆ ಕನಿಷ್ಠ ಶೇಕಡಾ 15 ರಿಂದ 16ರಷ್ಟು ಹೆಚ್ಚಿಸಬೇಕೆಂದು ಕೋರುತ್ತೇನೆ.

11. ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಸಂಪನ್ಮೂಲಗಳ ಸಮೇತ ರಾಜ್ಯಗಳಿಗೆ ವರ್ಗಾಯಿಸಲು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಕೇಂದ್ರ ಪ್ರಾಯೋಜಿತ ಯೋಜನೆಗಳಿಗಾಗಿ ಈಗ ನೀಡುತ್ತಿರುವ ಹಣವಲ್ಲಿ ಕನಿಷ್ಟ ಶೇಕಡಾ 80ರಷ್ಟನ್ನಾದರೂ ಅನುದಾನದ ರೂಪದಲ್ಲಿ ವರ್ಗಾಯಿಸಬೇಕೆಂದು ನಾನು ವಿನಂತಿಸುತ್ತೇನೆ.

12. ರಾಜ್ಯಗಳ ಋಣ ಪರಿಹಾರ ಯೋಜನೆ ಹಾಗೂ ಅವುಗಳ ವಿತ್ತೀಯ ನಿರ್ವಹಣೆ ಒಂದಕ್ಕೊಂದು ಪೂರಕವಾಗಿರಬೇಕೆಂದು ಹತ್ತನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ. ಆದರೂ ರಾಜ್ಯಸರ್ಕಾರಗಳ ಸಾಲದ ಹೊರೆ ಹೆಚ್ಚುತ್ತಿರುವುದು ಗಂಭೀರ ವಿಷಯ. ಕೇಂದ್ರ ನೆರವಿನ ರೀತಿ ನೀತಿಗಳಲ್ಲಿ ಮಾರ್ಪಾಡು ಮಾಡಿ ರಾಜ್ಯಗಳ ಸಾಲದ ಹೊರೆಯನ್ನು ಕಡಿಮೆ ಮಾಡಬಹುದಾಗಿದೆ. ಈಗ ರಾಜ್ಯಗಳಿಗೆ ಕೇಂದ್ರವು ಸಾಲ ಮತ್ತು ಅನುದಾನಗಳ ರೂಪದಲ್ಲಿ ಕೊಡುತ್ತಿರುವ ನೆರವು 70:30ರ ಅನುಪಾತದಲ್ಲಿದೆ. ಇನ್ನು ಮುಂದೆ ಸಾಲ ಮತ್ತು ಅನುದಾನಗಳನ್ನು 50:50ರ ಅನುಪಾತದಲ್ಲಿ ಒದಗಿಸುವುದು ಅವಶ್ಯಕ. ಹಿಂದಿನ ವರ್ಷಗಳಲ್ಲಿ ಬಹುತೇಕ ರಾಜ್ಯಗಳ ಯೋಜನಾ ವೆಚ್ಚದ 'ರೆವಿನ್ಯೂ ಕಾಂಪೊನೆಂಟ್' ಶೇಕಡ 30 ರಷ್ಟಿತ್ತು. ಈಗ, ಅದು ಶೇಕಡಾ 50ರ ಸಮೀಪದಲ್ಲಿ ಇರುವುದರಿಂದ ಈ ಬದಲಾವಣೆ ಅತ್ಯಂತ ಅವಶ್ಯಕ.

13. ಸೇವಾ ವಲಯದಲ್ಲಿ ಭಾರತವು ದೃಢವಾದ ಪ್ರಗತಿ ಸಾಧಿಸಿರುವುದು ಗಮನಾರ್ಹ ಸಂಗತಿ. ಎಂಟನೇ ಯೋಜನಾ ಅವಧಿಯಲ್ಲಿ ಸೇವಾ ವಲಯದ ಸರಾಸರಿ ಬೆಳವಣಿಗೆ ಪ್ರಮಾಣ ಶೇ. 7.3ರಷ್ಟಿತ್ತು. ದೇಶಿಯ ಒಟ್ಟು ಉತ್ಪಾದನೆಯಲ್ಲಿ ಇದರ ಪಾಲು ಶೇ. 40ರಷ್ಟಿದೆ. ಕೇಂದ್ರ ಸರ್ಕಾರವು, ಇದನ್ನು ಗಮನಿಸಿ ಈ ಸೇವೆಗಳ ಮೇಲೆ ತೆರಿಗೆಯನ್ನು ಹಾಕಿತು. ಈ ವರ್ಷದ ಬಜೆಟನಲ್ಲಿ ಸೇವಾ ತೆರಿಗೆಯನ್ನು ಹೆಚ್ಚುವರಿ ಆದಾಯಮೂಲವಾಗಿ ಪರಿಗಣಿಸಿ ಅನೇಕ ಸೇವೆಗಳಿಗೆ ಇದನ್ನು ವಿಸ್ತರಿಸಲಾಗಿದೆ. ಇದೇ ಮಾದರಿಯಲ್ಲಿ ರಾಜ್ಯಗಳ ವ್ಯಾಪ್ತಿಗೆ ಬರುವ ಹಲವು ಸೇವೆಗಳಿಗೆ ಸೇವಾ ತೆರಿಗೆಯನ್ನು ವಿಧಿಸುವುದಕ್ಕೆ ರಾಜ್ಯಗಳಿಗೆ ಅವಕಾಶವಿರಬೇಕು. ಇದು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಚರ್ಚಿಸಬೇಕಾದ ವಿಷಯವಾಗಿದೆ. ರಾಜ್ಯ ಸರ್ಕಾರಗಳು ಕ್ರಮೇಣ ಮೌಲ್ಯವರ್ಧಿತ ತೆರಿಗೆ ಪದ್ದತಿಯನ್ನು ಅಳವಡಿಸಿಕೊಳ್ಳಬೇಕಾದರೆ, ಸೇವಾ ಕ್ಷೇತ್ರದಲ್ಲಿ ಆಗುವ ಮೌಲ್ಯವರ್ಧಿಕೆಯ ಮೇಲೆ ತೆರಿಗೆಯನ್ನು ವಿಧಿಸಲು ಅನುಮತಿ ನೀಡುವುದು ಸೂಕ್ತ.

14. ಕೊನೆಯದಾಗಿ ರಾಜ್ಯ ಸರ್ಕಾರಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಮಾರುಕಟ್ಟೆ ಸಾಲಗಳನ್ನು ಎತ್ತುವ ಬಗ್ಗೆ ನಾನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ. ರಾಜ್ಯ ಸರ್ಕಾರಗಳು ಮುಕ್ತ ಮಾರುಕಟ್ಟೆಯಲ್ಲಿ ಎತ್ತುವ ಸಾಲದ ಪ್ರಮಾಣವನ್ನು ಈಗ ಯೋಜನಾ ಆಯೋಗವು ನಿರ್ಧರಿಸುತ್ತದೆ.

ಆದರೆ ಈಗ ಇದನ್ನು ಯಾವುದೇ ನಿರ್ದಿಷ್ಟ ಮಾನದಂಡಗಳನ್ನು ಆಧರಿಸದೆ ನಿರ್ಧರಿಸಲಾಗುತ್ತಿದೆ. ರಾಜ್ಯಗಳ ಆರೋಗ್ಯಕರ ಹಣಕಾಸು ಸ್ಥಿತಿಗತಿ ಮತ್ತು ಸಾಲಮರು ಪಾವತಿ ಶಕ್ತಿಗೆ ಅನುಗುಣವಾಗಿ ಈ ಮಿತಿಯನ್ನು ನಿಗದಿಗೊಳಿಸಬೇಕೆಂದು ರಾಜ್ಯ ಸರ್ಕಾರವು ಸಲಹೆ ಮಾಡುತ್ತದೆ. ಸಾರ್ವಜನಿಕ ಹಣಕಾಸನ್ನು ಉತ್ತಮವಾಗಿ ನಿರ್ವಹಿಸಲು ಒಂದು ಒಳ್ಳೆಯ ವಿಧಾನವನ್ನು ಅಳವಡಿಸಿಕೊಳ್ಳಲು ರಾಜ್ಯಗಳಿಗೆ ಇದರಿಂದ ಉತ್ತೇಜನ ದೊರೆಯುತ್ತದೆ.

ರಾಜ್ಯ ಹಣಕಾಸು ಆಯೋಗ

15. ರಾಜ್ಯ ಹಣಕಾಸು ಆಯೋಗವು ಅಂತಿಮ ವರದಿಯನ್ನು ಸಲ್ಲಿಸಿದೆ. ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯದ 'ಸಾಲವಲ್ಲದ ಸ್ವಂತ ಸ್ಥೂಲ ಆದಾಯ'ದಲ್ಲಿ (ನಾನು ಲೋನ್ ಓನ್ ಗ್ರಾಸ್ ರೆವಿನ್ಯೂ) ಶೇಕಡಾ 36ರಷ್ಟನ್ನು ವರ್ಗಾಯಿಸುವಂತೆ ಮಾಡಿರುವ ಶಿಫಾರಸ್ಸನ್ನು ಒಪ್ಪಿಕೊಳ್ಳಲಾಗಿದ್ದು. ಇದನ್ನು 1-4-1997 ರಿಂದ ಜಾರಿಗೆ ತರಲು ಉದ್ದೇಶಿಸಿದ್ದೇವೆ. ಮುಂದಿನ ಐದು ವರ್ಷಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವೆ ಶಿಫಾರಸ್ಸಿನಂತೆ 85:15ರ ಅನುಪಾತದ ಹಂಚಿಕೆಯ ಗುರಿಯನ್ನು ಮುಟ್ಟಲಾಗುವುದು.

16. ಈ ಕ್ರಮಗಳಿಂದಾಗಿ ಸ್ಥಳೀಯ ಸಂಸ್ಥೆಗಳ ಅದರಲ್ಲೂ ನಗರ ಸ್ಥಳೀಯ ಸಂಸ್ಥೆಗಳ ಆದಾಯ ಮುಂದಿನ ಐದು ವರ್ಷಗಳಲ್ಲಿ ಗಣನೀಯವಾಗಿ ಸುಧಾರಿಸಲಿದೆ. ಆದಾಗ್ಯೂ ಈ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಯನ್ನು ಪರಿಷ್ಕರಿಸುವ ಮೂಲಕ, ವಾಸ್ತವಿಕವಾದ ಬಳಕೆದಾರ ಶುಲ್ಕವನ್ನು ಸಂಗ್ರಹಿಸುವ ಮೂಲಕ ಹಾಗೂ ತಮ್ಮ ನಿಯಂತ್ರಣದಲ್ಲಿರುವ ಆದಾಯ ಮೂಲಗಳನ್ನು ಬಳಸಿಕೊಳ್ಳುವ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುವುದು ಅತ್ಯವಶ್ಯವಾಗಿದೆ.

ಎಂಟನೇ ಯೋಜನಾವಧಿ - ಪ್ರಗತಿ ಮತ್ತು ಸಮಸ್ಯೆಗಳು

17. 1997-98ನೇ ವರ್ಷದಲ್ಲಿ ನಾವು ಒಂಬತ್ತನೇ ಯೋಜನೆಯ ಹೊಸ್ತಿಲಿನಲ್ಲಿದ್ದೇವೆ. ಹೀಗಾಗಿ ಕಳೆದ ಐದು ವರ್ಷಗಳಲ್ಲಿ ನಾವು ಸಾಧಿಸಿರುವ ಪ್ರಗತಿಯ ಅವಲೋಕನ ಮಾಡಲು ಮತ್ತು ಮುಂಬರುವ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡಲು ಇದು ಸಕಾಲ. ಜನಜೀವನದ ಗುಣಮಟ್ಟವು ಪ್ರಗತಿಯನ್ನು ಸೂಚಿಸುವ ಅತ್ಯುತ್ತಮ ಮಾನದಂಡ. ತಲಾ ಆದಾಯ, ಸಾಕ್ಷರತೆ, ಆರೋಗ್ಯ ಮತ್ತು ಪೌಷ್ಠಿಕತೆ, ಶಿಶುಮರಣ ಪ್ರಮಾಣ ಇತ್ಯಾದಿ ಮೂಲ ಮಾನದಂಡಗಳಿಂದ ಜೀವನದ ಗುಣಮಟ್ಟವನ್ನು ನಿರ್ಧರಿಸಲಾಗುತ್ತದೆ.

18. ಕರ್ನಾಟಕದಲ್ಲಿ 1991 ರಿಂದ 1996ರ ಅವಧಿಯಲ್ಲಿ ಪುರುಷರ ಸರಾಸರಿ ಜೀವಿತ ಆಯಸ್ಸು 62 ವರ್ಷದಿಂದ 64 ವರ್ಷಗಳಿಗೇರಿದೆ. ಅದೇ ವೇಳೆ ಮಹಿಳೆಯರ ಜೀವತಾವಧಿ 63 ರಿಂದ 65 ವರ್ಷಕ್ಕೆ ಏರಿದೆ. ಶಿಶುಮರಣ ಸಂಖ್ಯೆ 1991ರಲ್ಲಿ ಪ್ರತಿ ಸಾವಿರಕ್ಕೆ 77 ಇದ್ದು 1996ರಲ್ಲಿ ಪ್ರತಿ ಸಾವಿರಕ್ಕೆ 62ಕ್ಕೆ ಇಳಿದಿದೆ. 1991ರಲ್ಲಿ ಶೇ. 56.04 ಇದ್ದ ವಯಸ್ಕರ ಸಾಕ್ಷರತೆ 1996ರಲ್ಲಿ ಶೇ. 63.42ಕ್ಕೆ ಏರಿದೆ. 1991ರಲ್ಲಿ ಪ್ರೌಢಶಾಲಾ ಮಕ್ಕಳ ಸಂಖ್ಯೆ 10.5 ಲಕ್ಷ ಇದ್ದು 1996ರಲ್ಲಿ 14.6 ಲಕ್ಷಕ್ಕೆ ಹೆಚ್ಚಿದೆ.

1992-93ರಲ್ಲಿ 2272 ರೂ.ಗಳಷ್ಟಿದ್ದ ತಲಾ ಆದಾಯವು 1996-97ರಲ್ಲಿ 2669 ರೂ.ಗಳಿಗೆ ಏರುವ ನಿರೀಕ್ಷೆ ಇದೆ.

19. ಮೂಲ ಶಿಕ್ಷಣ ನೀಡುವ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟವಾಗಿದೆ. ಈ ದಿಕ್ಕಿನಲ್ಲಿ ನಮ್ಮ ಸಾಧನೆಯೇ ಇದನ್ನು ದೃಢೀಕರಿಸುತ್ತದೆ. ಎಂಟನೇ ಯೋಜನೆಯ ಅವಧಿಯಲ್ಲಿ ನೇಮಕ ಮಾಡಿಕೊಂಡ ಶಿಕ್ಷಕರ ಸಂಖ್ಯೆ 57,000 ಆಗಿದೆ. ಇದರಲ್ಲಿ ನಮ್ಮ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ನೇಮಿಸಿರುವ ಪ್ರಾಥಮಿಕ ಶಿಕ್ಷಕರ ಸಂಖ್ಯೆ 26,500 ಆಗಿದೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ 2137 ಕಿರಿಯ ಪ್ರಾಥಮಿಕ ಶಾಲೆಗಳನ್ನು ಮತ್ತು 2,306 ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ. ಕಳೆದ ಎರಡು ವರ್ಷಗಳಲ್ಲಿ 12,900 ಶಾಲಾ ಕೊಠಡಿಗಳನ್ನು ನಿರ್ಮಿಸಿದ್ದು ಇದು ಒಂದು ದಾಖಲೆಯಾಗಿದೆ.

20. ಒಂಬತ್ತನೇ ಯೋಜನೆಯ ಅವಧಿಯಲ್ಲಿ 6 ರಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳನ್ನೂ ಶಾಲೆಗೆ ದಾಖಲು ಮಾಡಿಸುವ ಹಾಗೂ ಶೇಕಡಾ 90 ರಷ್ಟು ಹಾಜರಾತಿ ಸಾಧಿಸುವ ನಂಬಿಕೆ ನಮಗಿದೆ. ಇದರಿಂದ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ನಾಲ್ವರು ಉಪಾಧ್ಯಾಯರಿರುವಂತಹ ಒಂದು ಪ್ರಾಥಮಿಕ ಶಾಲೆ, ಎರಡು ಕಿಲೋಮೀಟರನೊಳಗೆ ಆರು ಜನ ಉಪಾಧ್ಯಾಯರಿರುವಂತಹ ಒಂದು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿಯೊಬ್ಬ ಉಪಾಧ್ಯಾಯರಿಗೂ ಒಂದು ತರಗತಿ ಕೊಠಡಿ ಇರುವಂಥಹ ಚೇತೋಹಾರಿ ಸನ್ನಿವೇಶ ಸೃಷ್ಟಿಯಾಗುತ್ತದೆ.

21. ಇದೇ ರೀತಿ ನಮ್ಮ ಸರ್ಕಾರವು **'ಎಲ್ಲರಿಗೂ ಆರೋಗ್ಯ'** ಒದಗಿಸುವ ಗುರಿಯನ್ನು ಸಾಧಿಸಲು ಶ್ರಮಿಸುತ್ತಿದೆ. ಕಳೆದ ಎರಡು ವರ್ಷಗಳಲ್ಲಿ, 100ಕ್ಕೂ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು 300 ಉಪ ಆರೋಗ್ಯ ಕೇಂದ್ರಗಳನ್ನು ಆರಂಭಿಸಲಾಗಿದೆ. ಎಲ್ಲ ಜನರಿಗೆ ವೈದ್ಯಕೀಯ ಸೌಕರ್ಯ ದೊರೆಯುವಂತೆ ಮಾಡಲು ತಾಲ್ಲೂಕು ಮತ್ತು ಗ್ರಾಮೀಣ ಆಸ್ಪತ್ರೆಗಳಿಗೆ ಸರ್ಕಾರ ಸುಮಾರು 2500 ವೈದ್ಯರನ್ನು ನೇಮಕ ಮಾಡಿದೆ.

22. ಕರ್ನಾಟಕ ತನ್ನ ಜನರಿಗೆ ಉತ್ತಮ ಗುಣಮಟ್ಟದ ಜೀವನ ಕಲ್ಪಿಸುವಲ್ಲಿ ಒಳ್ಳೆಯ ಸ್ಥಾನಗಳಿಸಿದೆ. ನಮ್ಮ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ಸಾಮಾಜಿಕ ವಲಯಕ್ಕೆ ಗಣನೀಯ ಪ್ರಮಾಣದಲ್ಲಿ ಮಾಡಿರುವ ವೆಚ್ಚದ ನೇರ ಫಲ ಇದಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕುಡಿಯುವ ನೀರಿಗಾಗಿ ಮಾಡಿರುವ ವೆಚ್ಚ 176 ಕೋಟಿ ರೂ.ಗಳಿಂದ 240 ಕೋಟಿ ರೂ.ಗಳಿಗೆ ಹೆಚ್ಚಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕಾಗಿ ಮಾಡಿರುವ ವೆಚ್ಚ 385 ಕೋಟಿ ರೂ.ಗಳಿಂದ 481 ಕೋಟಿ ರೂ.ಗಳಿಗೆ ಏರಿದೆ. ಪ್ರಾಥಮಿಕ ಶಿಕ್ಷಣದ ವೆಚ್ಚ 1375 ಕೋಟಿ ರೂ. ಗಳಿಂದ 1826 ಕೋಟಿ ರೂ.ಗಳಿಗೆ ಏರಿದೆ.

23. ಹಾಗೆಂದ ಮಾತ್ರಕ್ಕೆ ರಾಜ್ಯದಲ್ಲಿ ಸಮಸ್ಯೆಗಳೇ ಇಲ್ಲ ಎಂದಲ್ಲ. ನಮ್ಮ ಆರ್ಥಿಕ ಭದ್ರತೆ ಮತ್ತು ವಿತ್ತೀಯ ನಿರ್ವಹಣೆಗೆ ಎರಡು ಮುಖ್ಯ ಸವಾಲುಗಳು ಎದುರಾಗಿದ್ದು ನಾವೀಗ ಇದನ್ನು ತೀವ್ರವಾಗಿ ಗಮನಿಸಬೇಕಾಗಿದೆ. ಮೊದಲನೆಯದು ಮೂಲ ಸೌಲಭ್ಯ ವಲಯ. ಇದರಲ್ಲಿ ವಿದ್ಯುಚ್ಛಕ್ತಿ, ಸಾರಿಗೆ ಮತ್ತು ಸಂಪರ್ಕ ಒಳಗೊಂಡಿವೆ. ಅಸಮರ್ಪಕ ವಿದ್ಯುತ್ ಪೂರೈಕೆ ರಾಜ್ಯದ ಅಭಿವೃದ್ಧಿಗೆ ಅಡ್ಡಿಯಾಗಿದೆ. ಸಾರಿಗೆ ಸೌಲಭ್ಯಗಳ ಕೊರತೆ ಮತ್ತು ರಸ್ತೆಗಳ ಅಸಮರ್ಪಕ ನಿರ್ವಹಣೆ ಕೂಡ ರಾಜ್ಯದ ಆರ್ಥಿಕ

ಬೆಳವಣಿಗೆಗೆ ಒಂದು ದೊಡ್ಡ ಅಡಚಣೆಯಾಗಿದೆ. ನಗರ ಮತ್ತು ಪಟ್ಟಣಗಳ ನೈರ್ಮಲ್ಯ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸದಿರುವುದೂ ಸಹ ಒಂದು ಸಮಸ್ಯೆಯಾಗಿದೆ.

24. ಸಂಬಳ, ಪಿಂಚಣಿ, ಸಹಾಯಾನುದಾನ ಹಾಗೂ ಸಬ್ಸಿಡಿಗಳಿಗಾಗಿ ಸರ್ಕಾರ ಮಾಡುತ್ತಿರುವ ವೆಚ್ಚ ತೀವ್ರವಾಗಿ ಹೆಚ್ಚುತ್ತಿರುವುದು ನಮ್ಮ ಎರಡನೇ ದೊಡ್ಡ ಸಮಸ್ಯೆ. ಇವು ಮೂಲ ಸೌಲಭ್ಯ ಮತ್ತು ಇತರ ಅಭಿವೃದ್ಧಿ ಚಟುವಟಿಕೆಯುಗಳಿಗೆ ದೊರಕಬೇಕಾದ ಸಂಪನ್ಮೂಲಗಳನ್ನು ಕಬಳಿಸುತ್ತಿವೆ. ರಾಜ್ಯದ ಆದಾಯದಲ್ಲಿ ಸಂಬಳ, ಪಿಂಚಣಿ, ಸಹಾಯಾನುದಾನ ಮತ್ತು ಸಬ್ಸಿಡಿಗಳಿಗಾಗಿ ಸರ್ಕಾರ ಮಾಡುತ್ತಿರುವ ವೆಚ್ಚದ ಶೇಕಡಾ ಪ್ರಮಾಣ 1990-91ರಿಂದ 1996-97ರ ಅವಧಿಯಲ್ಲಿ ಶೇ. 51 ರಿಂದ ಶೇ. 68ಕ್ಕೆ ಏರಿದೆ. ಪ್ರತಿಯಾಗಿ ಇತರ ಅಭಿವೃದ್ಧಿ ಬಾಬ್ತುಗಳಿಗೆ ದೊರಕಬಹುದಾದ ಸಂಪನ್ಮೂಲ ಶೇ. 49 ರಿಂದ ಶೇ. 32ಕ್ಕೆ ಇಳಿದಿದೆ.

25. ಹೀಗೆಂದ ಮಾತ್ರಕ್ಕೆ ಸಂಬಳದ ವೆಚ್ಚ ಸಂಪೂರ್ಣವಾಗಿ ಅಭಿವೃದ್ಧಿಯೇತರ ವೆಚ್ಚ ಎಂದರ್ಥ ವಲ್ಲ. ಸರ್ಕಾರದ ಸಂಬಳದಲ್ಲಿ ಹೆಚ್ಚಿನ ಪಾಲು ಶಾಲಾ ಉಪಾಧ್ಯಾಯರು, ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯ ಸಂಬಳಕ್ಕೆ ವೆಚ್ಚವಾಗುತ್ತಿದೆ. ಸುಮಾರು 5.98,000 ಸರ್ಕಾರಿ ನೌಕರರಲ್ಲಿ 1.72,000 ಉಪಾಧ್ಯಾಯರು ಮತ್ತು 69,000 ಮಂದಿ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯಾಗಿದೆ. ಆದಾಗ್ಯೂ ಅತ್ಯಗತ್ಯವಲ್ಲದ ಸಿಬ್ಬಂದಿ ಮೇಲಿನ ವೆಚ್ಚ ಹಾಗೂ ಕಡಿಮೆ ಪ್ರಾಮುಖ್ಯವುಳ್ಳ ಉದ್ದೇಶಗಳಿಗಾಗಿ ನೀಡುವ ಅನುದಾನ ಮತ್ತು ಸಹಾಯಧನವನ್ನು ಕಡಿಮೆ ಮಾಡಲೇಬೇಕಾಗಿದೆ.

26. ಈ ನಿಟ್ಟಿನಲ್ಲಿ ಮೊದಲನೆಯ ಕ್ರಮವಾಗಿ, ಸರ್ಕಾರಿ ಹುದ್ದೆಗಳ ಸಂಖ್ಯೆಯಲ್ಲಿ ಶೇ. 5 ರಷ್ಟು ಕಡಿತ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ರಚಿಸಲಾಗಿರುವ ಸಂಪುಟ ಉಪ ಸಮಿತಿಯು ಈ ಕಾರ್ಯದಲ್ಲಿ ಈಗಾಗಲೇ ನಿರತವಾಗಿದ್ದು ಇಷ್ಟರಲ್ಲೇ ಸರ್ಕಾರ ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ. ನಾನು, ಈ ಸಂದರ್ಭದಲ್ಲಿ, ಐದನೆಯ ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳ ಬಗ್ಗೆ ಕೇಂದ್ರ ಸರ್ಕಾರವು ತನ್ನ ಆಯವ್ಯಯದಲ್ಲಿ ಪ್ರಸ್ತಾಪಿಸಿರುವ ಬಗ್ಗೆ ಗಮನ ಸೆಳೆಯುತ್ತೇನೆ. ಕೇಂದ್ರ ಸರ್ಕಾರವು, ಈ ಶಿಫಾರಸ್ಸುಗಳನ್ನು ಒಪ್ಪಿಕೊಂಡಿದ್ದೇ ಆದರೆ, ಆದರಿಂದ ರಾಜ್ಯ ಸರ್ಕಾರಗಳ ಮೇಲೆ ನೇರ ಹಾಗೂ ತಕ್ಷಣದ ಪರಿಣಾಮ ಬೀರದಿದ್ದರೂ ಮುಂಬರುವ ದಿನಗಳಲ್ಲಿ ರಾಜ್ಯದ ಹಣಕಾಸು ಪರಿಸ್ಥಿತಿಯ ಮೇಲೆ ಇದರ ಪರಿಣಾಮ ಆಗುವ ಸಂಭವ ಇರುವುದರಿಂದ ಈ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುವುದಕ್ಕೂ ಮೊದಲು ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸಬೇಕೆಂದು ನಾನು ಕೇಂದ್ರ ಸರ್ಕಾರವನ್ನು ವಿನಂತಿಸುತ್ತೇನೆ.

27. ಇದೇ ರೀತಿಯಲ್ಲಿ ನಾವು ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ವಸ್ತುನಿಷ್ಠವಾಗಿ ನೋಡಬೇಕಿದೆ. ರಾಜ್ಯದಲ್ಲಿರುವ ಒಟ್ಟು 76 ಸರ್ಕಾರಿ ಉದ್ದಿಮೆಗಳಲ್ಲಿ 1994-95ರ ಅಂತ್ಯದ ವೇಳೆಗೆ ಹೂಡಿರುವ ಒಟ್ಟು ಬಂಡವಾಳ 9,000 ಕೋಟಿ ರೂ.ಗಳಿಗೂ ಹೆಚ್ಚಾಗಿತ್ತು. ಇದರಲ್ಲಿ 4100 ಕೋಟಿ ರೂಪಾಯಿಗಳನ್ನು ಷೇರು ಬಂಡವಾಳ ಮತ್ತು ಸಾಲದ ರೂಪದಲ್ಲಿ ರಾಜ್ಯ ಸರ್ಕಾರ ನೀಡಿದೆ. ಮಾರುಕಟ್ಟೆಯಲ್ಲಿ ಸರಾಸರಿ ಶೇಕಡಾ 12ರಷ್ಟು ಬಡ್ಡಿ ತೆತ್ತು ತಂದಿರುವ ಸಾಲದ ಹಣವನ್ನು ಈ ಉದ್ದಿಮೆಗಳಲ್ಲಿ ಬಂಡವಾಳವಾಗಿ ಹೂಡಿರುವುದನ್ನು ನಾವು ಇಲ್ಲಿ ವಿಶೇಷವಾಗಿ ಗಮನಿಸಬೇಕು. ಇದಕ್ಕೆ

ಪ್ರತಿಯಾಗಿ ಬಂಡವಾಳ ಹೂಡಿಕೆಯಿಂದ ಕೇವಲ ಶೇಕಡಾ 0.82ರಷ್ಟು ಆದಾಯ ಬರುತ್ತಿದ್ದು ಇದು ತೀರಾ ಕಡಿಮೆಯಾಗಿದೆ. ಹಟ್ಟಿ ಗೋಲ್ಡ್ ಮೈನ್ಸ್ ಲಿ., ಕೆಎಸ್‌ಐಐಡಿಸಿ, ಮತ್ತು ಕೆಎಸ್‌ಎಫ್‌ಸಿ ಯಂತಹ ಕೆಲವು ಲಾಭದಾಯಕ ಉದ್ದಿಮೆಗಳನ್ನು ಬಿಟ್ಟರೆ ಉಳಿದ ಉದ್ದಿಮೆಗಳಲ್ಲಿ ಹೂಡಿರುವ ಬಂಡವಾಳ ನಷ್ಟವನ್ನೇ ತರುತ್ತಿದೆ. 1995ರ ಮಾರ್ಚ್ ಅಂತ್ಯದ ವೇಳೆಗೆ 44 ಉದ್ದಿಮೆಗಳಿಂದ ಉಂಟಾದ ಒಟ್ಟು ನಷ್ಟವು 994 ಕೋಟಿ ರೂಪಾಯಿಗಳಾಗಿತ್ತು. ಇಪ್ಪತ್ತೊಂದು ಉದ್ದಿಮೆಗಳಲ್ಲಿ ಉಂಟಾದ ನಷ್ಟ ಪ್ರಮಾಣವು, ಆ ಉದ್ದಿಮೆಗಳ ಬಂಡವಾಳ ಹೂಡಿಕೆ, ಮೀಸಲು ನಿಧಿ ಮತ್ತು ಹೆಚ್ಚುವರಿ ನಿಧಿಗಳ ಒಟ್ಟು ಮೊತ್ತವನ್ನೇ ಮೀರಿದೆ.

28. ಆದ್ದರಿಂದ ಈ ಕ್ಷೇತ್ರದಲ್ಲಿ ದಿಟ್ಟ ಕ್ರಮಕೈಗೊಳ್ಳಬೇಕಾದ ಅಗತ್ಯ ಖಂಡಿತ ಇದೆ. ಒಂದೆಡೆ ಸರ್ಕಾರಿ ಉದ್ದಿಮೆಗಳನ್ನು ನಿರ್ವಹಿಸಲು ವಿಪರೀತ ಹಣ ವೆಚ್ಚವಾಗುತ್ತಿದ್ದರೆ ಇನ್ನೊಂದೆಡೆ ಹೂಡಿದ ಬಂಡವಾಳಕ್ಕೆ ಲಾಭವೇ ಇಲ್ಲದಂಥಹ ಪರಿಸ್ಥಿತಿ ಇದೆ. ರಾಜ್ಯದ ಸಂಪನ್ಮೂಲಗಳನ್ನು ಇವು ಬರಿದು ಮಾಡುತ್ತಿವೆ. ಸಾರ್ವಜನಿಕರಿಗೆ ಉಪಯುಕ್ತವಾಗುವಂತಹ ಉದ್ದಿಮೆಗಳನ್ನು ಇನ್ನೂ ಸ್ವಲ್ಪ ಕಾಲ ಸರ್ಕಾರವು ಮುಂದುವರೆಸಬೇಕಾದ ಆವಶ್ಯಕತೆಯೇನೋ ಇದೆ. ಆದರೆ ಗ್ರಾಹಕ ವಸ್ತುಗಳು ಮತ್ತು ಪ್ರಾಮುಖ್ಯವಲ್ಲದ ವಸ್ತುಗಳನ್ನು ತಯಾರಿಸುವ ಉದ್ದಿಮೆಗಳನ್ನು ಸರ್ಕಾರ ಮುಂದುವರಿಸುವುದರಲ್ಲಿ ಅರ್ಥವಿಲ್ಲ. ಆದುದರಿಂದ ಈ ವರ್ಷದಿಂದ ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಬಂಡವಾಳವನ್ನು ಹಿಂತೆಗೆದುಕೊಳ್ಳುವ (ಡಿಸ್‌ಇನ್‌ವೆಸ್ಟ್‌ಮೆಂಟ್) ಉದ್ದೇಶವನ್ನು ಹೊಂದಿದೆ. ಸಂಬಂಧಪಟ್ಟ ಇಲಾಖೆ ಗಳು ಈ ನಿಟ್ಟಿನಲ್ಲಿ ಶೀಘ್ರದಲ್ಲೇ ಕಾಲಮಿತಿ ಕ್ರಿಯಾಯೋಜನೆಯನ್ನು ಅಂತಿಮಗೊಳಿಸಲಿವೆ.

29. ಇಂಧನ ವಲಯದಲ್ಲಿ ಸರ್ಕಾರವು ವ್ಯಾಪಕ ಸುಧಾರಣೆಗಳನ್ನು ತರಲು ಬದ್ಧವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ಒಂದು ಕಾರ್ಯನೀತಿಯನ್ನು ಅಳವಡಿಸಿಕೊಂಡಿದೆ. ಈ ನೀತಿಯಲ್ಲಿ, ಇಂಧನ ವಲಯದಲ್ಲಿ ಖಾಸಗಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದು; ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕಂಪನಿ ಆಗಿ ಪರಿವರ್ತಿಸುವುದು ಹಾಗೂ ಧರ ನಿಯಂತ್ರಣ ಸಂಸ್ಥೆಯನ್ನು ರಚಿಸುವುದು ಸೇರಿದೆ. ಕೆ.ಇ.ಬಿ.ಯ ಕಾರ್ಯನಿರ್ವಹಣೆಯ ಸುಧಾರಣೆ ಬಗ್ಗೆ ಸಂಪುಟ ಉಪ ಸಮಿತಿಯು ಪರಿಶೀಲಿಸುತ್ತಿದೆ. ಕೆಇಬಿಯ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದೂ ಸೇರಿದಂತೆ ವಿದ್ಯುಚ್ಛಕ್ತಿ-ತಪಾಸಣಾ ಕಾರ್ಯವನ್ನು ಕೈಗೆತ್ತಿಕೊಳ್ಳುವ ತುರ್ತು ಅಗತ್ಯವಿದ್ದು ಈಗಾಗಲೆ ಈ ನಿಟ್ಟಿನಲ್ಲಿ ಕಾರ್ಯಾರಂಭ ಮಾಡಲಾಗಿದೆ.

30. ರಾಜ್ಯವು ಈವರೆಗೆ ನೀರಾವರಿ ವಲಯದಲ್ಲಿ ಸುಮಾರು 7000 ಕೋಟಿ ರೂಪಾಯಿಗಳ ಬಂಡವಾಳವನ್ನು ತೊಡಗಿಸಿದೆ. ಇದು, ನಮ್ಮ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಿದೆಯಾದರೂ ರಾಜ್ಯ ಸಂಪನ್ಮೂಗಳ ಮೇಲೆ ಹೆಚ್ಚಿನ ಭಾರವನ್ನು ಹೊರಿಸಿದೆ. ಸರ್ಕಾರವು ಕೃಷ್ಣಾಭಾಗ್ಯ ಜಲ ನಿಗಮದ ಮೂಲಕ ಬಂಡವಾಳ ಮಾರುಕಟ್ಟೆಯಲ್ಲಿ 689 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಈ ಹಣಕ್ಕೆ ಸರ್ಕಾರ ಹೆಚ್ಚಿನ ದರದಲ್ಲಿ ಬಡ್ಡಿ ತೆರುತ್ತಿದ್ದು ಇದರಿಂದ ಸರ್ಕಾರದ ಮೇಲೆ ಸಾಲದ ಹೊರೆ ಹೆಚ್ಚಾಗುತ್ತಿರುವುದನ್ನು ಗಮನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ನೀರಾವರಿ ವಲಯವು ಕನಿಷ್ಠಪಕ್ಷ ತನ್ನ ಸಾಮಾನ್ಯ ದುರಸ್ತಿ ಹಾಗೂ ನಿರ್ವಹಣೆ ವೆಚ್ಚವನ್ನಾದರೂ ಬಳಕೆದಾರರ ಮೇಲೆ 'ವಾಸ್ತವ ಬಳಕೆ ಕರ' ವನ್ನು ವಿಧಿಸುವ

ಮೂಲಕ, ಪಡೆಯಬೇಕೆಂಬುದು ನನ್ನ ಆಶಯ. ಈ ದಿಸೆಯಲ್ಲಿ ಈ ವರ್ಷ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ.

31. ಸರ್ಕಾರದ ಮಂಡಲಿ, ನಿಗಮ, ಕಂಪನಿ ಹಾಗೂ ಸಹಕಾರಿ ಸಂಸ್ಥೆಗಳು ಪಡೆಯುವ ಸಾಲಕ್ಕೆ ರಾಜ್ಯ ಸರ್ಕಾರ ಖಾತರಿಗಳನ್ನು (ಗ್ಯಾರಂಟಿ) ನೀಡುವುದು ಬಜೆಟ್ ವ್ಯಾಪ್ತಿಗೆ ಬಾರದಿರುವ ಆದರೆ ರಾಜ್ಯದ ಹಣಕಾಸಿನ ಮೇಲೆ ಬೀಳುವ ದೊಡ್ಡ ಹೊರೆಯಾಗಿದೆ. ಆದ್ದರಿಂದ ಇಂತಹ ಖಾತರಿ ನೀಡುವಿಕೆ, ಇತ್ಯಾದಿ ಪರೋಕ್ಷ ಜವಾಬ್ದಾರಿಗಳ ಮೇಲೆ ಆರ್ಥಿಕ ಶಿಸ್ತು ಮತ್ತು ಸಂಯಮವನ್ನು ತರುವುದು ಸೂಕ್ತ. ಈ ಸಂಬಂಧ ರಾಜ್ಯ ಸರ್ಕಾರವು, ಸರ್ಕಾರಿ ಖಾತರಿಗಳ ಮೇಲೆ ಮಿತಿಯನ್ನು ವಿಧಿಸುವ ಸಂಬಂಧ ಮಸೂದೆ ತರಲು ಉದ್ದೇಶಿಸಿದೆ.

ರಾಜ್ಯ ಸರ್ಕಾರದ ಹಣಕಾಸು ಪರಿಸ್ಥಿತಿ

32. ನಮ್ಮ ಸರ್ಕಾರ ಆರ್ಥಿಕ ದೃಢತೆಯನ್ನು ಕಾಯ್ದುಕೊಂಡು ಬಂದಿದೆ. ರಾಜ್ಯದ ನೇರ ಆದಾಯವು ಕಳೆದ ಐದು ವರ್ಷಗಳಲ್ಲಿ ಶೇಕಡಾ 16ರ ದರದಲ್ಲಿ ಏರಿದೆ. ಕರ್ನಾಟಕದ ರೆವಿನ್ಯೂ ಆದಾಯದ ಸಾಲ ಮರುಪಾವತಿ ಹೊಣೆಯು ಶೇಕಡಾ 15ರಷ್ಟಿದ್ದು ಇದು ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಾಗಿದ್ದು ಉತ್ತಮ ಹಣಕಾಸು ನಿರ್ವಹಣೆಯ ರಾಜ್ಯವೆಂದು ಗುರುತಿಸಲ್ಪಟ್ಟಿದೆ. ಎಂಟನೆಯ ಯೋಜನೆಯ ಸಂಪೂರ್ಣ ಅವಧಿಯಲ್ಲಿ ಕರ್ನಾಟಕ ರಾಜ್ಯವು ತನ್ನ ಬ್ಯಾಲೆನ್ಸ್ ಫ್ರಮ್ ಕರೆಂಟ್ ರೆವಿನ್ಯೂನಲ್ಲಿ ನಿರಂತವಾಗಿ ಧನಾತ್ಮಕ ಸಮತೋಲನವನ್ನು ಕಾಪಾಡಿಕೊಂಡು ಬಂದ ಕೆಲವೇ ರಾಜ್ಯಗಳಲ್ಲಿ ಒಂದಾಗಿದೆ. ಕರ್ನಾಟಕವನ್ನು ಒಂದು ಸದೃಢ ಹಣಕಾಸಿನ ಪ್ರಮುಖ ರಾಜ್ಯವೆಂದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಪರಿಗಣಿಸಿವೆ.

ಕರ್ನಾಟಕದ 1996-97ರ ಆರ್ಥಿಕ ಸ್ಥಿತಿ

33. ಈ ಸಾಲಿನಲ್ಲಿ ರಾಜ್ಯದ ಆರ್ಥಿಕ ಸ್ಥಿತಿ ಚೆನ್ನಾಗಿದೆ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ಕಳೆದ ವರ್ಷದ ಶೇಕಡಾ 5.6ಕ್ಕೆ ಹೋಲಿಸಿದರೆ ಈ ವರ್ಷ ಶೇಕಡಾ 5.8ರಷ್ಟು ದರದಲ್ಲಿ ಬೆಳವಣಿಗೆಯಾಗುವ ನಿರೀಕ್ಷೆ ಇದೆ. ಕೈಗಾರಿಕಾ ವಲಯದಲ್ಲಿ ಬೆಳವಣಿಗೆಯ ದರ ಶೇಕಡಾ 8.7ರಷ್ಟು ಇದ್ದು ಪ್ರೋತ್ಸಾಹದಾಯಕವಾಗಿದೆ. ಕೃಷಿ ವಲಯ ಕೂಡಾ ಶೇಕಡಾ 3.7ರ ದರದ ಒಳ್ಳೆಯ ಬೆಳವಣಿಗೆ ಸಾಧಿಸಿದೆ.

1996-97ನೇ ವಾರ್ಷಿಕ ಯೋಜನೆ

34. 1996-97ನೇ ಹಣಕಾಸು ವರ್ಷಕ್ಕೆ ರಾಜ್ಯ ಸರ್ಕಾರವು 4360 ಕೋಟಿ ರೂಪಾಯಿಗಳ ಯೋಜನಾ ವೆಚ್ಚದ ಅಂದಾಜು ಮಾಡಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಈ ಪೈಕಿ ರಾಜ್ಯ ಬಜೆಟನಲ್ಲಿ ನಿಗದಿ ಪಡಿಸಿರುವ ಮೊತ್ತ 3,359.45 ಕೋಟಿ ರೂಪಾಯಿಗಳು. ಕರ್ನಾಟಕ ವಿದ್ಯುತ್ ಮಂಡಲಿ, ಕರ್ನಾಟಕ ವಿದ್ಯುತ್ ನಿಗಮ, ಕೃಷ್ಣಭಾಗ್ಯ ಜಲ ನಿಗಮ ಮುಂತಾದ ಪ್ರಮುಖ ಸಾರ್ವಜನಿಕ

ವಲಯದ ಉದ್ಯಮ ಸಂಸ್ಥೆಗಳಿಗೆ ಆಂತರಿಕ ಹಾಗೂ ಬಜೆಟ್ ಹೊರಗಿನ ಸಂಪನ್ಮೂಲವಾಗಿ ನಿಗದಿ ಮಾಡಿರುವ ಮೊತ್ತ 1000.55 ಕೋಟಿ ರೂಪಾಯಿಗಳು.

35. ಆದರೆ ರಾಜ್ಯ ಸರ್ಕಾರವು ವಿದ್ಯುತ್ ಮತ್ತು ಸಾರಿಗೆ ವಲಯಗಳಿಗೆ ಸಬ್ಸಿಡಿ ರೂಪದಲ್ಲಿ ಬಜೆಟ್‌ನಲ್ಲಿ ಹೆಚ್ಚಿನ ಹಣ ಒದಗಿಸಬೇಕಾಯಿತು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಯೋಜನೇತರ ಲೆಕ್ಕದಲ್ಲಿ ರಾಜ್ಯ ಬಜೆಟ್‌ನಲ್ಲಿ ಒದಗಿಸಿದ ಮೊತ್ತ 186.35 ಕೋಟಿ ರೂ.ಗಳಿಂದ 471 ಕೋಟಿ ರೂ.ಗಳಿಗೆ ಏರುವ ನಿರೀಕ್ಷೆ ಇದೆ.

36. ಇದಲ್ಲದೆ ವಿದೇಶೀ ನೆರವಿನ ಯೋಜನೆಗಳಲ್ಲಿ ಲಭ್ಯವಿರುವ ಹಣ ಮರುಪಾವತಿ ಸೌಲಭ್ಯವನ್ನು ರಾಜ್ಯ ಸಂಪೂರ್ಣವಾಗಿ ಬಳಸಿಕೊಳ್ಳಲಾಗಲಿಲ್ಲ. ವಿದೇಶಿ ನೆರವಿನ ಯೋಜನೆಗಳ್ಲಲ್ಲಿ 435 ಕೋಟಿ ರೂ.ಗಳು ಬರುತ್ತದೆಂದು ನಿರೀಕ್ಷಿಸಲಾಗಿತ್ತು. ಆದರೆ ಈಗಿನ ಪರಿಷ್ಕೃತ ಅಂದಾಜಿನ ಪ್ರಕಾರ 262.55 ಕೋಟಿ ರೂ.ಗಳು ಮಾತ್ರ ದೊರೆಯುವ ಸಾಧ್ಯತೆ ಇದೆ.

37. ಇದಲ್ಲದೆ ಸ್ಟಾಂಪುಗಳು ಹಾಗೂ ನೋಂದಣಿ ಬಾಬಿನಲ್ಲಿ 140 ಕೋಟಿ ರೂ.ಗಳ ಕೊರತೆ ಉಂಟಾಗುವ ನಿರೀಕ್ಷೆ ಇದೆ. ಈ ಕೊರತೆಗೆ ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಸ್ತಿಯ ಬೆಲೆ ಕುಸಿತವಾದದ್ದು ಪ್ರಮುಖ ಕಾರಣವಾಗಿದೆ.

38. ಈ ಎಲ್ಲಾ ಕಾರಣಗಳಿಂದಾಗಿ ರಾಜ್ಯ ಸರ್ಕಾರವು ಯೋಜನಾ ವೆಚ್ಚಕ್ಕಾಗಿ ಬಜೆಟ್‌ನಲ್ಲಿ ನಿಗದಿಪಡಿಸಿದ್ದ 4360 ಕೋಟಿ ರೂ.ಗಳಿಗೆ ಬದಲಾಗಿ ಯೋಜನಾ ವೆಚ್ಚವನ್ನು 3700 ಕೋಟಿ ರೂ.ಗಳಿಗೆ ಇಳಿಸಬೇಕಾಯಿತು. ಹೀಗಾಗಿ ರಾಜ್ಯ ಬಜೆಟ್‌ನಲ್ಲಿ ಯೋಜನೆಗೆ ಒದಗಿಸಬೇಕೆಂದು ಅಂದಾಜು ಮಾಡಿದ್ದ ಮೊತ್ತವನ್ನು ಬಜೆಟ್‌ನಲ್ಲಿ ಯೋಜನೆಗೆ ಒದಗಿಸಬೇಕೆಂದು ಅಂದಾಜು ಮಾಡಿದ್ದ ಮೊತ್ತವನ್ನು 3359.45 ಕೋಟಿ ರೂ.ಗಳಿಂದ 2751.96 ಕೋಟಿ ರೂ.ಗಳಿಗೆ ಕಡಿಮೆ ಮಾಡಿ ಪರಿಷ್ಕರಿಸಲಾಗಿದೆ.

1997-98ನೇ ವಾರ್ಷಿಕ ಯೋಜನೆ

39. 1997-98ರ ವಾರ್ಷಿಕ ಯೋಜನೆಯ ಒಂಬತ್ತನೇ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷವಾಗಿರುತ್ತದೆ. ಎಂಟನೇ ಯೋಜನೆಯ ಅವಧಿಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಉಪಯುಕ್ತತೆ, ಗುಣಮಟ್ಟಗಳನ್ನು ಪರಿಶೀಲಿಸಲಾಗಿದೆ. ಈ ಆಧಾರದ ಮೇಲೆ ಅನುಪಯುಕ್ತ ಹಾಗೂ ಈಗಾಗಲೇ ಉದ್ದೇಶಿತ ಗುರಿಯನ್ನು ಸಾಧಿಸಿರುವ ಸುಮಾರು 97 ಕಾರ್ಯಕ್ರಮಗಳನ್ನು ಒಂಬತ್ತನೆ ಯೋಜನೆಯಲ್ಲಿ ಕೈಬಿಡಲಾಗಿದೆ ಅಥವಾ ಬೇರೆ ಕಾರ್ಯಕ್ರಮಗಳ ಜೊತೆ ಸೇರಿಸಿದೆ. ಈ ಹೊಸ ಯೋಜನಾ ವರ್ಷದಿಂದ ಎಂಟನೆ ಯೋಜನಾ ಅವಧಿಯಲ್ಲಿ ರಾಜ್ಯ ಮತ್ತು ಜಿಲ್ಲಾ ಯೋಜನೆಗಳ ಅಡಿಯಲ್ಲಿ ಒದಗಿಸಿದ್ದ ಸಂಬಳ ಮತ್ತು ನಿರ್ವಹಣೆ ವೆಚ್ಚಗಳನ್ನು ಯೋಜನೇತರ ಬಾಬಿಗೆ ವರ್ಗಾಯಿಸಲಾಗಿದೆ. ಇದರಿಂದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಹೆಚ್ಚು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ಜಿಲ್ಲಾ ವಲಯಕ್ಕೆ ಸಂಬಂಧಿಸಿದಂತೆ ಈ ಅವಕಾಶ ಇನ್ನಷ್ಟು ಹೆಚ್ಚಾಗುತ್ತದೆ.

40. ಯೋಜನಾ ಆಯೋಗದ ಜೊತೆ ಚರ್ಚಿಸಿ ನಿರ್ಧರಿಸಿದಂತೆ ರಾಜ್ಯದ ಯೋಜನಾ ಗಾತ್ರವನ್ನು 4130 ಕೋಟಿ ರೂ.ಗಳಿಗೆ ನಿಗದಿಗೊಳಿಸಲಾಗಿದೆ. ಆದರೆ ವಿವಿಧ ಇಲಾಖೆಗಳ ಬೇಡಿಕೆ ಮತ್ತು

ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದ ಯೋಜನಾ ಗಾತ್ರವನ್ನು 4545 ಕೋಟಿ ರೂ.ಗಳಿಗೆ Ýê ÉÃÈÖÐ{ê E{ãÓÐ pÖmX± uæÀÒ ÉÃÝÖÌãÀãÖÐ 3064.45 ಕೋಟಿ ರೂ.ಗಳನ್ನು ಮತ್ತು ಆಂತರಿಕ ಪ್ರತ್ಯೇಕ ಬಜೆಟ್ ಸಂಪನ್ಮೂಲ ಘಟಕವಾಗಿ 1480.44 ಕೋಟಿ ರೂ.ಗಳನ್ನು (ಇಂಟರ್‌ನಲ್ ಎಕ್ಸ್‌ಟ್ರಾ ಬಜೆಟರಿ ಸಪೋರ್ಟ್) ನಿಗದಿಗೊಳಿಸಲಾಗಿದೆ. ಇದರಲ್ಲಿ ಜಿಲ್ಲಾ ವಲಯದ ಯೋಜನಾ ಗಾತ್ರವು 732 ಕೋಟಿ ರೂ.ಗಳಾಗಲಿದೆ.

ಮೂಲ ಸೌಲಭ್ಯಗಳು

41. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ, ವಿಶೇಷವಾಗಿ ಬೆಂಗಳೂರು ನಗರವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಾಣಿಜ್ಯ ಮತ್ತು ಕೈಗಾರಿಕೆ ವಲಯದಲ್ಲಿ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಇದರ ಜೊತೆಗೆ ಮೈಸೂರು, ಹಾಸನ, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಹಾಗೂ ಗುಲ್ಬರ್ಗಾ ನಗರಗಳೂ ಕೂಡ ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರಗಳಾಗಿ ರೂಪುಗೊಳ್ಳುತ್ತಿವೆ. ನಮ್ಮ ಸರ್ಕಾರವು ವಾಣಿಜ್ಯ ಹಾಗೂ ಕೈಗಾರಿಕಾ ವಲಯದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹದಾಯಕವಾದ ವಾತಾವರಣವನ್ನು ಕಲ್ಪಿಸಿ ಮುಂದುವರಿಸಲು ಬದ್ಧವಾಗಿದೆ.

42. ಇತ್ತೀಚೆಗೆ ಬಿಡುಗಡೆಯಾಗಿರುವ "ಭಾರತ ಮೂಲ ಸೌಲಭ್ಯ" ವರದಿಯಲ್ಲಿ ಸೌಲಭ್ಯಗಳನ್ನು ಖಾಸಗೀಕರಣಗೊಳಿಸಬಹುದಾದ ಪ್ರಮುಖ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಈ ವರದಿಯ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಸ್ಟಾಂಪ್ ಮತ್ತು ನೋಂದಣಿ ಕಾಯಿದೆಯ ಅನುಷ್ಠಾನದಲ್ಲಿ ಸುಧಾರಣೆ ಮಾಡಲು ಕ್ರಮ ಕೈಗೊಳ್ಳುತ್ತಿದೆ. ಇದರಲ್ಲಿ ಸಾಲಭದ್ರತೆಗೆ ಸಂಬಂಧಿಸಿದಂತೆ ದರಗಳನ್ನು ಇಳಿಸುವುದು ಸೇರಿದೆ. ಈ ಬಗ್ಗೆ ನನ್ನ ಭಾಷಣದಲ್ಲಿ ಮುಂದೆ ಪ್ರಸ್ತಾಪ ಮಾಡುತ್ತೇನೆ. ಈ ವರದಿಯಲ್ಲಿ ಇತರೆ ವಿತ್ತೀಯ ವಿಷಯಗಳಾದ ಕಾಮಗಾರಿ ಕರಾರು ತೆರಿಗೆ, ಮಾರಾಟ ತೆರಿಗೆ ಮುಂತಾದ ರಾಜ್ಯ ತೆರಿಗೆಗಳನ್ನು ಕಾರ್ಯಾಚರಣೆಯ ವೆಚ್ಚ ಮತ್ತು ಬಳಸುವ ವೆಚ್ಚಗಳ ಮೇಲೆ ವಿಧಿಸುವ ವಿಷಯ ಸೇರಿವೆ. ಈ ದಿಸೆಯಲ್ಲಿ ಸರ್ಕಾರವು ಈಗಾಗಲೆ ಕ್ರಮ ಕೈಗೊಂಡು ಈ ರೀತಿಯ ರಿಯಾಯಿತಿಗಳನ್ನು ಸಿಂಗಪೂರ್ ಟೆಕ್ನಾಲಜಿ ಪಾರ್ಕಿಗೆ ನೀಡಿರುತ್ತದೆ. ಇತರೆ ಮೂಲ ಸೌಲಭ್ಯ ಯೋಜನೆಗಳಿಗೆ ಕೂಡ ಸೂಕ್ತ ತೆರಿಗೆ ರಿಯಾಯಿತಿಗಳನ್ನು ನೀಡುವ ಬಗ್ಗೆ ಪರಿಗಣಿಸಲಾಗುವುದು.

43. .ರಾಜ್ಯ ಸರ್ಕಾರದ ರಸ್ತೆ ಸಂಪರ್ಕ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುವ ಮತ್ತು ಮೇಲ್ದರ್ಜೆಗೇರಿಸುವ ತುರ್ತು ಅಗತ್ಯವಿದೆ ಎಂಬುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತೀರಿ. ರಾಜ್ಯ ಸರ್ಕಾರವು, 1997-98ರಲ್ಲಿ ರಸ್ತೆಗಳ ನಿರ್ವಹಣೆಗಾಗಿ 40 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡಿದೆ. 1999-2000 ದ ಇಸವಿಯ ಹೊತ್ತಿಗೆ, ರಸ್ತೆಗಳ ನಿರ್ವಹಣೆಗಾಗಿ 10ನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವ ಮೊತ್ತವನ್ನು ನೀಡಲು ಬದ್ಧವಾಗಿದೆ.

44. ಈ ವರ್ಷ ಒಂದು 'ರಸ್ತೆ ನಿಧಿ' ಯನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಈ ನಿಧಿಯನ್ನು ರಾಜ್ಯದ ರಸ್ತೆಗಳ ಅಭಿವೃದ್ಧಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯಕ್ಕೆ ಹಾಗೂ ರಸ್ತೆ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಲು ಬಳಸಿಕೊಳ್ಳಲಾಗುವುದು. ರಸ್ತೆ ನಿಧಿಯ ಮೂಲ

ಬಂಡವಾಳವನ್ನು ಕೂಡಿಸಲು, ಗ್ರಾನೈಟ್, ಕಬ್ಬಿಣದ ಅದಿರು, ಸುಣ್ಣದ ಕಲ್ಲಿನ ಮೇಲೆ ಸಂಗ್ರಹವಾಗುವ ರಾಜಧನದ ಮೇಲೆ ಸೆಸ್ ವಿಧಿಸಲಾಗುವುದು. ಈ ರಸ್ತೆ ನಿಧಿಯನ್ನು ರಾಜ್ಯ ಹಾಗೂ ಜಿಲ್ಲಾಮಟ್ಟದಲ್ಲಿ ರಚಿಸಲಾಗುವ ಸಮಿತಿಗಳು ನಿಯಂತ್ರಿಸುತ್ತವೆ. ಆರ್ಥಿಕವಾಗಿ ಮಹತ್ವವುಳ್ಳ ರಸ್ತೆಗಳಿಗೆ ಆದ್ಯತೆ ನೀಡುವುದು ಮತ್ತು ಈ ನಿಧಿಯ ಪರಿಣಾಮಕಾರಿ ಅನುಷ್ಠಾನ ಹಾಗೂ ಹಣದ ಸದ್ಬಳಕೆಯ ಮೇಲೆ ಸಮಿತಿ ನಿಗಾ ವಹಿಸುತ್ತವೆ ಎಂದು ಆಶಿಸಲಾಗಿದೆ.

45. ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಯಲ್ಲಿ ವಿಮಾನ ನಿಲ್ದಾಣ ಮತ್ತು ಬಂದರುಗಳು ಅತ್ಯಾವಶ್ಯವಾದ ಮೂಲ ಸೌಲಭ್ಯಗಳಾಗಿವೆ. ರಾಜ್ಯದ ಪ್ರಮುಖ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ನಿರ್ಮಿಸುವ ಸಲುವಾಗಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಈ ಆಯವ್ಯಯದಲ್ಲಿ 10 ಕೋಟಿ ರೂಪಾಯಿಗಳನ್ನು ಮೀಸಲಿರಿಸಿದೆ. ರಾಜ್ಯದ ಕರಾವಳಿ ಪ್ರದೇಶವನ್ನು ಸದುಪಯೋಗ ಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಬಂದರು ನೀತಿಯನ್ನು ಪ್ರಕಟಿಸಿದೆ. ಹಾಗೆಯೇ ರಾಜ್ಯದಲ್ಲಿ ಸಣ್ಣ ಬಂದರುಗಳ ನಿರ್ಮಾಣಕ್ಕಾಗಿ ಖಾಸಗಿ ವಲಯವನ್ನು ಆಹ್ವಾನಿಸಲಾಗಿದೆ. ನೋಡಲ್ ಸಂಸ್ಥೆಯಾದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮವು (ಕೆಎಸ್ಐಐಡಿಸಿ) ರಾಜ್ಯ ಸರ್ಕಾರದ ಪರವಾಗಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಸಣ್ಣ ಬಂದರು ನಿರ್ಮಾಣಕಾರ್ಯ ಕೈಗೆತ್ತಿಕೊಳ್ಳಲು ಆಸಕ್ತರನ್ನು ಆಹ್ವಾನಿಸಿದೆ. ಸದ್ಯದಲ್ಲಿ ಕಾರವಾರ, ಬೇಲಿಕೇರಿ ಮತ್ತು ಮಂಗಳೂರು ಬಂದರಿನ ಅಭಿವೃದ್ಧಿಗೆ ಯೋಜಿಸಲಾಗಿದೆ. ಈ ಬಗ್ಗೆ ಬಂದ ಪ್ರತಿಕ್ರಿಯೆ ಆಶಾದಾಯಕವಾಗಿದೆ.

ಭಾರತ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವದ ಆಚರಣೆ

46. ಭಾರತದ ಐವತ್ತನೇ ಸ್ವಾತಂತ್ರ್ಯ ದಿನಾಚರಣೆಯು, ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ಮತ್ತು ಅವರ ತ್ಯಾಗವನ್ನು ಸ್ಮರಿಸುವ ಸಂದರ್ಭ. ನಮ್ಮ ಸ್ವಾತಂತ್ರ್ಯ ವೀರರಿಗೆ ರಾಷ್ಟ್ರವು ನಮನ ಸಲ್ಲಿಸುತ್ತಿರುವ ಈ ಸಂದರ್ಭದಲ್ಲಿ ನಮ್ಮ ಕೃತಜ್ಞತೆಯ ಕುರುಹಾಗಿ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುತ್ತಿದ್ದ ವಿಶ್ರಾಂತಿ ವೇತನವನ್ನು ಮಾಸಿಕ 500 ರೂಪಾಯಿಗಳಿಂದ 750 ರೂಪಾಯಿಗಳಿಗೆ ಹೆಚ್ಚಿಸಲಾಗುವುದೆಂದು ಪ್ರಕಟಿಸಲು ನನಗೆ ಸಂತೋಷವಾಗುತ್ತದೆ.

47. ಇದೇ ಸಂದರ್ಭದಲ್ಲಿ ವೃದ್ಧರಿಗೆ, ಅಂಗವಿಕಲರಿಗೆ ಮತ್ತು ನಿರಾಶ್ರಿತ ವಿಧವೆಯರಿಗೆ ನೀಡುತ್ತಿರುವ ಮಾಸಿಕ ವೇತನವನ್ನು ಮಾಸಿಕ 75 ರೂ.ಗಳಿಂದ 100 ರೂ.ಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

48. ಸ್ವಾತಂತ್ರ್ಯದ ಚಿನ್ನದ ಹಬ್ಬದ ಸ್ಮರಣಾರ್ಥ ನಮ್ಮ ನಾಡಿನ ಗ್ರಾಮೀಣ ಜನರಿಗೆ ನೇರವಾಗಿ ಉಪಯುಕ್ತವಾಗುವಂತಹ ಎರಡು ಯೋಜನೆಗಳನ್ನು ಪ್ರಕಟಿಸಲು ಸರ್ಕಾರ ಹೆಮ್ಮೆಪಡುತ್ತದೆ. ಮೊದಲನೆಯದು, ರಾಜ್ಯದಲ್ಲಿ ಶಾಲೆಗಳೇ ಇಲ್ಲದಿರುವ ಜನ ವಸತಿಗಳಲ್ಲಿ 4000 ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಯೋಜನೆ. ಇದರಲ್ಲಿ 2000 ಶಾಲೆಗಳು ಕಿರಿಯ ಪ್ರಾಥಮಿಕ ಶಾಲೆಗಳಾಗಿದ್ದು, ಇವುಗಳನ್ನು ಶಾಲೆಗಳೇ ಇಲ್ಲದ ಜನವಸತಿಗಳಲ್ಲಿ ತೆರೆಯಲಾಗುವುದು. ಇದರ ಜೊತೆಗೆ 2000

ಹಿರಿಯ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗುವುದು. ಜೊತೆಗೆ 2000 ಹಿರಿಯ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗುವುದು, ಇದರಿಂದಾಗಿ ಮಕ್ಕಳು ಶಾಲೆಗಾಗಿ ದೂರ ನಡೆಯಬೇಕಾಗುವುದಿಲ್ಲ.

49. ಎರಡನೇ ಕಾರ್ಯಕ್ರಮವೆಂದರೆ, ರಾಜ್ಯದಲ್ಲಿ ಇದುವರೆವಿಗೂ ಸಂಪರ್ಕವನ್ನೇ ಹೊಂದಿರದ ಕುಗ್ರಾಮಗಳಿಗೆ ಕೂಡು ರಸ್ತೆ ನಿರ್ಮಿಸಿ ಸಂಪರ್ಕ ಕಲ್ಪಿಸುವುದು. ಈ ಎರಡೂ ಕಾರ್ಯಕ್ರಮಗಳು 1998ರ ಆಗಸ್ಟ್ 15ರ ವೇಳೆಗೆ ಪೂರ್ಣಗೊಳ್ಳಲಿವೆ.

50. ಕರ್ನಾಟಕವು ರಾಷ್ಟ್ರವೇ ಹೆಮ್ಮೆ ಪಡುವಂತಹ ಸ್ವಾತಂತ್ರ್ಯ ಹೋರಾಟಗಾರರನ್ನು ನೀಡಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ರಾಜ್ಯವು ಮುಂಚೂಣಿಯಲ್ಲಿತ್ತು. ಈ ಸಂಗ್ರಾಮದಲ್ಲಿ ಅನೇಕ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿರುವ ಕರ್ನಾಟಕದ ಪ್ರಮುಖ ಸ್ಥಳಗಳಲ್ಲಿ ಅದರ ನೆನಪಿಗಾಗಿ "ಸ್ವಾತಂತ್ರ್ಯ ಸ್ಮಾರಕ ಭವನ"ಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ.

51. ಭಾರತ ಸ್ವಾತಂತ್ರ್ಯದ ಚಿನ್ನದ ಹಬ್ಬದ ಆಚರಣೆಗೆ 2.5 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

52. ಈ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸುಮಾರು 60 ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದೆ.

ಗ್ರಾಮೀಣ ಅಭಿವೃದ್ಧಿ

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ

53. ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೈಪಂಪುಗಳುಳ್ಳ 23,884 ಕೊಳವೆ ಬಾವಿಗಳು, 5,371 ಕಿರು ನೀರು ಸರಬರಾಜು ಯೋಜನೆಗಳು ಮತ್ತು 3976 ಕೊಳಾಯಿ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮವು ಒಂಬತ್ತನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೂ ಸಹ ಆದ್ಯತಾ ಕಾರ್ಯಕ್ರಮವಾಗಿ ಮುಂದುವರಿಯುತ್ತದೆ. ಇದಕ್ಕಾಗಿ ಲಭ್ಯವಿರುವ ವಿದೇಶೀ ನೆರವನ್ನು ನಾವು ಬಳಸಿಕೊಳ್ಳುವುದು ಅವಶ್ಯಕವಾಗಿದೆ. ಈ ದಿಸೆಯಲ್ಲಿ ಮೂರು ವಿದೇಶೀ ನೆರವಿನ ಯೋಜನೆಗಳ ಅನುಷ್ಠಾನದಲ್ಲಿ ಉಂಟಾದ ಕೆಲವೊಂದು ಆರಂಭಿಕ ತೊಂದರೆಗಳನ್ನು ಪರಿಹರಿಸಲಾಗಿದ್ದು, ಈ ಯೋಜನೆಗಳು ನಿಗದಿತ ವೇಳೆಗೆ ಪೂರ್ಣಗೊಳ್ಳುವ ಭರವಸೆ ನಮಗಿದೆ.

54. ಗ್ರಾಮೀಣ ನೈರ್ಮಲ್ಯ ಕ್ಷೇತ್ರದಲ್ಲಿ ವಿಶೇಷವಾಗಿ ಗ್ರಾಮೀಣ ಶೌಚಾಲಯ ನಿರ್ಮಾಣ ಕಾರ್ಯಕ್ರಮದಲ್ಲಿ ನಮ್ಮ ಸರ್ಕಾರ ಗಣನೀಯ ಸಾಧನೆಯನ್ನು ಮಾಡಿದೆ. ನಿರ್ಮಲ ಗ್ರಾಮ ಯೋಜನೆ ಅಡಿಯಲ್ಲಿ 1997ರ ಜನವರಿ ಕೊನೆಯವರೆಗೆ 2,70,000 ಕ್ಕೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಲಾಗಿದೆ.

ಬಡತನ ನಿವಾರಣೆ

55. ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ 5.52 ಲಕ್ಷ ಕುಟುಂಬಗಳಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ 201.76 ಕೋಟಿ ರೂಪಾಯಿಗಳ ಸಾಲ ಮತ್ತು ಸಬ್ಸಿಡಿ

ನೆರವನ್ನು ಒದಗಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಈಗ ಗ್ರಾಮೀಣ ಪ್ರದೇಶಗಳಲ್ಲಿನ ಅಕ್ಷರಸ್ಥ ನಿರುದ್ಯೋಗಿ ಯುವಜನರಿಗೂ ವಿಸ್ತರಿಸಲಾಗಿದೆ. ಮೂಲ ಸವಲತ್ತುಗಳ ನಿರ್ಮಾಣಕ್ಕಾಗಿ ನಿಗದಿಗೊಳಿಸಿದ್ದ ಮಿತಿಯನ್ನು ಶೇಕಡಾ 10 ರಿಂದ ಶೇಕಡಾ 20ಕ್ಕೆ ಏರಿಸಲಾಗಿದೆ. ಗುರಿ ಆಧಾರಿತ ಧೋರಣೆಗೆ ಬದಲಾಗಿ ಸಾಲ-ಕ್ರೋಢೀಕರಣಕ್ಕೆ ಮತ್ತು ತಲಾ ಬಂಡವಾಳ ಹೂಡಿಕೆಗೆ ಈಗ ಹೆಚ್ಚು ಒತ್ತು ಕೊಡಲಾಗಿದೆ. ಬಡಕುಟುಂಬಗಳ ಸ್ವಯಂ ನೆರವು ಗುಂಪುಗಳನ್ನು ರಚಿಸುವುದಕ್ಕೆ ಈಗ ವಿಶೇಷ ಗಮನ ಕೊಡಲಾಗಿದ್ದು, ಈ ಗುಂಪುಗಳು ಹಣದ ಬಳಕೆ ಮತ್ತು ಮರುಪಾವತಿ ಕುರಿತು ಜಂಟಿಯಾಗಿ ಮೇಲ್ವಿಚಾರಣೆ ಮಾಡುತ್ತವೆ. ಈ ಬದಲಾವಣೆಗಳಿಂದ ಕಾರ್ಯಕ್ರಮದ ಗುಣಮಟ್ಟದಲ್ಲಿ ಗಣನೀಯ ಸುಧಾರಣೆಯಾಗುವ ಸಾಧ್ಯತೆಯಿದೆ. ಈ ಕಾರ್ಯಕ್ರಮಕ್ಕಾಗಿ 1997-98ನೇ ಸಾಲಿನಲ್ಲಿ 36.38 ಕೋಟಿ ರೂ.ಗಳನ್ನು ರಾಜ್ಯದ ಪಾಲಿನ ಹಣವನ್ನಾಗಿ ಒದಗಿಸಲಾಗಿದೆ.

ಗ್ರಾಮೀಣ ಯುವಜನರು

56. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಪ್ರೋತ್ಸಾಹ ನೀಡಲು ರಾಜ್ಯವು "ಸ್ವಾವಲಂಬನಾ" ಎಂಬ ನೂತನ ಕಾರ್ಯಕ್ರಮವನ್ನು ಆರಂಭಿಸಿದೆ. ಇದನ್ನು ಪ್ರಾಯೋಗಿಕವಾಗಿ ಗುಲ್ಬರ್ಗಾ, ತುಮಕೂರು, ಮೈಸೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯ ಮೇರೆಗೆ ಆಯ್ದ ವಿದ್ಯಾವಂತ ಯುವಜನರಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಮತ್ತು ಸ್ವತಂತ್ರ ಉದ್ದಿಮೆಗಳನ್ನು ಸ್ಥಾಪಿಸಲು ನೆರವು ನೀಡಲಾಗುವುದು. ಅಲ್ಲದೆ ಹೆಸರಾಂತ ತರಬೇತಿ ಸಂಸ್ಥೆಗಳ ನೆರವಿನೊಂದಿಗೆ ಒಳ್ಳೆಯ ಗುಣಮಟ್ಟದ ತರಬೇತಿಯನ್ನು ಸಹ ಕೊಡಲಾಗುವುದು. ಈ ಯೋಜನೆಯನ್ವಯ ಮೊದಲನೆಯ ವರ್ಷ ಸರ್ಕಾರವು 5000 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉದ್ದೇಶಿಸಿದೆ. ಇದಕ್ಕಾಗಿ ಆಯವ್ಯಯದಲ್ಲಿ ಒಂದು ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

ಮಾದರಿ ಗ್ರಾಮಗಳು

57. ರಾಜ್ಯ ಸರ್ಕಾರವು ಹಳ್ಳಿಗಳ ಅಭಿವೃದ್ಧಿಗಾಗಿ "ಸ್ವಸ್ತಿ" ಎಂಬ ಗ್ರಾಮ ಯೋಜನೆಯನ್ನು ಹಮ್ಮಿಕೊಂಡಿದೆ. "ಸ್ವಸ್ತಿ" ಎಂಬುದು ಸ್ವಸ್ಥವಾದ, ಸಮೃದ್ಧವಾದ ಮತ್ತು ಪ್ರಗತಿಪರ ಗ್ರಾಮೀಣ ಜೀವನಕ್ಕೆ ಅತ್ಯವಶ್ಯಕವಾದ ನೆಲ, ಜಲ, ನೈರ್ಮಲ್ಯ, ಮರಗಳು, ಗೃಹನಿರ್ಮಾಣ ಹಾಗೂ ಮೂಲ ಸೌಲಭ್ಯಗಳ ಸಂಕ್ಷಿಪ್ತರೂಪ. ಗ್ರಾಮ ಸಮುದಾಯಗಳು, ಕಾರ್ಪೋರೇಟ ವಲಯಗಳು, ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಪ್ರತಿನಿಧಿಗಳನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ಈ ಯೋಜನೆಯಲ್ಲಿ ಸರ್ಕಾರವು ಹಿರಿಯಣ್ಣನಂತೆ ಕೆಲಸ ಮಾಡುತ್ತದೆ. ಸ್ವಸ್ತಿ ಯೋಜನೆಯ ವ್ಯಾಪ್ತಿಗೆ ಬರುವ ಗ್ರಾಮಗಳನ್ನು ಮಾದರಿ ಗ್ರಾಮಗಳಾಗಿ ಪರಿವರ್ತಿಸಲಾಗುವುದು. 1997-98ನೇ ವರ್ಷದಲ್ಲಿ 100 ಮಾದರಿ ಗ್ರಾಮಗಳನ್ನು ಈ ಯೋಜನೆಯ ಅಡಿಯಲ್ಲಿ ತರಲಾಗುವುದು.

ಕೃಷಿ

58. 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ 90 ಲಕ್ಷ ಟನ್ ಆಹಾರ ಧಾನ್ಯಗಳ ದಾಖಲೆ ಉತ್ಪಾದನೆ ಯಾಗಿರುವುದನ್ನು ಸದನಕ್ಕೆ ನಾನು ಸಂತೋಷದಿಂದ ತಿಳಿಸುತ್ತೇನೆ. ಕಳೆದ ವರ್ಷ ಆಹಾರ ಧಾನ್ಯಗಳ

ಉತ್ಪಾದನೆ 87.2 ಲಕ್ಷ ಟನ್ ಆಗಿತ್ತು. 1997-98ನೇ ಸಾಲಿಗೆ 93.64 ಲಕ್ಷ ಟನ್ ಗುರಿ ನಿಗದಿ ಮಾಡಲಾಗಿದೆ.

59. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಗೊಳ್ಳುವುದರಲ್ಲಿ ಕರ್ನಾಟಕ ರಾಷ್ಟ್ರದಲ್ಲೇ ಮುಂಚೂಣಿಯಲ್ಲಿದೆ. ಈ ವರ್ಷ 39,744 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ. ವಿಶ್ವಬ್ಯಾಂಕ್ ಮತ್ತು ಓವರ್‌ಸೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನೆರವಿನ ಮೂಲಕ 1997-98ರಲ್ಲಿ ಎರಡು ಯೋಜನೆಗಳಿಗೆ ಮಂಜೂರಾತಿ ಪಡೆಯಲು ಪ್ರಯತ್ನ ನಡೆಸಲಾಗುತ್ತಿದೆ.

60. ಭತ್ತ ನಾಟಿ ಮಾಡುವ ಯಂತ್ರ, ಕಳೆ ಕೀಳುವ ಉಪಕರಣ ಮತ್ತು ಕಬ್ಬು ನಾಟಿ ಮಾಡುವ ಯಂತ್ರಗಳ ಹಾಗೂ ಇನ್ನಿತರ ಇಂತಹ ಉಪಕರಣಗಳ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಉದ್ದೇಶಿಸಿದೆ. ಇದೇ ರೀತಿ ಸುಧಾರಿತ ರೀತಿಯಲ್ಲಿ ಕಾಂಪೋಸ್ಟ್ ಗೊಬ್ಬರ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುವುದು.

61. ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯು ರಾಜ್ಯದಲ್ಲಿ ಜಾರಿಯಲ್ಲಿರುವ ಕೃಷಿ ನೀತಿಯ ಅನುಷ್ಠಾನ ಕಾರ್ಯದ ಉಸ್ತುವಾರಿಯನ್ನು ಮಾಡುತ್ತಿದೆ. ನಬಾರ್ಡ್‌ನ ಸಂಸ್ಥೆ ನೋಂದಣಿ ಮಾಡಿರುವ 'ಕರ್ನಾಟಕ ಕೃಷಿ ಅಭಿವೃದ್ಧಿ ಹಣಕಾಸು ನಿಗಮ' ಸಂಸ್ಥೆಯಲ್ಲಿ ರಾಜ್ಯ ಸರ್ಕಾರವು ಬಂಡವಾಳ ಹೂಡಲು ನಿರ್ಧರಿಸಿದೆ.

62. ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದಾಗಿ ರೈತರು ಕಂಗೆಟ್ಟು ತಮ್ಮ ಕೃಷಿ ಉತ್ಪನ್ನಗಳನ್ನು ಸಂಕಷ್ಟದ ಬೆಲೆಗೆ ಮಾರುವಂತಹ ಸಂದರ್ಭದಲ್ಲಿ ಸರ್ಕಾರವು ಮಾರುಕಟ್ಟೆ ಪ್ರವೇಶಿಸಿ ಬೆಲೆ ಕುಸಿಯದಂತೆ ನೋಡಿಕೊಳ್ಳುವ ಸಲುವಾಗಿ ಸ್ಥಾಪಿಸಲಿರುವ ನಿಧಿಗಾಗಿ ಎರಡು ಕೋಟಿ ರೂ.ಗಳನ್ನು ಈ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಒದಗಿಸಿದೆ.

ತೋಟಗಾರಿಕೆ

63. ತೋಟಗಾರಿಕೆ ವಲಯಕ್ಕೆ ಯೋಜನೆಯಡಿಯಲ್ಲಿ 1996-97ರಲ್ಲಿ 13.23 ಕೋಟಿ ರೂ.ಗಳನ್ನು ಒದಗಿಸಿದ್ದು, ಅದನ್ನೂ 1997-98ರಲ್ಲಿ 14.30 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರದ ಶೇ. 25ರಷ್ಟು ಪಾಲನ್ನು ಒಳಗೊಂಡಿರುವ ಕೇಂದ್ರ ಪುರಸ್ಕೃತ ಯೋಜನೆಯಿಂದ ರಾಜ್ಯದಲ್ಲಿ 1996-97ರವರೆಗೆ ಸುಮಾರು 7,000 ಹಕ್ಟೇರು ಪ್ರದೇಶದಲ್ಲಿ ತಾಳೆ ಎಣ್ಣೆ ಬೆಳೆಯನ್ನು ಬೆಳೆಯಲಾಗಿದೆ. ಈ ಯೋಜನೆಗಾಗಿ 1997-98ರಲ್ಲಿ ರಾಜ್ಯದ ಪಾಲಾಗಿ 75 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

64. ಬೆಂಗಳೂರು ಜಿಲ್ಲೆ ಹುಳಿಮಾವಿನಲ್ಲಿ ಹೊಸ ಅಂಗಾಂಶ ಕೃಷಿ ಪ್ರಯೋಗಾಲಯವು ಪೂರ್ಣಗೊಳ್ಳುವ ಹಂತದಲ್ಲಿದ್ದು 1997-98ರಲ್ಲಿ ಇದು ಕಾರ್ಯ ನಿರ್ವಹಿಸಲಾರಂಭಿಸುತ್ತದೆ. ಈ ಪ್ರಯೋಗಾಲಯದಲ್ಲಿ ಬಾಳೆ, ಏಲಕ್ಕಿ ಮತ್ತು ಅನಾನಸ್ಸಿನ ಸಸಿಗಳನ್ನು ಅಂಗಾಂಶ ಕೃಷಿ ವಿಧಾನದಲ್ಲಿ ಉತ್ಪಾದಿಸಿ ರಾಜ್ಯದ ಎಲ್ಲಾ ಭಾಗದ ರೈತರಿಗೆ ಒದಗಿಸಲಾಗುವುದು.

65. 'ವೆನಿಲ್ಲಾ' ಬೆಳೆ ಪ್ರಪಂಚದಲ್ಲಿ ಅತ್ಯಂತ ದುಬಾರಿ ಸಾಂಬಾರು ಪದಾರ್ಥ, ಇದರಿಂದ ಪಡೆಯಬಹುದಾದ ಲಾಭದ ಪೂರ್ಣ ಪ್ರಯೋಜನವನ್ನು ಇಲ್ಲಿಯವರೆಗೆ ಪಡೆಯಲಾಗಲಿಲ್ಲ. 1997-98ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 100 ಹೆಕ್ಟೇರು ಪ್ರದೇಶದಲ್ಲಿ ಈ ಬೆಳೆ ಅಭಿವೃದ್ಧಿ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುವುದು ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ 33 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

66. 1997-98ರಲ್ಲಿ 'ನಮ್ಮ ಮನೆ ನಮ್ಮ ತೋಟ' ಎಂಬ ಹೊಸ ಯೋಜನೆಯನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಒಂದರಿಂದ ಎರಡು ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಪ್ರೋತ್ಸಾಹ ನೀಡಲಾಗುವುದು. ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 100 ಫಲಾನುಭವಿಗಳಿಗೆ ಈ ಯೋಜನೆಯ ಲಾಭವನ್ನು ಒದಗಿಸಲುದ್ದೇಶಿಸಿದ್ದು, ಈ ಯೋಜನೆಯನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯಡಿ ರೈತರಿಗೆ ಪರಿಕರ ಸಹಾಯ ಧನವನ್ನು ಒದಗಿಸಲಾಗುವುದು.

67. ತಳ್ಳುವ ಗಾಡಿಯಲ್ಲಿ ತರಕಾರಿ ಮಾರುವವರಿಗೆ ಪ್ರೋತ್ಸಾಹ ನೀಡಲು 'ಜೀವನ ಮಾರ್ಗ' ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲುದ್ದೇಶಿಸಲಾಗಿದೆ. ಈ ಯೋಜನೆಯಡಿಯಲ್ಲಿ ಪ್ರತಿ ಫಲಾನುಭವಿಗೆ 5,000 ರೂ.ಗಳನ್ನು ಒದಗಿಸಲಾಗುವುದು. ಇದರಲ್ಲಿ ತಳ್ಳುವ ಗಾಡಿಯನ್ನು ಖರೀದಿಸಲು ತಗಲಬಹುದಾದ ವೆಚ್ಚ ಸುಮಾರು 3,000 ರೂ ಮತ್ತು ಹಾಪ್‌ಕಾಂಮ್ಸ್‌ನಲ್ಲಿ ದುಡಿಮೆ ಬಂಡವಾಳದ 2,000 ರೂಗಳು; ಇದರಿಂದ ಫಲಾನುಭವಿಯು ಹಾಪ್‌ಕಾಮ್ಸ್‌ನಿಂದ ಪ್ರತಿದಿನ ಮಾರಾಟಕ್ಕೆ ಬೇಕಾದ ತಾಜಾ ತರಕಾರಿಯನ್ನು ಪಡೆಯಬಹುದು. ಪ್ರಾರಂಭಿಕವಾಗಿ ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಲುದ್ದೇಶಿ ಸಲಾಗಿರುವ ಈ ಯೋಜನೆಯಡಿ ಸರ್ಕಾರದ ಸಹಾಯಧನ ಮತ್ತು ವಾಣಿಜ್ಯ ಬ್ಯಾಂಕುಗಳ ಸಾಲ ಇವುಗಳ ಸೂಕ್ತ ಸಂಯೋಜನೆಯನ್ನು ರೂಪಿಸಲಾಗುವುದು.

68. ಕರ್ನಾಟಕ ರಾಜ್ಯ ತೋಟಗಾರಿಕಾ ಮಾರುಕಟ್ಟೆ ಒಕ್ಕೂಟವನ್ನು 1996ರ ಅಕ್ಟೋಬರ್ ನಲ್ಲಿ ನೋಂದಣಿ ಮಾಡಿಸಲಾಗಿದೆ. ತೋಟಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವಲ್ಲಿ ಇದು ಪ್ರಮುಖ ಪಾತ್ರವಹಿಸಲಿದೆ. 66 ಕೋಟಿ ರೂ.ಗಳ ಈ ಸಮಗ್ರ ಮಾರುಕಟ್ಟೆ ಮೂಲ ಸೌಲಭ್ಯಗಳ ಯೋಜನೆಗೆ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮಂಡಳಿ (ಎನ್ ಸಿಡಿಸಿ) ತಾತ್ವಿಕ ಮಂಜೂರಾತಿಯನ್ನು ನೀಡಿದೆ. ಈ ಯೋಜನೆ ಶೀಘ್ರದಲ್ಲೇ ಕಾರ್ಯಾರಂಭ ಮಾಡುವ ನಂಬಿಕೆ ನಮಗಿದೆ. ಪುಷ್ಪೋದ್ಯಮ ಅಭಿವೃದ್ಧಿಗೆ ರಾಜ್ಯದಲ್ಲಿ ವಿಪುಲ ಅವಕಾಶವಿದ್ದು ಸರ್ಕಾರ ಇದರ ಬೆಳವಣಿಗೆಗೆ ಬೃಹತ ಪ್ರಮಾಣದಲ್ಲಿ ಉತ್ತೇಜನ ನೀಡುತ್ತದೆ.

ಸಹಕಾರ ಮತ್ತು ಕೃಷಿ ಸಾಲ

69. ಸಹಕಾರಿ ವಲಯದ ಮೂಲಕ ರೈತಸಮೂಹಕ್ಕೆ ಒದಗಿಸುವ ಸಾಲದ ನೆರವಿನ ಪ್ರಮಾಣವನ್ನು ಹೆಚ್ಚು ಮಾಡಲು ನಮ್ಮ ಸರ್ಕಾರ ಬದ್ಧವಾಗಿದೆ. ವಾಣಿಜ್ಯ ಅಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿರುವ ಪ್ರಾಥಮಿಕ ಸಹಕಾರಿ ಸಂಘಗಳು ಠೇವಣಿ ಸಂಗ್ರಹಿಸಲು ಅನುಕೂಲವಾಗುವಂತೆ ಈ ಸಂಘಗಳಿಗೆ ಒಂದುಬಾರಿಯ ಅನುದಾನವಾಗಿ 50,000 ರೂಪಾಯಿಗಳನ್ನು ಉತ್ತೇಜನ ಧನವನ್ನಾಗಿ ನೀಡಲಾಗುವುದು.

70. ಅಪೆಕ್ಸ್ ಬ್ಯಾಂಕ್, ಜಿಲ್ಲಾ ಸಹಕಾರಿ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ಅಲ್ಪಾವಧಿ ಸಾಲ ವ್ಯವಸ್ಥೆ ಪದ್ಧತಿಯಲ್ಲಿ ಗಮನಾರ್ಹ ಸಾಧನೆ ಮಾಡಿವೆ. 1995-96ರಲ್ಲಿ 250 ಕೋಟಿ ರೂ.ಗಳ ಅಲ್ಪಾವಧಿ ಸಾಲ ನೀಡಿಕೆಯ ಗುರಿಗೆ ಪ್ರತಿಯಾಗಿ 450.68 ಕೋಟಿ ರೂ.ಗಳನ್ನು ನೀಡಲಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇಕಡಾ 48.51ರ ಬೆಳವಣಿಗೆಯಾಗಿದೆ. ಇದೇ ರೀತಿ ಈ ವರ್ಷ 350 ಕೋಟಿ ರೂಗಳ ಗುರಿಗೆ ಪ್ರತಿಯಾಗಿ ಈಗಾಗಲೇ 425.16 ಕೋಟಿ ರೂ.ಗಳನ್ನು ನೀಡಲಾಗಿದೆ. ಮುಂದಿನ ವರ್ಷ ಈ ಗುರಿಯನ್ನು 575 ಕೋಟಿ ರೂ.ಗಳಿಗೆ ನಿಗದಿಪಡಿಸಲಾಗಿದ್ದು ಇದನ್ನು ಗುರಿ ಮೀರಿ ಸಾಧಿಸುವ ಭರವಸೆ ಸಮಗಿದೆ. 2001ನೇ ಇಸವಿಗೆ 1,000 ಕೋಟಿ ರೂ.ಗಳಷ್ಟು ಕೃಷಿ ಸಾಲ ನೀಡುವ ಗುರಿಯನ್ನು ತಲುಪುವುದ ನಮ್ಮ ಉದ್ದೇಶವಾಗಿದೆ.

71. ದೀರ್ಘಾವಧಿ ಕೃಷಿ ಸಾಲ ಯೋಜನೆಯಡಿ ಈ ವರ್ಷ 160 ಕೋಟಿ ರೂ.[illegible]ಡುಗಡೆ ಮಾಡುವ ನಿರೀಕ್ಷೆ ಇದೆ. (ಕೆಎಸ್‌ಸಿಎಆರ್‌ಡಿಬಿ)ಯ 1997-98 ಅಭಿವೃದ್ಧಿ ಕ್ರಿಯಾ [illegible]ಯಲ್ಲಿ 250 ಕೋಟಿ ರೂ.ಗಳ ಸಾಲ ವಿತರಣಾ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

ಪಶುಸಂಗೋಪನೆ, ಡೈರಿ ಅಭಿವೃದ್ಧಿ ಮತ್ತು ಮೀನುಗಾರಿಕೆ

72. ರಾಜ್ಯದಲ್ಲಿ ಈಗ ಶೇಕಡಾ 95 ರಷ್ಟು ಜಾನುವಾರುಗಳು ಆರೋಗ್ಯ ರಕ್ಷಣೆ ವ್ಯಾಪ್ತಿಗೆ ಒಳಪಟ್ಟಿವೆ. ಈ ವರ್ಷ 100 ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರ ಮತ್ತು 100 ಪಶುವೈದ್ಯಕೀಯ ಔಷಧಾಲಯಗಳನ್ನು ಆರಂಭಿಸಲಾಗುವುದು. ಇದರಿಂದ ರಾಜ್ಯವು ಜಾನುವಾರು ಆರೋಗ್ಯ ರಕ್ಷಣೆಯಲ್ಲಿ ಶೇಕಡಾ 100 ರಷ್ಟು ಗುರಿ ಸಾಧಿಸಿದಂತಾಗುತ್ತದೆ. ಕರ್ನಾಟಕ ಇಂಥ ಸಾಧನೆ ಮಾಡಿದ ಮೊಟ್ಟ ಮೊದಲ ರಾಜ್ಯವಾಗಲಿದೆ.

73. ಕರಾವಳಿ ಜಿಲ್ಲೆಗಳ ಮೀನುಗಾರಿಕೆಗೆ ಮೂಲ ಸೌಲಭ್ಯಗಳನ್ನು ಒದಗಿಸಲು 'ಅಳವೇಕೋಡಿ' ಮತ್ತು 'ಬೇಲಿಕೇರಿ' ಬಳಿ ಮೀನು ಇಳಿಸುವ ಜೆಟ್ಟಿಗಳನ್ನು ನಿರ್ಮಿಸಲಾಗುವುದು. ಮಂಗಳೂರು ಮತ್ತು ಕಾರವಾರ ಮೀನುಗಾರಿಕೆ ಬಂದರಿನಲ್ಲಿರುವ ಹಡಗುಕಟ್ಟೆಯನ್ನು ವಿಸ್ತರಿಸಲಾಗುವುದು. ಕರಾವಳಿ ಜಿಲ್ಲೆಗಳ ಮೀನುಗಾರರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಲು 23.24 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಮಂಡಳಿ (ಎನ್‌ಸಿಡಿಸಿ) ನೆರವಿನೊಡನೆ ಮೀನುಗಾರಿಕೆಯ ಸಮಗ್ರ ಕಡಲ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಈ

ಸರ್ಕಾರವು ಕೃಷ್ಣಾ ಮತ್ತು ಕಾವೇರಿ ಯೋಜನೆಗಳನ್ನು ಪೂರ್ಣಗೊಳಿಸಲು ಹೆಚ್ಚಿನ ಆದ್ಯತೆ ನೀಡಿದೆ. ರಾಜ್ಯವು 1997-98ನೇ ಸಾಲಿನ ಯೋಜನೆಯಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿಗಾಗಿ 1120 ಕೋಟಿ ರೂ.ಗಳನ್ನು ಸಣ್ಣ ನೀರಾವರಿಗಾಗಿ 92.96 ಕೋಟಿ ರೂ.ಗಳನ್ನು, ಒದಗಿಸುವ ಮೂಲಕ ನೀರಾವರಿ ವಿಷಯದಲ್ಲಿ ತನಗಿರುವ ಬಲವಾದ ಬದ್ಧತೆಯನ್ನು ಮುಂದುವರಿಸಿದೆ.

75. ಕೃಷ್ಣಾ ಭಾಗ್ಯ ಜಲ ನಿಗಮವು 1996-97ನೇ ಸಾಲಿನಲ್ಲಿ 509 ಕೋಟಿ ರೂ.ಗಳನ್ನು ಮಾರುಕಟ್ಟೆಯ ಮೂಲಕ ಸಂಗ್ರಹಿಸಿದೆ. 1997-98ರಲ್ಲಿ 650 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ 1996-97ರಲ್ಲಿ (ಜನವರಿವರೆಗೆ) 466 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ವರ್ಷಾಂತ್ಯದ ವೇಳೆಗೆ ಸುಮಾರು 700 ಕೋಟಿ ರೂ.ಗಳನ್ನು ವೆಚ್ಚ ಮಾಡುವ ನಿರೀಕ್ಷೆ ಇದೆ. ಈ ಯೋಜನೆಗೆ ಸಂಬಂಧಿಸಿದಂತೆ ಪುನರ್ ವ್ಯವಸ್ಥೆ ಮತ್ತು ಪುನರವಸತಿ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಂಡಿದ್ದು ಇದಕ್ಕಾಗಿ 1996-97ರಲ್ಲಿ ಸುಮಾರು 88 ಕೋಟಿ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡಿದೆ. ರಾಜ್ಯವು ಬಚಾವತ್ ತೀರ್ಪಿನ ತನ್ನ ಪಾಲಿನ ನೀರನ್ನು ಬಳಸಿಕೊಳ್ಳುವಲ್ಲಿ ತನ್ನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

76. ಕಾವೇರಿ ಕಣಿವೆಯಲ್ಲಿ ಹಾರಂಗಿ, ಹೇಮಾವತಿ, ಕಬಿನಿ, ಅರ್ಕಾವತಿ ಯೋಜನೆಗಳಿಗೆ ಸಂಬಂಧಿಸಿದ ಕಾಮಗಾರಿಗಳು, ಕೃಷ್ಣರಾಜಸಾಗರದ ಆಧುನೀಕರಣ, ಡಿ. ದೇವರಾಜ ಅರಸು ಕಾಲುವೆಯ ನಿರ್ಮಾಣ ಮತ್ತು ಇತರ ಮಧ್ಯಮ ಪ್ರಮಾಣದ ಯೋಜನೆಗಳನ್ನು ಮುಂದುವರಿಸಿ ತ್ವರಿತವಾಗಿ ಮುಗಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಕಾವೇರಿ ಕಣಿವೆ ಯೋಜನೆಗಳಿಗಾಗಿ 1997-98ನೇ ಸಾಲಿನಲ್ಲಿ 305 ಕೋಟಿ ರೂಪಾಯಿಗಳನ್ನು (ಯೋಜನೇತರ ಬಾಬಿನಲ್ಲಿ) ಒದಗಿಸಲಾಗಿದೆ.

77. ಆರು ಮಧ್ಯಮ ಹಾಗೂ 88 ಸಣ್ಣ ನೀರಾವರಿ ಯೋಜನೆಗಲ ಕಾಮಗಾರಿಗಳಿಗಾಗಿ 143.92 ಕೋಟಿ ರೂಪಾಯಿಗಳನ್ನು ಆರ್‌ಐಡಿಎಫ್-1 ಸಾಲದ ನೆರವನ್ನು ಒದಗಿಸಿದ್ದು ಈ ಕಾಮಗಾರಿಗಳು ಕಾರ್ಯಗತವಾಗುತ್ತಿವೆ. ಇದರಲ್ಲಿ ಹತ್ತು ಸಣ್ಣ ನೀರಾವರಿ ಯೋಜನೆಗಳು ಈಗಾಗಲೇ ಪೂರ್ಣಗೊಂಡಿದ್ದು ಉಳಿದ ಯೋಜನೆಗಳು ವಿವಿಧ ಹಂತಗಳಲ್ಲಿವೆ. ಆರ್‌ಐಡಿಎಫ್-2 ಯೋಜನೆಯಡಿ ನಬಾರ್ಡ್ ಸಂಸ್ಥೆಯು ಗುಲ್ಬರ್ಗಾ ಜಿಲ್ಲೆಯ ಬೆಣ್ಣೆತೊರೆ ಯೋಜನೆಯನ್ನು ಸಂಪೂರ್ಣಗೊಳಿಸಲು 50 ಕೋಟಿ ರೂ.ಗಳ ಸಾಲವನ್ನು ಮಂಜೂರು ಮಾಡಿದೆ. ಇದರ ಜೊತೆಗೆ, ಬೆಳಗಾವಿ ಜಿಲ್ಲೆಯಲ್ಲಿ ಎರಡು ಬ್ಯಾರೇಜುಗಳು ಮತ್ತು ಬಿಜಾಪುರ ಜಿಲ್ಲೆಯಲ್ಲಿ ಒಂದು ಬ್ಯಾರೇಜನ್ನು ಆರ್‌ಐಡಿಎಫ್-II ಯೋಜನೆಯಡಿ ನಿರ್ಮಾಣ ಮಾಡಲಾಗುವುದು.

ಇಂಧನ

78. ಜಲ ವಿದ್ಯುತ್ ಉತ್ಪಾದನಾ ಘಟಕಗಳ ಜಲಾನಯನ ಪ್ರದೇಶಗಳಲ್ಲಿ ಈ ವರ್ಷ ಮುಂಗಾರು ಮಳೆ ಸಾಕಷ್ಟು ಬೀಳದೆ ನಿರಾಶೆಗೊಳಿಸಿದೆ. ನಮ್ಮ ಜಲ ವಿದ್ಯುತ್‌ಉತ್ಪಾದನೆಯು ಕಳೆದ ವರ್ಷಕ್ಕಿಂತ ಸುಮಾರು ಶೇಕಡಾ 28ರಷ್ಟು ಕಡಿಮೆಯಾಗಿದೆ. ರಾಯಚೂರು ಶಾಖೋತ್ಪನ್ನ ವಿದ್ಯುತ ಕೇಂದ್ರವು ತನ್ನ

ಸ್ಥಾವರ ಧಾರಣ ಸಾರ್ಮರ್ಥ್ಯ ಶೇಕಡಾ 75 ರಷ್ಟು ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ ಒಟ್ಟು ವಿದ್ಯುತ್ ಉತ್ಪಾದನಾ ಪ್ರಮಾಣ ಏರಿಕೆಯಾಗದೆ ನಿಂತಲ್ಲಿಯೇ ಇದೆ. ಜಲವಿದ್ಯುತ್ ಉತ್ಪಾದನೆ ಕುಂಠಿತವಾಗಿರುವುದರಿಂದ ಒಟ್ಟಾರೆ ವಿದ್ಯುತ್ ಉತ್ಪಾದನಾ ವೆಚ್ಚವು ಹೆಚ್ಚಾಗಿದ್ದು ಹಾಗೂ ಇತರೆ ವಿಧಾನದಲ್ಲಿನ ವಿದ್ಯುತ್ ಉತ್ಪಾದನಾ ವೆಚ್ಚಗಳೂ ದುಬಾರಿಯಾಗಿರುವುದರಿಂದ ವ್ಯವಸ್ಥೆಯ ಮೇಲೆ ಮತ್ತಷ್ಟು ಹೊರೆಯಾಗಿದೆ. ವಿದ್ಯುತ್ ದರಗಳನ್ನು ಹೆಚ್ಚಿಸಿದಾಗ್ಯೂ ಈ ಹೆಚ್ಚಳಗಳನ್ನು ಭರಿಸಲು ಸಾಧ್ಯವಾಗಿಲ್ಲ. ಇದರ ಪರಿಣಾಮವಾಗಿ ವಿದ್ಯುತ್ ವಿತರಣಾ ವ್ಯವಸ್ಥೆಗಾಗಿ ಕೈಗೊಂಡಿರುವ ಸುಧಾರಣಾ ಕಾಮಗಾರಿಗಳು ಸಹಾ ಕುಂಠಿತಗೊಂಡಿವೆ.

79. ವಿದ್ಯುತ್ ವಲಯದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹಿಸಲಾಗುತ್ತಿದೆ. 600 ಮೆಗಾವ್ಯಾಟ ಸಾರ್ಮರ್ಥ್ಯವರೆಗಿನ ವಿದ್ಯುತ್ ಉತ್ಪಾದನೆಯ ಬಹು ಇಂಧನ ಕಿರು ಯೋಜನೆಗಳಿಗಾಗಿ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಬಾರ್ಜ್‌ಗಳ ಮೇಲೆ ಸ್ಥಾಪಿಸಲಾಗುವ ನಾಲ್ಕು ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಾರಗಳ ಜೊತೆ ಕೂಡಾ ವಿದ್ಯುಚ್ಛಕ್ತಿ ಖರೀದಿಗಾಗಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈಗಾಗಲೇ ಒಪ್ಪಂದ ಪತ್ರಗಳಿಗೆ ಸಹಿ ಹಾಕಲಾಗಿರುವ ಇತರ ಯೋಜನೆಗಳ ಬಗ್ಗೆ ಸಹಾ ತೀವ್ರ ಗಮನ ಹರಿಸಲಾಗುತ್ತಿದೆ. ಮಂಗಳೂರಿನ ಸಮೀಪದಲ್ಲಿ ಮಂಗಳೂರು ಪವರ್ ಕಂಪೆನಿಯು ಸ್ಥಾಪಿಸಲು ಉದ್ದೇಶಿಸಿರುವ 1000 ಮೆ.ವ್ಯಾ. ವಿದ್ಯುಚ್ಛಕ್ತಿ ಸಾರ್ಮರ್ಥ್ಯ ಸ್ಥಾವರಕ್ಕೆ ಕೇಂದ್ರ ಸರ್ಕಾರವು ಪ್ರತಿಭದ್ರತೆಯನ್ನು ನೀಡಲು ಒಪ್ಪಿದೆ. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರವು ಈ ಯೋಜನೆಗೆ ತಾಂತ್ರಿಕ-ಆರ್ಥಿಕ ಒಪ್ಪಿಗೆಯನ್ನು ನೀಡಿದೆ. ಪರಿಸರ ಹಾನಿಯ ಅತ್ಯಲ್ಪ ಸಾಧ್ಯತೆಯೂ ಇರದಂತೆ ಎಚ್ಚರಿಕೆ ವಹಿಸುವುದಕ್ಕಾಗಿ ಸ್ಥಾವರದಲ್ಲಿ ವಿಶೇಷ ಉಪಕರಣಗಳನ್ನು ಅಳವಡಿಸಲಿದ್ದು, ಪರಿಸರ ಹಾನಿಗೆ ಸಂಬಂಧಿಸಿದ ಎಲ್ಲ ಆತಂಕಗಳನ್ನು ನಿವಾರಿಸಲಾಗಿದೆ.

80. ರಾಯಚೂರು ಶಾಖೋತ್ಪನ್ನ ಯೋಜನೆಯ ಕಾಮಗಾರಿಗಳು ಚುರುಕಿನಿಂದ ನಡೆಯುತ್ತಿದ್ದು ಇದರ ಇನ್ನೊಂದು ಘಟಕವು 1999ರ ಸೆಪ್ಟೆಂಬರ್ ಅಂತ್ಯದಲ್ಲಿ ಕಾರ್ಯಾರಂಭ ಮಾಡಲಿದೆ. ವಿದ್ಯುತ್ ವಿತರಣೆಯಲ್ಲಿ ಪರಿಣಾಮಕಾರಿ ಸುಧಾರಣೆ ತರಲು ಜಂಟಿ ವಲಯದಲ್ಲಿ ಒಂದು ಕಂಪನಿಯನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇಂತಹ ಪ್ರಯತ್ನ ಮಾಡುತ್ತಿರುವ ಪ್ರಥಮ ರಾಜ್ಯ ನಮ್ಮದಾಗಿದೆ. ಈ ಎಲ್ಲ ಚಟುವಟಿಕೆಗಳನ್ನು ನಿರಂತರವಾಗಿ ಮುಂದುವರಿಸಲು ನೂತನ ವಿದ್ಯುತ್ ನೀತಿಯೊಂದನ್ನು ರಾಜ್ಯದಲ್ಲಿ ಘೋಷಿಸಲಾಗಿದೆ.

81. ವಿದ್ಯುತ್ ವಲಯದ ಸುಧಾರಣೆಯಲ್ಲಿ ಕಳೆದ ವರ್ಷ ನಾವು ಮಾಡಿದ ಪ್ರಯತ್ನಗಳನ್ನು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಗಮನಿಸಿವೆ. ವಿಶ್ವಬ್ಯಾಂಕ್ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ಗಳು ಕರ್ನಾಟಕಕ್ಕೆ ಭೇಟಿ ನೀಡಿ ನಾವು ಆರಂಭಿಸಿರುವ ಸುಧಾರಣೆ ಚಟುವಟಿಕೆಗಳ ಬಗ್ಗೆ ಆಸಕ್ತಿ ವ್ಯಕ್ತಪಡಿಸಿವೆ. ಅತ್ಯಗತ್ಯವಾದ ಕೆಲವು ಯೋಜನೆಗಳನ್ನು ಆರಂಭಿಸಲು ಹಾಗೂ ಮುಂದುವರಿಸಲು ಧನ ಸಹಾಯ ನೀಡಲೂ ಸಹ ಅವು ಮುಂದೆ ಬಂದಿವೆ.

ಶಿಕ್ಷಣ

82. ಕರ್ನಾಟಕವು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ಎಂಟನೆಯ ಯೋಜನಾ ಅವಧಿಯಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಗಮನ ನೀಡಿ ಗಣನೀಯ ಸಾಧನೆಯನ್ನು ಮಾಡಿದೆ. 1996-97ರ ಅವಧಿಯಲ್ಲಿ ಶಿಕ್ಷಣವಲಯದ ನಮ್ಮ ಸಾಧನೆ ಕೆಳಕಂಡಂತಿದೆ.

- 18,000 ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು 2,500 ಸೆಕೆಂಡರಿ (ಪ್ರೌಢ) ಶಾಲಾ ಶಿಕ್ಷಕರ ನೇಮಕ ಮಾಡಲಾಗಿದೆ.
- 873 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದ್ದೇವೆ. 978 ಕಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತ ಪ್ರಾಥಮಿಕ ಶಾಲೆಗಳಾಗಿ ಮೇಲ್ದರ್ಜೆಗೇರಿಸಿದ್ದೇವೆ. 5 ರಿಂದ 7ನೆಯ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಒಂದು ಲಕ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಾಲಕಿಯರಿಗೆ ಶಾಲಾ ಬ್ಯಾಗುಗಳನ್ನು ಒದಗಿಸಿದ್ದೇವೆ.
- 237 ಸರ್ಕಾರಿ ಪ್ರೌಢ ಶಾಲೆಗಳನ್ನು ಆರಂಭಿಸಿದ್ದೇವೆ. 60 ಸರ್ಕಾರಿ ಪ್ರೌಢ ಶಾಲೆಗಳನ್ನು ಸಂಯುಕ್ತ ಕಿರಿಯ ಕಾಲೇಜುಗಳಾಗಿ ಮೇಲ್ದರ್ಜೆಗೇರಿಸಿದ್ದೇವೆ. 534 ಪ್ರೌಢ ಶಾಲಾ ಮುಖ್ಯೋಪಾಧ್ಯಾಯರನ್ನು ಆಯ್ಕೆ ಮಾಡಲು ಕ್ರಮ ಕೈಗೊಂಡಿದ್ದೇವೆ. ಪದವಿ ಕಾಲೇಜುಗಳ 732 ಉಪನ್ಯಾಸಕರನ್ನು ನೇಮಕ ಮಾಡಲು ಮತ್ತು ಪದವಿ ಪೂರ್ವ ಕಾಲೇಜುಗಳಿಗೆ 864 ಉಪನ್ಯಾಸಕರನ್ನು ನೇಮಕ ಮಾಡಲು ಕ್ರಮ ಕೈಕೊಂಡಿದ್ದೇವೆ.
- ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ 1900 ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಕ್ರಮಬದ್ಧಗೊಳಿಸಲು ಕ್ರಮ ಕೈಕೊಂಡಿದ್ದೇವೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆಂಗ್ಲೋ ಇಂಡಿಯನ್ ಸಮುದಾಯದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಶುಲ್ಕ ತುಂಬಿಕೊಡುವ ಸೌಲಭ್ಯವನ್ನು ನೀಡಿದ್ದೇವೆ.

83. ರಾಜ್ಯದಲ್ಲಿ 240 ಕೋಟಿ ರೂ.ಗಳ ವೆಚ್ಚದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು (ಡಿಪಿಇಪಿ) ಇನ್ನೂ ಆರು ಜಿಲ್ಲೆಗಳು, ಅಂದರೆ, ಬೆಂಗಳೂರು (ಗ್ರಾಮಾಂತರ) ಮೈಸೂರು, ಬಳ್ಳಾರಿ, ಬೀದರ್, ಗುಲ್ಬರ್ಗಾ ಮತ್ತು ಬಿಜಾಪುರ - ಒಳಗೊಳ್ಳುವಂತೆ ವಿಸ್ತರಿಸಲಾಗಿದೆ.

84. 1997-98ರಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳಲು ಉದ್ದೇಶಿಸಲಾಗಿದೆ :

- 18,500 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ.
- ಹಾಲಿ ನಿರ್ಮಾಣ ಹಂತದಲ್ಲಿರುವ 5,000 ಕೊಠಡಿಗಳ ನಿರ್ಮಾಣವನ್ನು ಪೂರೈಸಲಾಗುವುದು.
- 50ನೇ ಸ್ವಾತಂತ್ರ್ಯ ಉತ್ಸವದ ಸಂದರ್ಭದಲ್ಲಿ ನಿರ್ಮಿಸಲಾಗುತ್ತಿರುವ 4,000 ಶಾಲಾ ಕೊಠಡಿಗಳನ್ನು ಹೊರತು ಪಡಿಸಿ ೬,೦೦೦ ಹೊಸ ಶಾಲಾ ಕೊಠಡಿಗಳನ್ನು

ನಿರ್ಮಿಸಲಾಗುವುದು.

85. ಎರಡು ಹೊಸ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಈಗಿರುವ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಹೊಸ ಕೋರ್ಸುಗಳನ್ನು ನಿರ್ಮಿಸಲಾಗುವುದು.

ಆರೋಗ್ಯ

86. 1996ರಲ್ಲಿ ನಾವು ಪ್ರಾರಂಭಿಸಿದ ನಿಯತ ಶಾಲಾ ಆರೋಗ್ಯ ತಪಾಸಣೆ ಕಾರ್ಯಕ್ರಮವು ಭಾರೀ ಯಶಸ್ಸನ್ನು ಪಡೆದಿದ್ದು, ಅದರ ಪ್ರಯೋಜನವನ್ನು 1 ರಿಂದ 4ನೇ ತರಗತಿವರೆಗಿನ 40 ಲಕ್ಷ ಮಕ್ಕಳು ಪಡೆದುಕೊಂಡಿದ್ದಾರೆ. 1995ರಲ್ಲಿ ಕರ್ನಾಟಕವು ಸ್ಥಾಪಿಸಿದ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಬಡಜನರ ಮರಣಾಂತಿಕ ಕಾಯಿಲೆಗಳಿಗೆ ನೆರವು ನೀಡುವ ವ್ಯವಸ್ಥೆಯನ್ನು ಮೆಚ್ಚಿರುವ ನ್ಯಾಷನಲ್ ಇಲ್‌ನೆಸ್ ಅಸೋಸಿಯೇಷನ್ ಫಂಡ್ ಸಂಸ್ಥೆಯು ಈ ಮಾದರಿಯನ್ನು ಅಳವಡಿಸಿ ಕೊಂಡು ಬಡಜನರಿಗೆ ನೆರವಾಗುತ್ತಿದೆ.

87. ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜು ಮತ್ತು ಬಳ್ಳಾರಿಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಕೂಡ ಸಂಪೂರ್ಣ ಸ್ವಾಯತ್ತತೆ ಕೊಡಲಾಗಿದೆ. ಎರಡು ಸಂಸ್ಥೆಗಳಲ್ಲಿ ಮೂಲ ಸೌಕರ್ಯ ಮತ್ತು ಬೋಧನಾ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ 20 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

88. ವಿಶ್ವಬ್ಯಾಂಕ್ ಯೋಜನೆಯಡಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳು ಮತ್ತು ಗ್ರಾಮೀಣ ಆರೋಗ್ಯ ಕೇಂದ್ರಗಳನ್ನು ಬಲಗೊಳಿಸಲಾಗುತ್ತದೆ. ಈ ಯೋಜನೆಗೆ 1997-98ರಲ್ಲಿ 45 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದು. (ಕೆಎಫ್‌ಡಬ್ಲು) ಜರ್ಮನ್ ಅಭಿವೃದ್ಧಿ ಬ್ಯಾಂಕ್‌ನ ಜೊತೆ ಮಾಡಿಕೊಂ ಡಿರುವ ಒಪ್ಪಂದದಿಂದಾಗಿ ಗುಲ್ಬರ್ಗಾ ಕಂದಾಯ ವಿಭಾಗದ ವ್ಯಾಪ್ತಿಯಲ್ಲಿ ಬರುವ 26 ಗ್ರಾಮೀಣ ಎರಡನೆ ಮಟ್ಟದ ಆರೋಗ್ಯ ಸೌಲಭ್ಯಗಳ ಪುನರ್‌ನವೀಕರಣ ಮತ್ತು ಉನ್ನತೀಕರಣವಾಗಲಿದೆ. ಇದಲ್ಲದೆ ರಾಯಚೂರು ಜಿಲ್ಲೆ ಆಸ್ಪತ್ರೆಯ ಆಧುನೀಕರಣಕ್ಕಾಗಿ 29.25 ಕೋಟಿ ರೂ.ಗಳ ಯೋಜನೆ ಯನ್ನು ಓಪಿಇಸಿ ಸಂಸ್ಥೆಯ ನೆರವಿನೊಡನೆ ಜಾರಿಗೊಳಿಸಲಾಗುವುದು. ಮಕ್ಕಳು ಮತ್ತು ಮಹಿಳೆಯ ರಿಗಾಗಿಯೇ ಮೀಸಲಾದ 350 ಹಾಸಿಗೆಗಳ ನೂತನ ಆಸ್ಪತ್ರೆಯನ್ನು ಸಹ ರಾಯಚೂರಿನಲ್ಲಿ ತೆರೆಯಾ ಗುವುದು.

89. ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗಾಗಿ ಉಚಿತ ಆರೋಗ್ಯ ರಕ್ಷಣೆ ಒದಗಿಸಲು ಹಳದಿ ಕಾರ್ಡ್ ಯೋಜನೆಯನ್ನು ಜಾರಿಗೊಳಿಸಲಾಗಿದೆ. 1997-98ರಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದ ಮಹಿಳೆಯರ ಆರೋಗ್ಯ ರಕ್ಷಣೆಗಾಗಿ ವಿಶೇಷ ಆರೋಗ್ಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು. ಈ ಕಾರ್ಯಕ್ರಮದಡಿ ಈ ಮಹಿಳೆರ ಪ್ರಥಮ ಗರ್ಭ ಸಂದರ್ಭದಲ್ಲಿ ಪೂರಕ ಪೌಷ್ಠಿಕ ಆಹಾರ ಮತ್ತು ಇನ್ನಿತರ ಆರೋಗ್ಯ ಸೌಲಭ್ಯಗಳನ್ನು ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ ಒಂದು ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ವಾಣಿಜ್ಯ ಮತ್ತು ಕೈಗಾರಿಕೆ

90. 1996ರ ಏಪ್ರಿಲ್ 1 ರಿಂದ ಒಂದು ಹೊಸ ಕೈಗಾರಿಕಾ ನೀತಿಯನ್ನು ಜಾರಿಗೆ ತರಲಾಗಿತ್ತು. ಕೈಗಾರಿಕಾ ವಲಯಗಳ ಮೂಲ ಸೌಲಭ್ಯಗಳನ್ನು ಬಲಪಡಿಸಲು ಮತ್ತು ಸುಧಾರಿಸಲು ಆ ನೀತಿಯಲ್ಲಿ ಒತ್ತು ನೀಡಲಾಗಿತ್ತು. ಭಾರತದ ಕೈಗಾರಿಕಾ ನಕ್ಷೆಯಲ್ಲಿ ಅತ್ಯುತ್ತಮ ಸ್ಥಾನ ಪಡೆಯುವ ನಮ್ಮ ಪ್ರಯತ್ನಗಳಿಗೆ 1996-97ನೇ ಸಾಲಿನಲ್ಲಿ ಮತ್ತಷ್ಟು ಬಲ ಬಂದಿದೆ. 6577.75 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ ಇಪ್ಪತ್ತು ಭಾರಿ ಕೈಗಾರಿಕೆಗಳು; 1122.24 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ 92 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು 229.09 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ 8969 ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಈ ಅವಧಿಯಲ್ಲಿ ಅನುಮೋದನೆ ದೊರೆತಿದೆ.

91. ಕೇಂದ್ರ ನೆರವಿನ ರಫ್ತು ಉತ್ತೇಜಕ ಕೈಗಾರಿಕಾ ಪಾರ್ಕ್ ಯೋಜನೆಯನ್ನು ಪೂರ್ಣಗೊಳಿಸಿವುದರಲ್ಲಿ ಕರ್ನಾಟಕವು ಭಾರತದಲ್ಲೇ ಮೊಟ್ಟ ಮೊದಲ ರಾಜ್ಯವಾಗಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ. ಅದೇ ರೀತಿಯಲ್ಲಿ ಅಂತರರಾಷ್ಟ್ರೀಯ ಟೆಕ್ನಾಲಜಿ ಪಾರ್ಕ್‌ನ ಮೊದಲ ಹಂತ ಮುಕ್ತಾಯಗೊಳ್ಳಲಿದ್ದು, ಶೀಘ್ರದಲ್ಲೇ ಇದು ಕಾರ್ಯಾರಂಭ ಮಾಡಲಿದೆ.

92. ನಷ್ಟ ಹೊಂದುತ್ತಿರುವ ಸಣ್ಣ ಕೈಗಾರಿಕೆಗಳಿಗೆ ಪರಿಹಾರ ಮತ್ತು ಸಹಾಯ ನೀಡಲು ಒಂದು ಯೋಜನೆಯನ್ನು ಸರ್ಕಾರ ರೂಪಿಸಿದೆ.

93. ಕೈಗಾರಿಕಾ ವಲಯವನ್ನು ಮತ್ತಷ್ಟು ಸುಭದ್ರಗೊಳಿಸಲು ಮುಂದಿನ ವರ್ಷದಲ್ಲಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

- ಎಲ್ಲಾ ಭಾರಿ ಕೈಗಾರಿಕಾ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕಾ ನೆರವು ಕೇಂದ್ರಗಳನ್ನು ಮತ್ತು ಕೈಗಾರಿಕೋದ್ಯಮಿಗಳು ಮತ್ತು ಉದ್ಯಮಿಗಳಿಗೆ "ಒನ್‌ಸ್ಟಾಪ್ ಸರ್ವೀಸ್" ದೊರೆಯುವಂತೆ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಲಾಗುವುದು ಮತ್ತು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಏಜೆನ್ಸಿಗಳಿಂದ ನೆರವು ಮತ್ತು ಅನುಮತಿ ಪಡೆಯಲು ಸಹಾಯ ಹಸ್ತ ನೀಡಲಾಗುವುದು.
- ಎಲ್ಲಾ ಭಾರಿ ಕೈಗಾರಿಕಾ ಪ್ರದೇಶಗಳಲ್ಲಿ ಸೂಕ್ತ ಮೂಲ ಸೌಲಭ್ಯಗಳ ಸುಧಾರಣೆ ಮತ್ತು ನಿರ್ವಹಣೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ಕೈಗೊಳ್ಳಲಾಗುವುದು.
- ಹಾಸನ ಮತ್ತು ಹುಬ್ಬಳ್ಳಿಯಲ್ಲಿ ಎರಡು ಹೊಸ ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಸಂಕೀರ್ಣವನ್ನು ಸ್ಥಾಪಿಸಲಾಗುವುದು.
- ಜವಳಿ ಕೈಗಾರಿಕೆಯ ಬೆಳವಣಿಗೆಗೆ ಅನುಕೂಲವಾಗುವಂತೆ ಹುಬ್ಬಳ್ಳಿ-ಧಾರವಾಡ ಪ್ರದೇಶದಲ್ಲಿ ಸಮಗ್ರ ಮೂಲಭೂತ ಸೌಲಭ್ಯಗಳನ್ನು ಸೃಜಿಸಲಾಗುವುದು.
- ಬೆಂಗಳೂರಿನಲ್ಲಿ ರಾಷ್ಟ್ರೀಯ ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯನ್ನು ಆರಂಭಿಸಲಾಗುವುದು.

94. ಬೆಂಗಳೂರು ನಗರವು ರಾಷ್ಟ್ರದ ಸಿಲಿಕಾನ್ ಕಣಿವೆಯಾಗಿ ರೂಪುಗೊಳ್ಳುತ್ತಿದೆ. ಇನ್‌ಫಾರ್ಮೇಶನ್ ತಾಂತ್ರಿಕತೆಯ ಬೆಳವಣಿಗೆಗೆ ಬಲವನ್ನು ನೀಡುವ ಸಲುವಾಗಿ ನಮ್ಮ ಕುಶಲತೆಯ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಇದಕ್ಕೆ ನೆರವಾಗುವ ಒಂದು ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು ಕೇಂದ್ರವನ್ನು ಕೋರಲಾಗಿದೆ. ಕೇಂದ್ರ ಸರ್ಕಾರವು 97-98ನೇ ಸಾಲಿನಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸುವ ಆಶಯ ನಮಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ

95. ಮೂರು ಪ್ರಮುಖ ಕ್ಷೇತ್ರಗಳಿಗೆ ಅಂದರೆ ಶಿಕ್ಷಣ, ವಸತಿ, ಸಣ್ಣ ನೀರಾವರಿ ಮತ್ತು ಕೊಳಗೇರಿ ಅಭಿವೃದ್ಧಿ ಕ್ಷೇತ್ರಗಳಿಗೆ ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸುವ ಮೂಲಕ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಒಂದು ಮಾರ್ಗ ಪ್ರವರ್ತಕ ಕ್ರಮವನ್ನು ಕೈಗೊಂಡಿದೆ. ವಿಶೇಷ ಘಟಕ ಯೋಜನೆಯ ನಿಧಿಗಳನ್ನು ಬಳಸಿಕೊಳ್ಳುವಲ್ಲಿ ಆಗುತ್ತಿದ್ದ ವಿಳಂಬವನ್ನು ತಪ್ಪಿಸಲು 96-97ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ 118 ಕೋಟಿ ರೂಪಾಯಿಗಳನ್ನು ಒಟ್ಟುಗೂಡಿಸಿ ಮೇಲಿನ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳಲಾಯಿತು. 97-98ನೇ ಸಾಲಿನ ವಿವಿಧ ಇಲಾಖೆಗಳ ವಿಶೇಷ ಘಟಕ ಯೋಜನೆಯ ಮೊತ್ತವನ್ನು ಈ ಸಾಲಿನ ಆರ್ಥಿಕ ವರ್ಷದ ಆರಂಭದಲ್ಲೇ ಸೂಚಿಸಲಾಗಿದ್ದು ಇದರಿಂದ ಈ ಕಾರ್ಯಕ್ರಮದ ಶೀಘ್ರ ಹಾಗೂ ಪರಿಣಾಮಕಾರಿ ಅನುಷ್ಠಾನ ಸಾಧ್ಯವಾಗುತ್ತದೆ.

96. ಎಂಟನೆ ಯೋಜನಾವಧಿಯ ಅವಧಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗಾಗಿ 416 ವಸತಿ ನಿಲಯ ಮತ್ತು 61 ನಿವಾಸಿ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ 5 ವರ್ಷಗಳ ಅವಧಿಯಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗಾಗಿ 1741 ಕೋಟಿ ರೂ.ಗಳನ್ನು ಯೋಜನಾ ಬಾಬಿನ ಅಡಿಯಲ್ಲಿ ವೆಚ್ಚ ಮಾಡಲಾಗಿದೆ.

97. ಕಳೆದ ವರ್ಷ ಸರ್ಕಾರವು 2500 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ 50 ವಿದ್ಯಾರ್ಥಿ ನಿಲಯಗಳಿಗೆ ಮಂಜೂರಾತಿ ನೀಡಿದೆ. ಇನ್ನೂ ಹೆಚ್ಚಿನ 5000 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಡಲು ಹಾಲಿ ಇರುವ ವಿದ್ಯಾರ್ಥಿನಿಲಯಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. 1996-97ನೇ ಸಾಲಿನಲ್ಲಿ 47 ಹಾಸ್ಟೆಲ್ ಕಟ್ಟಡಗಳನ್ನು ಪೂರ್ಣಗೊಳಿಸಲಾಗಿದೆ. 44 ಹಾಸ್ಟೆಲ್ ಕಟ್ಟಡಗಳು ಮುಕ್ತಾಯದ ಹಂತದಲ್ಲಿವೆ. ಸರ್ಕಾರವು, ವಿದ್ಯಾರ್ಥಿ ನಿಲಯಗಳಲ್ಲಿನ ಊಟದ ವೆಚ್ಚವನ್ನು ಪ್ರತಿ ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ 100 ರೂಪಾಯಿ ಹೆಚ್ಚಿಸಲು ತೀರ್ಮಾನಸಿದೆ. ಸವಲತ್ತುಗಳಿಂದ ವಂಚಿತವಾದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸಲು 40 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ. 1996-97ನೇ ಸಾಲಿನಲ್ಲಿ 87,500 ಕುಟುಂಬಗಳನ್ನು ಒಳಗೊಳ್ಳುವ ಒಂದು ಮಹತ್ವಾಕಾಂಕ್ಷೆಯ ಗೃಹನಿರ್ಮಾಣ ಕಾರ್ಯಕ್ರಮವನ್ನು ರೂಪಿಸಿದೆ. ಇದರಂತೆ 38,000 ಮನೆಗಳನ್ನು ನಿರ್ಮಿಸಲಾಗಿದ್ದು ಮತ್ತು ಉಳಿದಿರುವ ಮನೆಗಳನ್ನು ಮುಂದಿನ 2-3 ತಿಂಗಳುಗಳಲ್ಲಿ ಪೂರ್ಣಗೊಲಿಸಲಾಗುವುದು. ಗಂಗಾ ಕಲ್ಯಾಣ ಯೋಜನೆ ಮತ್ತು ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಗಳ ಅಡಿಯಲ್ಲಿ 3300 ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಇದರಿಂದ 4000 ಕುಟುಂಬಗಳು ಪ್ರಯೋಜನ ಪಡೆಯಲಿವೆ.

98. ಮುಂದಿನ ಹಣಕಾಸು ವರ್ಷದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಈ ಮುಂದಿನ ಪ್ರಮುಖ ಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರಿಗಾಗಿ 80,000 ಮನೆಗಳನ್ನು ನಿರ್ಮಿಸಲಾಗುವುದು. (ಇವರಲ್ಲಿ 35,00 ಅಂಬೇಡ್ಕರ್ ಮನೆಗಳು) ಅಂಬೇಡ್ಕರ್ ಗೃಹ ಯೋಜನೆಯನ್ನು ಪರಿಶಿಷ್ಟ ಪಂಗಡಗಳಿಗೂ ವಿಸ್ತರಿಸಲಾಗುವುದು.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರಿಗೆ ಸೇರಿದ 20,000 ಎಕರೆ ಜಮೀನಿಗೆ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ನೀರಾವರಿ ಸೌಕರ್ಯ ಕಲ್ಪಿಸಲಾಗುವುದು.
- 50 ಮೆಟ್ರಿಕ್‌ಪೂರ್ವ ಮತ್ತು 25 ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗುವುದು. ಇದರಲ್ಲಿ ಶೇಕಡಾ 50ರಷ್ಟು ಬಾಲಕಿಯರಿಗಾಗಿ ಮೀಸಲಿಡಲಾಗುವುದು.
- 75 ಹೊಸ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ ಮತ್ತೆ 75 ವಿದ್ಯಾರ್ಥಿ ನಿಲಯಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.
- 40 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆದು ಇದರಲ್ಲಿ ಎರಡು ಶಾಲೆಗಳನ್ನು ಐಟಿಡಿಪಿ ಪ್ರದೇಶಗಳಲ್ಲಿ ಆರಂಭಿಸಲಾಗುವುದು.
- 30 ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡಗಳನ್ನು ಆರಂಭಿಸಲಾಗುವುದು.
- ನವಚೇತನ ಯೋಜನೆಯ ವ್ಯಾಪ್ತಿಯೊಳಗೆ 5000 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಯುವಜನರಿಗೆ ತರಬೇತಿ ನೀಡುವುದು.
- ಯುವಜನರು ತಮ್ಮ ವೃತ್ತಿಯನ್ನು ಆಯ್ಕೆಮಾಡಿಕೊಳ್ಳುವಲ್ಲಿ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ಪಡೆಯುವಲ್ಲಿ ಅವರಿಗೆ ನೆರವಾಗಲು ವೃತ್ತಿ ಮಾರ್ಗದರ್ಶಿ ವಿಭಾಗವನ್ನು ಅಂಬೇಡ್ಕರ ಸಂಶೋಧನಾ ಸಂಸ್ಥೆಯಲ್ಲಿ ತೆರೆಯಲಾಗುವುದು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

99. 1996-97ನೇ ಸಾಲಿನಲ್ಲಿ ನಿಗಮವು, 26,500 ಪರಿಶಿಷ್ಟ ಜಾತಿಯ ಮತ್ತು 4,500 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ನೆರವು ನೀಡಿದೆ. 30.94 ಕೋಟಿ ರೂ.ಗಳನ್ನು ಸಬ್ಸಿಡಿಯಾಗಿ ಹಂಚಿಕೆ ಮಾಡಲಾಗಿದೆ ಮತ್ತು 12.92 ಕೋಟಿ ರೂ.ಗಳನ್ನು ಮೂಲಧನವಾಗಿ ನೀಡಿದೆ. ಸ್ವಯಂ ಉದ್ಯೋಗ ಕಾರ್ಯಕ್ರಮದ ಅಡಿಯಲ್ಲಿ 13,702 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ನೆರವು ನೀಡಲಾಗಿದೆ ಮತ್ತು 900 ಫಲಾನುಭವಿಗಳಿಗೆ ವೃತ್ತಿ ತರಬೇತಿ ಕೋರ್ಸ್‌ಗಳಲ್ಲಿ ತರಬೇತಿ ನೀಡಲಾಗಿದೆ.

100. 1997-98ರಲ್ಲಿ ನಿಗಮದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ 52 ಸಾವಿರ ಜನರಿಗೆ ನೆರವು ನೀಡಲಾಗುವುದೆಂದು ನಿರೀಕ್ಷಿಸಲಾಗಿದೆ. ಈ ಇಲಾಖೆಯ ಚಟುವಟಿಕೆಗಳಿಗೆ ಅಗತ್ಯ ಬಿದ್ದರೆ ವಿಶೇಷ

ಘಟಕ ಯೋಜನೆಯ ಒಟ್ಟುಗೂಡಿಸಿದ ನಿಧಿಯಿಂದ ಹಣವನ್ನು ಒದಗಿಸಲಾಗುವುದು.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ

101. ನಮ್ಮ ಸರ್ಕಾರವು ಇದೇ ರೀತಿಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕ್ಷೇಮಾಭಿವೃದ್ಧಿಗೆ ಬದ್ಧವಾಗಿದೆ. 1996-97ರಲ್ಲಿ 72 ಹಾಸ್ಟೆಲ್‌ಗಳನ್ನು ಮಂಜೂರು ಮಾಡಲಾಯಿತು. 22 ಹಾಸ್ಟೆಲ್ ಕಟ್ಟಡಗಳನ್ನು ಪೂರ್ಣಗೊಳಿಸಲಾಯಿತು ಮತ್ತು 30 ಹೊಸ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ ಕೈಗೊಳ್ಳಲಾಯಿತು. ಒಂಭತ್ತು ಮುರಾರ್ಜಿದೇಸಾಯಿ ಶಾಲೆಗಳನ್ನು ಮಂಜೂರ್ಮಾಡಲಾಯಿತು. "ಬೆಳ್ಳಿ ಬೆಳಕು" ಯೋಜನೆಯ ಮೇರೆಗೆ 27 ಗ್ರಾಮಗಳಲ್ಲಿರುವ ಅತ್ಯಂತ ಹಿಂದುಳಿದ 950 ಕುಟುಂಬಗಳಿಗೆ ನೆರವು ನೀಡಲಾಯಿತು. ಸರ್ಕಾರವು, ಪ್ರತಿ ತಿಂಗಳಿಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಊಟದ ವೆಚ್ಚವನ್ನು ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ನೀಡುವಷ್ಟಕ್ಕೆ ಸಮಾನವಾಗಿ ಹೆಚ್ಚಿಸಲು ನಿರ್ಧರಿಸಿದೆ. 1997-98ನೇ ಸಾಲಿನಿಂದ ಈ ಹಾಸ್ಟೆಲ್‌ಗಳಿಗೆ ಸಾರ್ವಜನಿಕ ವಿತರಣೆ ವ್ಯವಸ್ಥೆಯ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸಲಾಗುವುದು.

102. 1997-98ರಲ್ಲಿ 50 ಹಾಸ್ಟೆಲ್‌ಗಳನ್ನು ಸ್ಥಾಪಿಸಲಾಗುವುದು. 63 ಹಾಸ್ಟೆಲ್‌ಗಳ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು ಮತ್ತು 26 ಹಾಸ್ಟೆಲ್‌ಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

103. 1996-97ನೇ ಸಾಲಿನಲ್ಲಿ ನಿಗಮವು 15,000 ಜನರಿಗೆ ಒಟ್ಟು 26 ಕೋಟಿ ರೂ.ಗಳ ಸಾಲದ ನೆರವನ್ನು ನೀಡಿದೆ. ಗಂಗಾಕಲ್ಯಾಣ ಯೋಜನೆಯ ಅಡಿಯಲ್ಲಿ 658 ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದೆ. 1997-98ನೇ ಸಾಲಿನಲ್ಲಿ, ನಿಗಮವು ಹೈನುಗಾರಿಕೆ ಘಟಕಗಳ ಸ್ಥಾಪನೆಗಾಗಿ ಮತ್ತು ಇತರ ಚಟುವಟಿಕೆಗಳಿಗಾಗಿ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ 58 ಕೋಟಿ ರೂ.ಗಳ ನೆರವನ್ನು ಪಡೆಯಲಿದೆ. ಇದರ ಮೂಲಕ 8,000 ಡೈರಿ ಘಟಕ ಮತ್ತು 8,200 ಇತರೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಇದಲ್ಲದೆ 1,000 ಜನರಿಗೆ ವೃತ್ತಿ ಆಧಾರಿತ ತರಬೇತಿ ನೀಡಲಾಗುವುದು.

ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ

104. ನಿಗಮವು, 1996-97ರಲ್ಲಿ 8,000 ಜನರಿಗೆ ನೆರವು ನೀಡಿದೆ. ಮುಂದಿನ ವರ್ಷದಲ್ಲಿ ಜನರಿಗೆ ನೆರವು ನೀಡುವುದಕ್ಕಾಗಿ ನಿಗಮವು, ರಾಷ್ಟ್ರೀಯ ಅಲ್ಪಸಂಖ್ಯಾತರ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ 10 ಕೋಟಿ ರೂಪಾಯಿಗಳ ಸಾಲವನ್ನು ಪಡೆಯಲು ಉದ್ದೇಶಿಸಿದ್ದು ಈ ಮೂಲಕ 10,000 ಜನರಿಗೆ ವಿವಿಧ ಯೋಜನೆಗಳಲ್ಲಿ ನೆರವು ನೀಡುವ ಕಾರ್ಯಕ್ರಮವಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

105. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸರ್ಕಾರ ಬದ್ಧವಾಗಿರುವುದರಿಂದ ಎಂಟನೆ ಯೋಜನೆಯಡಿಯಲ್ಲಿ ನಿಗದಿ ಪಡಿಸಿದ್ದ 303.50 ಕೋಟಿ ರೂಪಾಯಿಗಳ ಗುರಿಗೆ ಬದಲಾಗಿ 334.54

ಕೋಟಿ ರೂಪಾಯಿಗಳ ವೆಚ್ಚ ಮಾಡಲಾಗುವುದು. ಈ ಅವಧಿಯಲ್ಲಿ, 43 ಐಸಿಡಿಎಸ್ ಯೋಜನೆಗಳನ್ನು ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ 2335 ಹೆಚ್ಚುವರಿ ಅಂಗನವಾಡಿಗಳನ್ನು ಮತ್ತು ರಾಜ್ಯ ಯೋಜನೆಗಳ ಅಡಿಯಲ್ಲಿ 3413 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

106. ಪೌಷ್ಟಿಕ ಆಹಾರಗಳಿಗಾಗಿ ಕಳೆದ ಐದು ವರ್ಷಗಳಲ್ಲಿ ನಾವು ಮಾಡಿರುವ ವೆಚ್ಚವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 1992-93ರಲ್ಲಿ ಈ ಉದ್ದೇಶಕ್ಕಾಗಿ 30 ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದರೆ 1997-98ರಲ್ಲಿ ಇದಕ್ಕಾಗಿ 80 ಕೋಟಿ ರೂ.ಗಳನ್ನು ನಿಗದಿಗೊಳಿಸಲಾಗಿದೆ.

107. ಕಳೆದ ವರ್ಷದ ಆಯವ್ಯಯ ಭಾಷಣದಲ್ಲಿ, ಮಹಿಳೆಯರಿಗಾಗಿ ಹಮ್ಮಿಕೊಂಡಿದ್ದ ಕೆಲವು ಹೊಸ ಯೋಜನೆಗಳ ಬಗ್ಗೆ ನಾನು ತಿಳಿಸಿದ್ದೆ. ಅಂತೆಯೇ ರಾಜ್ಯ ಮಹಿಳಾ ಸಂಪನ್ಮೂಲ ಕೇಂದ್ರದ ಆರಂಭಕ್ಕೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. 'ವಿಕಾಸಿನಿ' ಮಾರುಕಟ್ಟೆ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಇದರಡಿ 600 ಸಣ್ಣ ಅಂಗಡಿಗಳನ್ನು (ಕಿಯಾಸ್ಕ್) ತೆರೆಯಲು ಜಿಲ್ಲೆಗಳಿಗೆ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 'ನಮ್ಮ ಮಗಳು ನಮ್ಮ ಶಕ್ತಿ' ಯೋಜನೆಯನ್ನು ಜೀವವಿಮಾ ನಿಗಮದ ಮೂಲಕ ಆರಂಭಿಸಲಾಗಿದೆ. ಈ ಯೋಜನೆಯನ್ವಯ ಹೆಣ್ಣು ಮಗುವಿನ ಹೆಸರಿನಲ್ಲಿ 2500 ರೂಪಾಯಿಗಳನ್ನು ತೊಡಗಿಸಲಾಗುವುದು. ಈ ಯೋಜನೆಯು, ಸಮಾಜವು ಹೆಣ್ಣು ಮಕ್ಕಳ ಬಗ್ಗೆ ತಳೆದಿರುವ ಬೇದಭಾವವನ್ನು ತೊಡೆದು ಹಾಕುವಲ್ಲಿ ನೆರವಾಗುತ್ತದೆ. ಈ ಮಹಿಳೆಯರ ಬದುಕಿಗೆ ಹೊಸ ತಿರುವನ್ನು ನೀಡುವ ಮಹಿಳಾ ಅಭಿವೃದ್ಧಿ ಯೋಜನೆ ಫಲ ನೀಡಲು ಪ್ರಾರಂಭಿಸಿದೆ. 1996-97ರಲ್ಲಿ ವಿವಿಧ ಫಲಾನುಭವಿ ಆಧಾರಿತ ಯೋಜನೆಗಳಲ್ಲಿ 190 ಕೋಟಿ ರೂಪಾಯಿಗಳನ್ನು ಮಹಿಳೆಯಲಿಗಾಗಿಯೇ ಮೀಸಲಿಡಲಾಗಿದೆ.

108. ಮಹಿಳಾ ಆರ್ಥಿಕ ಅಭಿವೃದ್ಧಿ ಮತ್ತು ಮಹಿಳೆಯರನ್ನು ಶಕ್ತಗೊಳಿಸುವ ಕಾರ್ಯಕ್ರಮದ ಒಪ್ಪಂದಗಳಿಗೆ ರಾಜ್ಯ ಮತ್ತು ವಿಶ್ವ ಬ್ಯಾಂಕ್ ಸಹಿ ಮಾಡಿವೆ. ಐದು ವರ್ಷಗಳ ಅವಧಿಯಲ್ಲಿ ಕೋಲಾರ, ತುಮಕೂರು, ಬಳ್ಳಾರಿ ಮತ್ತು ಚಿತ್ರದುರ್ಗ ಈ ನಾಲ್ಕು ಜಿಲ್ಲೆಗಳಲ್ಲಿ 39.15 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು. ಈ ಕಾರ್ಯಕ್ರಮದಿಂದ ಒಂಬತ್ತನೇ ಯೋಜನಾವಧಿಯಲ್ಲಿ 24,000 ಮಹಿಳೆಯರಿಗೆ ಪ್ರಯೋಜನವಾಗಲಿದೆ. ಇನ್ನೂ ನಾಲ್ಕು ಜಿಲ್ಲೆಗಳಿಗೆ ಅನ್ವಯವಾಗುವಂತೆ 12 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಹಿಳಾ ಆರ್ಥಿಕ ಸ್ವಾವಲಂಬನಾ ಕಾರ್ಯಕ್ರಮದಿಂದ ಇನ್ನೂ 2000 ಮಹಿಳೆಯರಿಗೆ ಪ್ರಯೋಜನವಾಗಲಿದೆ.

109. ಮಹಿಳಾ ಮತ್ತು ಮಕ್ಕಳ ವಲಯದಲ್ಲಿ ಸರ್ಕಾರವು ಈ ಕೆಳಕಂಡ ನೂತನ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ಬಾಲ ಕಾರ್ಮಿಕರ ಬಗ್ಗೆ ಅರಿವು ಮಾಡಿಸುವ ಕಾರ್ಯಕ್ರಮವನ್ನು ಬಾಲ ಕಾರ್ಮಿಕರ ಪುನರ್‌ವಸತಿ ಕಾರ್ಯಕ್ರಮದಡಿ ಆರಂಭಿಸಲಾಗುವುದು.

ಅರುಣೋದಯ : ಈ ಕಾರ್ಯಕ್ರಮದಡಿ ಸಮಗ್ರ ಬಾಲ ವಿಕಾಸ ಯೋಜನೆಯ ವ್ಯಾಪ್ತಿಗೆ

ಬರುವ ಮಹಿಳೆಯರು ಹಾಗೂ ಭೂರಹಿತ ಕೃಷಿ ಮಹಿಳಾ ಕಾರ್ಮಿಕರು, ಮತ್ತು ಅತೀ ಸಣ್ಣ ರೈತರಿಗೆ ಎರಡು ಎಕರೆವರೆಗೆ ಜಮೀನು ಖರೀದಿಸಲು ನೆರವು ನೀಡಲಾಗುತ್ತದೆ.

ನವಚೇತನ : ಈ ಯೋಜನೆಯಡಿಯಲ್ಲಿ ಆದಾಯ ತರುವ ಚಟುವಟಿಕೆಗಳನ್ನು ಆರಂಭಿಸಲು ವಿಧವೆಯರಿಗೆ ನೆರವು ನೀಡಲಾಗುತ್ತದೆ.

ಜಾಗೃತಿ : ಆರೋಗ್ಯ ನೈರ್ಮಲ್ಯ ಪೌಷ್ಟಿಕತೆ, ಕುಟುಂಬ ರಕ್ಷಣೆ ಮಕ್ಕಳ ಪಾಲನೆ ಮತ್ತು ಮನೆಯ ನಿರ್ವಹಣೆಯ ಬಗ್ಗೆ ಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳಿಗೆ, ಈ ಕಾರ್ಯಕ್ರಮದಡಿ ಜಾಗೃತಿ ಮೂಡಿಸುವ ಯೋಜನೆ ಇದಾಗಿದೆ.

ಉದ್ಯೋಗಿನಿ : ಈ ಯೋಜನೆಯಡಿ ಸಣ್ಣಪುಟ್ಟ ವಾಣಿಜ್ಯ ಚಟುವಟಿಕೆಗಳನ್ನು ಆರಂಭಿಸಲು ಮಹಿಳೆಯರಿಗೆ ನೆರವು ನೀಡಲಾಗುತ್ತದೆ.

ಅಂಗವಿಕಲರ ಕಲ್ಯಾಣ

110. ರಾಜ್ಯದಲ್ಲಿ 1996-97ರಲ್ಲಿ ಸುಮಾರು 1000 ಫಲಾನುಭವಿಗಳನ್ನು 'ಆಧಾರ' ಯೋಜನೆಯ ವ್ಯಾಪ್ತಿಗೆ ತರಲಾಗುವುದು. ಸರ್ಕಾರವು ಈ ಕಾರ್ಯಕ್ರಮವನ್ನು ಒಂಬತ್ತನೇ ಯೋಜನಾವಧಿಯಲ್ಲಿ ಮುಂದುವರಿಸಲು ಉದ್ದೇಶಿಸಿದೆ. 1996-97ರಲ್ಲಿ ಟ್ರೈಸಿಕಲ್ ಅಗತ್ಯವಿರುವ ವ್ಯಕ್ತಿಗಳಿಗೆ ಟ್ರೈಸಿಕಲ್ ಒದಗಿಸಲು ಸುಮಾರು 50 ಲಕ್ಷ ರೂಪಾಯಿಗಳನ್ನು ಉಪಯೋಗಿಸಲಾಗುವುದು. ಆಹಾರ ವೆಚ್ಚವನ್ನು ಪ್ರತಿ ತಿಂಗಳಿಗೆ ಪ್ರತಿ ಅಭ್ಯರ್ಥಿಗೆ ಈಗಿರುವ 60 ರೂಪಾಯಿಗಳಿಂದದ ಪ್ರತಿ ತಿಂಗಳಿಗೆ ಪ್ರತಿ ಅಭ್ಯರ್ಥಿಗೆ 300 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

ವಸತಿ

111. ವಸತಿಯು ಎಂಟನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ನಮ್ಮ ಆದ್ಯತಾ ವಲಯವಾಗಿತ್ತು. ಈ ಅವಧಿಯಲ್ಲಿ 2,88,955 ಮನೆಗಳು ಪೂರ್ಣವಾಗಿದ್ದು, ಇದರ ಪೈಕಿ 1,55,000 ಮನೆಗಳ ನಿರ್ಮಾಣ ಕಾರ್ಯ ಕಳೆದ ಎರಡು ವರ್ಷಗಳಲ್ಲಿ ಪೂರ್ಣಗೊಂಡಿದೆ. 90,000 ಮನೆಗಳು ನಿರ್ಮಾಣದ ವಿವಿಧ ಹಂತದಲ್ಲಿವೆ. ಈ ಉದ್ದೇಶಕ್ಕಾಗಿ 515 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

112. ರಾಜ್ಯದಲ್ಲಿ 1995ರಲ್ಲಿ ನಡೆಸಿದ ಸಮೀಕ್ಷೆಯಂತೆ 7,81,816 ಮಂದಿ ವಸತಿರಹಿತರು ಮತ್ತು 11,52,188 ಮಂದಿ ನಿವೇಶನರಹಿತರಿದ್ದಾರೆ ಎನ್ನುವ ಮಾಹಿತಿ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಈ ಜನರಿಗೆ ಸೂರು ಒದಗಿಸುವ ಕಾರ್ಯಕ್ಕೆ ನಾವು ಆದ್ಯತೆ ನೀಡಬೇಕಾಗಿದೆ. ಇದಕ್ಕಾಗಿ ಒಂಭತ್ತನೇ ಯೋಜನೆಯ ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಿವಿಧ ಯೋಜನೆಗಳಡಿಯಲ್ಲಿ 5,00,000 ನಿವೇಶನಗಳನ್ನು (ಪ್ರತಿವರ್ಷ 1,00,000 ನಿವೇಶನ) ವಿತರಿಸಲು ಮತ್ತು 6,00,000 ಮನೆಗಳನ್ನು ನಿರ್ಮಾಣ ಮಾಡಲು (ಪ್ರತಿ ವರ್ಷ 1.20 ಲಕ್ಷ) ಉದ್ದೇಶಿಸಲಾಗಿದೆ. ಇದೇ ರೀತಿ ನಗರ ಪ್ರದೇಶಗಳಲ್ಲಿ ಆರ್ಥಿಕವಾಗಿ ದುರ್ಬಲವಾದ ವರ್ಗದವರಿಗೆ 2,50,000 ನಿವೇಶನಗಳನ್ನು ವಿತರಿಸುವ ಹಾಗೂ

1,75,000 ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ.

113. ವಸತಿ ಕಾರ್ಯಕ್ರಮವನ್ನು ಮುಂದುವರಿಸುವ ಸಲುವಾಗಿ ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲಿ 1,00,000 ನಿವೇಶನಗಳನ್ನು, ನಗರ ಪ್ರದೇಶಗಳಲ್ಲಿ 50,000 ನಿವೇಶನಗಳನ್ನು ಹಂಚಿಕೆಮಾಡಲು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 1,20,000 ಮನೆಗಳನ್ನು ಹಾಗೂ ನಗರ ಪ್ರದೇಶಗಳಲ್ಲಿ 35,000 ಮನೆಗಳನ್ನು ನಿರ್ಮಿಸಲು 1997-98ನೇ ಅಗತ್ಯವಾದಷ್ಟು ಹಣವನ್ನು ನಿಗದಿಗೊಳಿಸಿದೆ. ಅಲ್ಲದೆ, "ನೆರಳಿನ ಭಾಗ್ಯ" ಯೋಜನೆಯ ಅಡಿಯಲ್ಲಿ 1997-98ರಲ್ಲಿ 10,000 ಮನೆಗಳಿಗೆ ನೆರವು ಕಲ್ಪಿಸಲಾಗುವುದು. ಈ ಯೋಜನೆಯ ವಿವರಗಳು ಹೀಗಿವೆ :

ಗ್ರಾಮಾಂತರ ಪ್ರದೇಶ		ನಗರ ಪ್ರದೇಶ	
ಆಶ್ರಯ	40,000	ಆಶ್ರಯ	25,000
ಅಂಬೇಡ್ಕರ್	25,000	ಅಂಬೇಡ್ಕರ್	10,000
ಇಂ.ಆ.ಯೋ	55,000		
ಒಟ್ಟು	**1,20,000**	ಒಟ್ಟು	**35,000**

ಕೊಳಚೆ ಪ್ರದೇಶಗಳ ಸುಧಾರಣೆ

114. ಕೊಳಚೆ ಪ್ರದೇಶ ಅಭಿವೃದ್ಧಿಗೆ ಭಾರತ ಸರ್ಕಾರವು ಹೆಚ್ಚಿನ ಒತ್ತು ಕೊಟ್ಟಿದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಸಂತೋಷವಾಗುತ್ತಿದೆ. ಕೊಳಚೆ ಪ್ರದೇಶಗಳ ಸುಧಾರಣೆಗಾಗಿ ಕೇಂದ್ರವು ರಾಜ್ಯ ಸರ್ಕಾರಕ್ಕೆ 12.64 ಕೋಟಿ ರೂಪಾಯಿಗಳನ್ನು ನೀಡಿದೆ. ಈ ಕಾರ್ಯಕ್ರಮಕ್ಕಾಗಿ ರಾಜ್ಯ ಬಜೆಟ್‌ನಲ್ಲಿ 1996-97ರಲ್ಲಿ 10 ಕೋಟಿ ರೂ.ಗಳನ್ನು ನೀಡಿದ್ದರೆ 1997-98ರಲ್ಲಿ 18 ಕೋಟಿ ರೂ.ಗಳನ್ನು ಇದಕ್ಕಾಗಿ ನೀಡಲಾಗಿದೆ. ಇದರ ಜೊತೆಗೆ 13.8 ಕೋಟಿ ರೂಪಾಯಿಗಳ ವೆಚ್ಚದಲ್ಲಿ 45 ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಹುಡ್ಕೊನಿಂದ ಅನುಮೋದನೆ ಪಡೆದಿದೆ.

115. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರೇ ಹೆಚ್ಚಿರುವಂತಹ ಕೊಳಚೆ ಪ್ರದೇಶಗಳಲ್ಲಿ ವಸತಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಸಮಾಜ ಕಲ್ಯಾಣ ಇಲಾಖೆಯು ತನ್ನ ಪೂಲ್ ಫಂಡಿನಿಂದ 13.78 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದೆ.

ನಗರಾಭಿವೃದ್ಧಿ

116. ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಆಡಳಿತ ಹಾಗೂ ಆರ್ಥಿಕ ಅಧಿಕಾರಿಗಳನ್ನು ನೀಡಲು ಹಾಗೂ ರಾಜ್ಯದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳ ಮೂಲವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸರ್ಕಾರವು, ಕರ್ನಾಟಕ ಪುರಸಭೆಗಳ ಕಾನೂನಿಗೆ ಮತ್ತು ಕರ್ನಾಟಕ ನಗರಪಾಲಿಕೆ ಕಾನೂನಿಗೆ ವ್ಯಾಪಕ ತಿದ್ದುಪಡಿಗಳನ್ನು ತರಲು ಸಹ ಉದ್ದೇಶಿಸಿದೆ. ಇದೇ ಮಾದರಿಯಲ್ಲಿ ನಗರಾಭಿವೃದ್ಧಿ ಸಂಸ್ಥೆಗಳ ಕಾಯಿದೆಗಳನ್ನು ತಿದ್ದುಪಡಿ ಮಾಡುವುದರ ಮೂಲಕ ಈ ಸಂಸ್ಥೆಗಳ ಸಂಪನ್ಮೂಲ ತಳಹದಿಯನ್ನು ಸುಧಾರಿಸಲಾಗುವುದು. ಸ್ಥಳೀಯ ಸಂಸ್ಥೆಗಳ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಿಗಳ

ಸಂಪನ್ಮೂಲ ಆಧಾರಗಳನ್ನು ಸುಧಾರಿಸುವ ಗುರಿಸಾಧನೆ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಮಾನ್ಯ ಸದಸ್ಯರ ಸಲಹೆಗಳನ್ನು ಸರ್ಕಾರ ಸ್ವಾಗತಿಸುತ್ತದೆ. ನಗರ ಪ್ರದೇಶಗಳಲ್ಲಿ ಕೈಗೊಳ್ಳುವ ಹೊಸ ನಿರ್ಮಾಣಗಳ ಮೇಲೆ 'ಪರಿಣಾಮ ತೆರಿಗೆ' (ಇಂಪ್ಯಾಕ್ಟ್ ಟ್ಯಾಕ್ಸ್) ವಿಧಿಸುವ ಪರಿಕಲ್ಪನೆಯ ಪ್ರಸ್ತಾವವನ್ನು ಸರ್ಕಾರ ಮುಂದಿಡುತ್ತಿದೆ. ಬೆಂಗಳೂರು ನಗರಾಭಿವೃದ್ಧಿಗಾಗಿ ಸ್ಥಾಪಿಸಲಾಗಿರುವ ವಿವಿಧ ಸಂಸ್ಥೆಗಳನ್ನು ಬಲಗೊಳಿಸುವ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಲು ಅಧ್ಯಯನವೊಂದನ್ನು ಕೈಗೆತ್ತಿಕೊಳ್ಳಲಾಗುತತ್ತೆ. ಈ ಉದ್ದೇಶಕ್ಕೆ ಅಗತ್ಯವಾದ ಹಣವನ್ನು ಒದಗಿಸಲಾಗಿದೆ.

117. ನಮ್ಮ ಸರ್ಕಾರವು, 26-1-1997ರಿಂದ ಜಾರಿಗೆ ಬಂದಿರುವ ಕೇಂದ್ರ ಶಾಸನವನ್ನು ಮಾದರಿಯಾಗಿಟ್ಟುಕೊಂಡು ರಾಜ್ಯದ ಎಲ್ಲಾ ನಗರಪ್ರದೇಶಗಳಲ್ಲಿರುವ ಕೈದುಡಿಮೆ ಜಾಡಮಾಲಿಗಳ ಪುನರ್ವಸತಿಗಾಗಿ ಸಮಗ್ರ ಯೋಜನೆಯನ್ನು ಜಾರಿಗೊಳಿಸಲು ಸಹ ಉದ್ದೇಶಿಸಿದೆ.

118. ಬೆಂಗಳೂರು ನಗರದ 'ಮಾಸ್ ರ್‍ಯಾಪಿಡ್ ಎಲಿವೇಟಡ್ ರೇಲ್ ಟ್ರಾನ್ಸ್‌ಸಿಸ್ಟ್ ಸಿಸ್ಟಂ'ಗೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂಬುದನ್ನು ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತಿದೆ.

119. ನಮ್ಮ ಜನತೆಗೆ ಕುಡಿಯುವ ನೀರು ಒದಗಿಸುವ ವಿಷಯದಲ್ಲಿ ನಗರ ಹಾಗೂ ಸ್ಥಳೀಯ ಸಂಸ್ಥೆಗಳು ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ ಈ ಯೋಜನೆಗಳಿಗೆ ನಿಧಿ ಒದಗಿಸುವ ವಿಧಾನವನ್ನು ಪರಿಷ್ಕರಿಸುವ ಮೂಲಕ ಈ ಸಂಬಂಧದ ತನ್ನ ಬದ್ಧತೆಯನ್ನು ಬಿಂಬಿಸಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ 1997-98ನೇ ಸಾಲಿನಿಂದ ಹೆಚ್ಚು ಹಣ ವರ್ಗಾವಣೆಯಾಗಲಿರುವುದರಿಂದ ಇನ್ನು ಮುಂದೆ ಈ ಸಂಸ್ಥೆಗಳು ತಮ್ಮ ಅಭಿವೃದ್ಧಿ ಯೋಜನೆಗಳಿಗೆ ಬೇಕಾಗುವ ಹಣವನ್ನು ಈ ಆರ್ಥಿಕ ಮೂಲದಿಂದಲೇ ಭರಿಸಬೇಕೆಂದು ನಾನು ಒತ್ತಾಯಿಸುತ್ತೇನೆ.

120. ನಮ್ಮ ರಾಜ್ಯದ/ನಗರಗಳ ಕುಡಿಯುವ ಜಪಾನಿನ ನೀರು ಮತ್ತು ಒಳಚರಂಡಿ ಯೋಜನೆಯ ಅನುಷ್ಠಾನಕ್ಕಾಗಿ ಜಪಾನಿನ ಓ.ಇ.ಸಿ.ಎಫ್ ಮತ್ತು ವಿಶ್ವ ಬ್ಯಾಂಕಿನ ಮುಂದೆ ಪ್ರಸ್ತಾವ ಮಂಡಿಸಿದ್ದು ಇದಕ್ಕೆ ನೆರವನ್ನು ಪಡೆಯುವ ವಿಶ್ವಾಸ ಸರ್ಕಾರಕ್ಕಿದೆ. ಘನ ತ್ಯಾಜ್ಯ ವಸ್ತು ನಿರ್ವಹಣೆ ಮತ್ತು ನಿರ್ಮಾಣ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ 150 ಮಿಲಿಯನ್ ಡಾಲರ್ ನೆರವನ್ನು ಕೋರಿ ವಿಶ್ವ ಬ್ಯಾಂಕ್ ಮುಂದೆ ಪ್ರಸ್ತಾವ ಮಂಡಿಸಿದೆ. ಇದರಲ್ಲಿ ಬೆಂಗಳೂರು ಮಹಾನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಳಿಸಿರುವ ಸಂಸ್ಥೆಗಳನ್ನು ಬಲಪಡಿಸುವುದು ಹಾಗೂ ನಗರ ನಿರ್ವಹಣೆಗೆ ಅಗತ್ಯವಾದ ಅಧ್ಯಯನ ನಡೆಸುವುದೂ ಸೇರಿದೆ. ರಾಜ್ಯದಲ್ಲಿ ನಗರ ಮತ್ತು ಪಟ್ಟಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ಸಿದ್ಧಪಡಿಸಿ ಅಂತರರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆಗಳಿಗೆ ಸಲ್ಲಿಸುವ ಸಂಬಂಧ ತಗಲುವ ವೆಚ್ಚವನ್ನು ಭರಿಸಲು ಸರ್ಕಾರವು 20 ಲಕ್ಷ ರೂ.ಗಳನ್ನು ಒದಗಿಸಿದೆ.

ರಸ್ತೆಗಳು ಮತ್ತು ಸೇತುವೆಗಳು

121. ಎಂಟನೇ ಯೋಜನಾವಧಿಯಲ್ಲಿ 273 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದ್ದು 3972 ಕಿ.ಮಿ. ಉದ್ದದ ರಸ್ತೆಗಳಿಗೆ ಡಾಂಬರು ಹಾಕಲಾಗಿದೆ ಮತ್ತು ಇತರ ಸುಧಾರಣಾ ಕಾಮಗಾರಿಗಳನ್ನು

ನಿರ್ವಹಿಸಲಾಗಿದೆ. ಒಟ್ಟಾರೆ 154 ಸೇತುವೆಗಳನ್ನು ಕಟ್ಟಲಾಗಿದೆ. 132 ಕಿ.ಮೀ. ಉದ್ದದ ಅಂಕೋಲಾ-ಹುಬ್ಬಳ್ಳಿ ಹೆದ್ದಾರಿಯನ್ನು ಅಭಿವೃದ್ಧಿ ಪಡಿಸಲಾಗಿದ್ದು ಈ ಹೆದ್ದಾರಿಯಲ್ಲಿ 366 ಸೇತುವೆ ಮತ್ತು ಅಡಿಗಾಲುವೆಗಳನ್ನು ನಿರ್ಮಿಸಲಾಗಿದೆ.

122. ರಸ್ತೆ ನಿರ್ಮಾಣ ಈ ಕ್ಷೇತ್ರದಲ್ಲಿ ಖಾಸಗಿ ವಲಯವು ಪಾಲ್ಗೊಳ್ಳುವುದಕ್ಕೆ ಅವಕಾಶ ಕಲ್ಪಿಸಲು ರಾಜ್ಯ ಹೆದ್ದಾರಿ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ತರಲಾಗುವುದು. ರಸ್ತೆ ನಿರ್ಮಾಣಕ್ಕಾಗಿ ಬಂಡವಾಳ ಹೂಡುವ ಉದ್ಯಮಿಗಳಿಗೆ ಈ ರಸ್ತೆಯ ಮೇಲೆ ಒಪ್ಪಂದದ ಅವಧಿಯವರೆಗೆ ಸುಂಕ ವಸೂಲಿ ಮಾಡಲು ಅನುಮತಿ ನೀಡಲಾಗುವುದು. ನಮ್ಮ ರಾಜ್ಯಕ್ಕೆ ರಸ್ತೆ ನೀತಿಯೊಂದನ್ನು ಸಧ್ಯದಲ್ಲಿಯೇ ಘೋಷಿಸಲಾಗುವುದು. ನಾವು ಹೊಸಮಾರ್ಗಗಳ ನಿರ್ಮಾಣ ಕಾರ್ಯಕ್ಕೆ ಹೆಚ್ಚು ಗಮನ ನೀಡಿದ್ದರ ಅವುಗಳ ನಿರ್ವಹಣೆಗಾಗಿ ಗಮನ ಬಹಳ ಕಡಿಮೆ. ಆದರೂ ರಾಜ್ಯದ ರಸ್ತೆಗಳನ್ನು ಉತ್ತಮ ಪಡಿಸುವ ಕೆಲವು ಕ್ರಮಗಳ ಬಗ್ಗೆ ಈಗಾಗಲೆ ಹೇಳಿದ್ದೇನೆ.

123. ಕರ್ನಾಟಕದಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ಸುಧಾರಣೆಯ ತುರ್ತು ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರವು ವಿಶ್ವಬ್ಯಾಂಕಿಗೆ 900 ಕೋಟಿ ರೂ.ಗಳ ಯೋಜನೆಯೊಂದನ್ನು ಕಳುಹಿಸಿದ್ದು. ಈ ನೆರವು ದೊರೆಯುವ ಭರವಸೆ ನಮಗಿದೆ. ಗ್ರಾಮೀಣ ರಸ್ತೆಗಳ ಸುಧಾರಣೆಗಾಗಿ ನಬಾರ್ಡ 143 ಕೋಟಿ ರೂ.ಗಳ ನೆರವನ್ನು ಈಗಾಗಲೆ ಮಂಜೂರು ಮಾಡಿದೆ.

ಪೊಲೀಸ್ ಮತ್ತು ಅಗ್ನಿಶಾಮಕ ದಳ

124. 15 ಪೊಲೀಸ್ ಠಾಣೆಗಳನ್ನು, ಮೂರು ಸಂಚಾರಿ ಪೊಲೀಸ್ ಠಾಣೆಗಳನ್ನು ಮತ್ತು ಎರಡು ಮಹಿಳಾ ಪೊಲೀಸ್ ಠಾಣೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ. 1997-98ನೇ ಸಾಲಿನಲ್ಲಿ ಇನ್ನೂ 15 ಅಗ್ನಿಶಾಮಕ ಠಾಣೆಗಳನ್ನು ತೆರೆಯಲು ಸಹ ಉದ್ದೇಶಿಸಲಾಗಿದೆ.

ಅರಣ್ಯ

125. ಸ್ವಾಭಾವಿಕ ಅರಣ್ಯವನ್ನು ಸಂರಕ್ಷಿಸುವುದರ ಜೊತೆಗೆ ಅರಣ್ಯ ಇಲಾಖೆಯು ಇನ್ನೂ ಅನೇಕ ಕಾರ್ಯತಂತ್ರಗಳನ್ನು ಅಳವಡಿಸಿಕೊಂಡಿದೆ. ಉದಾಹರಣೆಗೆ ಅರಣ್ಯ ಭೂಮಿ, ಇತರೆ ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಸುಮಾರು 2,67,400 ಹೆಕ್ಟೇರ್‌ಗಳಷ್ಟು ಭೂಮಿಯಲ್ಲಿ ಅರಣ್ಯ ಬೆಳೆಸಲಾಗಿದೆ. ಈ ಪ್ರಯತ್ನಗಳಿಂದ ಕರ್ನಾಟಕದ ಅರಣ್ಯ ಪ್ರದೇಶವು 183 ಚ.ಕಿ.ಮಿ.ಗಳಷ್ಟು ಹೆಚ್ಚಾಗಿದೆಯೆಂದು ವರದಿಯಾಗಿದೆ.

126. ಕರ್ನಾಟಕದಲ್ಲಿ 566.55 ಕೋಟಿ ರೂಪಾಯಿಗಳ ಅಂದಾಜು ಯೋಜನಾ ವೆಚ್ಚದಲ್ಲಿ "ಕರ್ನಾಟಕ ಪೂರ್ವ ಬಯಲು ಪ್ರದೇಶ ಅರಣ್ಯ ಮತ್ತು ಪರಿಸರ ಯೋಜನೆ" ಎಂಬ ಬೃಹತ ವನನಿರ್ಮಾಣ ಯೋಜನೆಯನ್ನು 1996-97ರಲ್ಲಿ ಆರಂಭಿಸಲಾಗಿದೆ. ಜಪಾನಿನ ಓಇಸಿಎಫ್ ನೆರವಿನೊಂದಿಗೆ ಒಂಭತ್ತನೇ ಯೋಜನಾ ಅವಧಿಯಲ್ಲೂ ಈ ಯೋಜನೆಯನ್ನು ಮುಂದುವರಿಸಲಾಗುವುದು. ರಾಜ್ಯದ 17 ಜಿಲ್ಲೆಗಳಲ್ಲಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ

39.49 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಾಗರ ಹೊಳೆ ರಾಷ್ಟ್ರೀಯ ಅಭಯಾರಣ್ಯದಲ್ಲಿ ಭಾರತ ಜೀವಿ ಪರಿಸ್ಥಿತಿ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಪ್ರವಾಸೋದ್ಯಮ

127. 1996-97ನೇ ಸಾಲಿನಲ್ಲಿ ಆಕರ್ಷಕ ಪ್ರೋತ್ಸಾಹ ಮತ್ತು ರಿಯಾಯಿತಿಗಳೊಡನೆ "ಹೊಸ ಪ್ರವಾಸೋದ್ಯಮ ನೀತಿ"ಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಇದು ಮುಂದಿನ ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ. ಈ ನೀತಿಯನ್ವಯ 1996-97ರಲ್ಲಿ ಇಲಾಖೆಯು 31.63 ಕೋಟಿ ರೂಪಾಯಿಗಳ ಬಂಡವಾಳವಿರುವ 49 ಹೋಟಲ್ ಯೋಜನೆಗಳಿಗೆ ಮತ್ತು 467.10 ಕೋಟಿ ರೂಪಾಯಿಗಳ ಅಂದಾಜು ಬಂಡವಾಳದ 19 ಭಾರಿ (ಮೆಗಾ) ಪ್ರವಾಸೋದ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದೆ. ಸರ್ಕಾರವು 25 ಹೋಟಲ್ ಯೋಜನೆಗಳಿಗೆ ಸಹಾಯಧನವಾಗಿ ಸುಮಾರು 189.79 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಹಂಪಿ ಮತ್ತು ಪಟ್ಟದಕಲ್ ಮೊದಲಾದ ಚಾರಿತ್ರಿಕ ಸ್ಥಳಗಳ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಎರಡು ಕೋಟಿ ರೂ.ಗಳನ್ನು 1997-98ನೇ ಸಾಲಿನಲ್ಲಿ ತೆಗೆದಿರಿಸಲಾಗಿದೆ. ಇನ್ನೂ ಹೆಚ್ಚಿನ ಹಣದ ಅಗತ್ಯಬಿದ್ದಲ್ಲಿ ಒದಗಿಸಲಾಗುವುದು.

128. ಕರ್ನಾಟಕದ ಜೀವನದಿಯಾದ ಕಾವೇರಿಯ ಉಗಮ ಸ್ಥಾನ-ತಲಕಾವೇರಿ. ಇದರ ಸನಿಹದಲ್ಲೇ ಇರುವ ಭಾಗಮಂಡಲವು ಪ್ರಖ್ಯಾತ ಯಾತ್ರಾಸ್ಥಳವಾಗಿದ್ದು ಇದು ವರ್ಷ ಸಾವಿರಾರು ಯಾತ್ರಿಕರನ್ನು ಆಕರ್ಷಿಸುತ್ತಿದೆ. ಧಾರ್ಮಿಕ ಹಾಗೂ ಪ್ರವಾಸಿ ಮಹತ್ವದ ತಾಣಗಳಾದ ಈ ಎರಡು ಸ್ಥಳಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ನಿರ್ಧರಿಸಿದ್ದು ಈ ವರ್ಷದ ಬಜೆಟ್‌ನಲ್ಲಿ ಇದಕ್ಕಾಗಿ 50 ಲಕ್ಷ ರೂ.ಗಳನ್ನು ಒದಗಿಸಿದೆ.

ವಾರ್ತಾ ಮತ್ತು ಪ್ರಚಾರ

129. ಉತ್ತಮ ಗುಣಮಟ್ಟದ ಚಿತ್ರಗಳ ತಯಾರಿಕೆಗಾಗಿ ಮತ್ತು ಕನ್ನಡ ಚಿತ್ರದ ಗುಣಮಟ್ಟ ಹೆಚ್ಚಿಸುವ ದೃಷ್ಟಿಯಿಂದ ಕನ್ನಡ ಚಲನಚಿತ್ರ ಅಕಾಡಮಿಯನ್ನು ರಚಿಸಲಾಗಿದೆ. ಇದು 1997-98ನೇ ವರ್ಷದಿಂದ ಅಸ್ತಿತ್ವಕ್ಕೆ ಬರಲಿದೆ.

130. 1996-97ರಲ್ಲಿ ನಾಲ್ಕು ಜಿಲ್ಲೆಗಳ ಸಮಗ್ರ ಮಾಹಿತಿಯನ್ನು ಬಿಂಬಿಸುವ 30 ನಿಮಿಷಗಳ ಅವಧಿಯ ಒಂದು ವಿಡಿಯೋ ಚಿತ್ರ ತಯಾರಿಸಲು 5.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಯುವಜನಸೇವೆ ಮತ್ತು ಕ್ರೀಡೆ

131. ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಬೆಂಗಳೂರಿನಲ್ಲಿ ನಡೆಸುವ ಉದ್ದೇಶದಿಂದ ಸರ್ಕಾರವು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಹಾಗೂ ಮತ್ತಿತರ ಸೌಲಭ್ಯಗಳನ್ನು 75.45 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸುತ್ತಿದೆ. ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು 34.85 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಸರ್ಕಾರವು ಎಂಟು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಈ ಕ್ರೀಡಾಕೂಟವನ್ನು

ಸ್ಮರಣೆಯ ಘಟನೆಯನ್ನಾಗಿ ಮಾಡಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ಸಂಕೀರ್ಣದಲ್ಲಿ ಒಂದು ರಾಷ್ಟ್ರೀಯ ಮಟ್ಟದ ಈಜುಕೊಳವನ್ನು ನಿರ್ಮಿಸಲಾಗುತ್ತಿದೆ.

132. ಒಂಬತ್ತನೇ ಯೋಜನೆಯ ಅವಧಿಯಲ್ಲಿ, ವಿಶಾಲ ನೆಲೆಯಲ್ಲಿ ಯುವಜನರ ಕಲ್ಯಾಣ ಕಾರ್ಯಚಟುವಟಿಕೆಗಳಿಗೆ ಮತ್ತು ತಾಲ್ಲೂಕು ಮಟ್ಟದಲ್ಲಿ, ಕ್ರೀಡಾ ಮೂಲ ಸೌಕರ್ಯಗಳ ಸೃಜನೆಗೆ ಒತ್ತು ನೀಡುವುದಕ್ಕೆ ಇಲಾಖೆಯ ಪ್ರಥಮ ಆದ್ಯತೆ ನೀಡುತ್ತದೆ.

ಕನ್ನಡ ಮತ್ತು ಸಂಸ್ಕೃತಿ

133. ಸರ್ಕಾರವು 1997-98ರ ಅವಧಿಯಲ್ಲಿ ಈ ಕಾರ್ಯಚಟುವಟಿಕೆಗಳನ್ನು ನಡೆಸಲು ಉದ್ದೇಶಿಸಿದೆ:-

- ಎಲ್ಲ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯ ಸಂಸ್ಕೃತಿ, ಕಲೆ, ಸಾಹಿತ್ಯ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಜಿಲ್ಲಾ ಉತ್ಸವಗಳನ್ನು ಏರ್ಪಡಿಸುವುದು.
- ಹಿಂದುಸ್ತಾನಿ ಸಂಗೀತ ಬ್ರಹ್ಮ ದಿವಂಗತ ಡಾ|| ಮಲ್ಲಿಕಾರ್ಜುನ ಮನ್ಸೂರ್ ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಸ್ಥಾಪಿಸಲಾಗುವುದು.
- ರಾಷ್ಟ್ರೀಯ ಆಧುನಿಕ ಕಲಾ ಗ್ಯಾಲರಿಯ ಬೆಂಗಳೂರು ಶಾಖೆಗೆ ಒಂದು ಸೂಕ್ತ ನಿವೇಶನವನ್ನು ಒದಗಿಸಲಾಗುವುದು.
- ಜಿಲ್ಲಾ ಗೆಜೆಟ್‌ಯರ್‌ಗಳ ಕನ್ನಡ ರೂಪಾಂತರಗಳನ್ನು ಪ್ರಕಟಿಸಲಾಗುವುದು.
- ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಕಾಡೆಮಿಗಳ ಕಚೇರಿಗಳೆಲ್ಲವನ್ನು ಒಂದೇ ಸೂರಿನಡಿ ತರುವುದಕ್ಕಾಗಿ 'ಕನ್ನಡ ಭವನವನ್ನು' ಬೆಂಗಳೂರಿನಲ್ಲಿ ನಿರ್ಮಿಸುವುದು.
- ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ, ಧಾರವಾಡ ಜಿಲ್ಲೆಯ ಗದಗ್, ಬೀದರ್ ಜಿಲ್ಲೆಯ ಬಸವಕಲ್ಯಾಣ ಮತ್ತು ಗುಲ್ಬರ್ಗ ನಗರದಲ್ಲಿ ವಸ್ತು ಸಂಗ್ರಹಾಲಯಗಳನ್ನು ತೆರೆಯಲಾಗುವುದು.

ಉದ್ಯೋಗ, ತರಬೇತಿ ಮತ್ತು ಕಾರ್ಮಿಕ

134. ಕೈಗಾರೀಕರಣ ತೀವ್ರಗೊಳ್ಳುತ್ತಿರುವ ಈ ಸಂದರ್ಭದಲ್ಲಿ ರಾಜ್ಯಕ್ಕೆ ಕುಶಲ ಕಾರ್ಮಿಕರ ಅಗತ್ಯ ಹೆಚ್ಚಾಗಿದ್ದು ಈ ಹಿನ್ನೆಲೆಯಲ್ಲಿ ಐಟಿಐಗಳ ಪ್ರಸ್ತುತತೆ ಇಂದು ರಾಜ್ಯದಲ್ಲಿ ಕಂಡು ಬಂದಿದೆ. ರಾಜ್ಯದಲ್ಲಿ 49 ಸರ್ಕಾರಿ ಐಟಿಐಗಳು ಮತ್ತು 208 ಖಾಸಗಿ ಐಟಿಐಗಳಿವೆ. ಖಾಸಗಿ ಐಟಿಐ ಈಗ ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ತರಬೇತಿ ನೀಡುವ ನಿಟ್ಟಿನಲ್ಲಿ ಅಂಥ ಖಾಸಗಿ ಐಟಿಐಗಳಿಗೆ ನೆರವಾಗಲು ಸಹಾಯಧನ ಒದಗಿಸಲು ಸರ್ಕಾರವು ಉದ್ದೇಶಿಸಿದೆ. ಇದಕ್ಕಾಗಿ ಸಹಾಯಧನ ಸಂಹಿತೆ ಸಿದ್ಧಗೊಳುತ್ತಿದೆ. ಸರ್ಕಾರವು, ಖಾಸಗಿ ಐಟಿಐಗಳಿಗೆ ಅಗತ್ಯವಿರುವ ನೆರವನ್ನು ಒದಗಿಸುವ ದೃಷ್ಟಿಯಿಂದ ಈ ವರ್ಷ 4.5 ಕೋಟಿ ರೂ.ಗಳನ್ನು ಒದಗಿಸಿದೆ.

135. ಸರ್ಕಾರಿ ಐಟಿಐಗಳ ಆಧುನೀಕರಣಕ್ಕಾಗಿ ವಿದೇಶಿ ನೆರವನ್ನು ಕೋರುವ ಒಂದು ಪ್ರಸ್ತಾವವನ್ನೂ ಭಾರತ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. 1997-98ನೇ ವರ್ಷಕ್ಕೆ ಸರ್ಕಾರವು ಪ್ರಸ್ತಾವಿಸಿರುವ ಕೆಲವು ಪ್ರಮುಖ ಕಾರ್ಯಕ್ರಮಗಳು ಇಂತಿವೆ:

- ಪೀಣ್ಯ ಮತ್ತು ಬೊಮ್ಮಸಂದ್ರದಲ್ಲಿ 50 ಹಾಸಿಗೆಗಳ ಇಎಸ್ಐ ಆಸ್ಪತ್ರೆಯನ್ನು ಪ್ರಾರಂಭಿಸುವುದು.
- ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಮತ್ತು ಮಾಚೇನಹಳ್ಳಿ ಮತ್ತು ಬೆಂಗಳೂರು ಜಿಲ್ಲೆಯ ಸಿಂಗಸಂದ್ರದಲ್ಲಿ ಪೂರ್ಣಕಾಲಿಕ ಔಷಧಾಲಯಗಳನ್ನು ಪ್ರಾರಂಭಿಸುವುದು.
- ರಾಜ್ಯದಲ್ಲಿ ಐದು ಹೊಸ ಐಟಿಐಗಳನ್ನು 1997-98ನೇ ಸಾಲಿನಲ್ಲಿ ಆರಂಭಿಸಲಾಗುವುದು.

ಆಹಾರ ಸಹಾಯಧನ

136. ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗಾಗಿ ಸದ್ಯದಲ್ಲಿಯೇ ಜಾರಿಗೊಳಿಸಲಾಗುವ ನಿಗದಿತ ವರ್ಗಕ್ಕೆ ಸೀಮಿತವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರವು ತೆಗೆದು ಕೊಂಡಿರುವ ಕ್ರಮವನ್ನು ನಾನು ಸ್ವಾಗತಿಸುತ್ತೇನೆ. ಈ ಯೋಜನೆಯನ್ನು ನಮ್ಮ ರಾಜ್ಯವು ಕಳೆದ ಕೆಲವು ವರ್ಷಗಳಿಂದ ಅನುಷ್ಠಾನಗೊಳಿಸುತ್ತಿದೆ. ಕೇಂದ್ರ ಸರ್ಕಾರವು ಘೋಷಿಸಿದ ಹೊಸ ಯೋಜನೆಯೊಂದಿಗೆ ಈ ಯೋಜನೆಯನ್ನು ಸಂಯೋಜಿಸಲಾಗುವುದು. 1997-98ರ ಆಯವ್ಯಯದಲ್ಲಿ ಆಹಾರ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚಕ್ಕಾಗಿ 160 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ರಾಜಸ್ವ ಆಡಳಿತ

137. ರಾಜ್ಯ ಸರ್ಕಾರವು ಆಡಳಿತವನ್ನು ಪರಿಣಾಮಕಾರಿಗೊಳಿಸುವ ದೃಷ್ಟಿಯಿಂದ ಹೊಸ ಜಿಲ್ಲೆಗಳನ್ನು ರಚಿಸಲು ನಿರ್ಧರಿಸಿದೆ. ಇದಕ್ಕಾಗಿ ಆಯವ್ಯಯದಲ್ಲಿ ಐದು ಕೋಟಿ ರೂ.ಗಳನ್ನು ನಿಗದಿಗೊಳಿಸಿದೆ. ಇನ್ನೂ ಹೆಚ್ಚು ಹಣದ ಅಗತ್ಯವಿದ್ದಲ್ಲಿ ಸರ್ಕಾರವು ಒದಗಿಸಲಿದೆ.

ಅಬಕಾರಿ ನೀತಿ

138. ಗ್ರಾಮೀಣ ಪ್ರದೇಶಗಳಲ್ಲಿ ಸಾರಾಯಿ ಸುಲಭವಾಗಿ ಸಿಗುತ್ತಿದ್ದು ಹಳ್ಳಿಗಳ ವಾತಾವರಣ ಹದಗೆಡಲು ಕಾರಣವಾಗಿರುವುದು ನಮಗೆಲ್ಲ ತಿಳಿದೇ ಇದೆ. ಸಾರಾಯಿ ಮಾರಾಟ ಗುತ್ತಿಗೆಯನ್ನು ಹರಾಜಿನ ಮೂಲಕ ನೀಡುತ್ತಿರುವ ಹಾಲಿ ವ್ಯವಸ್ಥೆಯ ನೇರ ಪರಿಣಾಮ ಇದಾಗಿದೆ. ಇದು ತಮ್ಮ ಮಾರಾಟ ಹೆಚ್ಚು ಮಾಡಿಕೊಳ್ಳಲು ಗುತ್ತಿಗೆದಾರರ ಮೇಲೆ ಒತ್ತಡ ಹೇರುತ್ತದೆ. ನಮ್ಮ ಸರ್ಕಾರ ಈ ಪಿಡುಗಿಗೆ ತಡೆ ಹಾಕಲು ತೀರ್ಮಾನಿಸಿದೆ.

139. ಸಾರಾಯಿ ನಿಷೇಧ ಜಾರಿಗೊಳಿಸುವ ಸಂಬಂಧ ರಚಿಸಿರುವ ಸಚಿವ ಸಂಪುಟ ಉಪಸಮಿತಿ ಈ ಸಮಸ್ಯೆಯ ಸಮಗ್ರ ಅಧ್ಯಯನ ನಡೆಸಿದೆ. ಈ ಸಮಿತಿ ಇತ್ತೀಚೆಗೆ ನೆರೆಯ ಆಂದ್ರಪ್ರದೇಶ, ತಮಿಳ್ನಾಡು, ಕೇರಳ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಗೆ ಭೇಟಿ ನೀಡಿತ್ತು. ಈ ರಾಜ್ಯಗಳ

ಅಬಕಾರಿ ನೀತಿಯಲ್ಲಿ ಜಾರಿಗೊಳಿಸಲಾದ ಇತ್ತೀಚಿನ ಬದಲಾವಣೆಗಳಿಂದ ಉಂಟಾಗಿರುವ ಪರಿಣಾಮಗಳನ್ನು ಮತ್ತು ವಾಸ್ತವ ಸಂಗತಿಗಳನ್ನು ಸಮಿತಿ ವಸ್ತುನಿಷ್ಠವಾಗಿ ಗ್ರಹಿಸಿದೆ. ಈ ಅಧ್ಯಯನದ ಆಧಾರದ ಮೇಲೆ ಸಾರಾಯಿ ಮಾರಾಟದ ಹಕ್ಕನ್ನು ಹರಾಜು ಮೂಲಕ ನೀಡುವ ಹಾಲಿ ಪದ್ಧತಿಯನ್ನು ತಕ್ಷಣವೇ ಕೈಬಿಡಬೇಕೆಂದು ಸರ್ಕಾರ ಬಯಸುತ್ತದೆ. ಈ ದಿಸೆಯಲ್ಲಿ ಮುಂದಿನ ಅಬಕಾರಿ ವರ್ಷದಿಂದ ಸಾರಾಯಿ ಮಾರಾಟದ ಹಕ್ಕನ್ನು ಹರಾಜು ವ್ಯವಸ್ಥೆಗೆ ಬದಲಾಗಿ ಪರವಾನಗಿಯ ಮೂಲಕ ನೀಡಲಾಗುವುದು. ಸಾರಾಯಿ ಮಾರಾಟ ಅಂಗಡಿಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿತ ಮಾಡಲಾಗುವುದು. ಸಾರಾಯಿಯನ್ನು ಸ್ಯಾಚೆಟ್‌ಗಳ ಬದಲಿಗೆ ಬಾಟಲಿಗಳ ಮೂಲಕ ಮಾರುವ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು. ಈ ಪರ್ಯಾಯ ಕ್ರಮ ಗ್ರಾಮೀಣ ಪ್ರದೇಶಗಳಲ್ಲಿ ಸಾರಾಯಿ ಸುಲಭವಾಗಿ ಲಭ್ಯವಾಗುವುದನ್ನು ಖಂಡಿತ ತಡೆಗಟ್ಟುತ್ತದೆ. ಈ ಕ್ರಮದಿಂದ 1997-98ನೇ ಸಾಲಿನ ಅಬಕಾರಿ ಆದಾಯದಲ್ಲಿ ಸುಮಾರು 150 ಕೋಟಿ ರೂ.ಗಳಿಗೂ ಹೆಚ್ಚು ಕೊರತೆ ಉಂಟಾಗಬಹುದೆಂದು ನಿರೀಕ್ಷಿಸಲಾಗಿದೆ. ಆದರೆ ಜನಸಾಮಾನ್ಯರ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಬಡಜನರ ಆರೋಗ್ಯದ ಹಿತದೃಷ್ಟಿಯಿಂದ ಗಮನಿಸಿದರೆ ನಾವು ಸಾರಾಯಿ ಬಾಬಿನಲ್ಲಿ ಕಳೆದುಕೊಳ್ಳಬಹುದಾದ ಮೊತ್ತ ತೀರಾ ಗೌಣ ಎಂದೆನ್ನಿಸುತ್ತದೆ.

140. ಇದರ ಜೊತೆಗೆ ಮದ್ಯಪಾನ ಸಂಯಮದ ಮೌಲ್ಯಗಳನ್ನು ಪ್ರಚುರಪಡಿಸಲು ಮತ್ತು ಕುಡಿತದ ದುಷ್ಪರಿಣಾಮಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಲು ಈ ಸಾಲಿನ ಆಯವ್ಯಯದಲ್ಲಿ ನಾನು ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದೇನೆ.

141. ವಿವಿಧ ಇಲಾಖೆಗಳಲ್ಲಿ ನಾನು ಇದುವರೆವಿಗೂ ಪ್ರಸ್ತಾವಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳು ಈ ರಾಜ್ಯದ ಬಗ್ಗೆ ನಮ್ಮ ಸರ್ಕಾರವು ಹೊಂದಿರುವ ದೃಷ್ಟಿಕೋನವನ್ನು ಪ್ರತಿನಿಧಿಸುತ್ತವೆ. ಈ ದೃಷ್ಟಿಕೋನವೇ ನಮ್ಮ ರಾಜ್ಯವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಬೇಕು. ಈ ದೃಷ್ಟಿಕೋನವು ನಿರಂತರವಾಗಿ ಜಾಗೃತವಾಗಿರಲು ಹಾಗೂ ಅದನ್ನು ಕ್ರಿಯಾರೂಪದಲ್ಲಿ ಪಡಿಮೂಡಿಸಲು ಆದಾಯ ಮೂಲವನ್ನು ವೃದ್ಧಿಸುವುದು ಅತ್ಯಗತ್ಯ. ಕರ್ನಾಟಕದಲ್ಲಿ ತೆರಿಗೆಯ ತಲಾಭಾರ ಮಟ್ಟವು ಹೆಚ್ಚಾಗಿರುವುದನ್ನು ನಾನು ಗಮನದಲ್ಲಿಟ್ಟುಕೊಂಡೇ ನನ್ನ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ. ನಾನು ಈಗಾಗಲೇ ಪರಿಣಾಮ ತೆರಿಗೆ (ಇಂಪ್ಯಾಕ್ ಟ್ಯಾಕ್ಸ್) ಮತ್ತು ನೀರಿನ ದರವನ್ನು ಏರಿಸುವ ಬಗ್ಗೆ ಪ್ರಸ್ತಾಪಿಸಿದ್ದೇನೆ. ಇವುಗಳ ಬಳಕೆದಾರರು ಇವುಗಳನ್ನು ತೆರಿಗೆ ಪ್ರಸ್ತಾವನೆಗಳೆಂದು ಸ್ವೀಕರಿಸದೆ ಬಳಕೆದಾರರ ಕರಗಳೆಂದು ಸ್ವೀಕರಿಸಬೇಕಾಗುತ್ತದೆ. ಬೆಂಗಳೂರಿನ ಮೂಲಭೂತ ಸೌಲಭ್ಯಗಳ ಮೇಲೆ ಮತ್ತಷ್ಟು ಒತ್ತಡ ಹೇರುತ್ತಿರುವ ಗಗನಚುಂಬಿ ಸಮುಚ್ಛಯಗಳು ವಾಣಿಜ್ಯ ಸಂಕೀರ್ಣಗಳು ಮತ್ತು ವಸತಿ ಸಮೂಹ ನಿರ್ಮಾಣಕಾರರನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಈ ಪರಿಣಾಮ ತೆರಿಗೆಯನ್ನು ವಿಧಿಸಲು ಉದ್ದೇಶಿಸಲಾಗಿದೆ. ಬೆಂಗಳೂರಿನ ಸಾಮಾನ್ಯ ಜನತೆ ಸಂದಾಯ ಮಾಡುವ ಅಗತ್ಯವಿಲ್ಲದ ಹೆಚ್ಚುವರಿ ತೆರಿಗೆಯನ್ನು ಗಗನಚುಂಬಿ ನಿರ್ಮಾಣಕಾರರು ಭರಿಸಬೇಕಿರುವುದು ನ್ಯಾಯೋಚಿತವಾಗಿದೆ. ಅಪಾರವಾದ ಬಂಡವಾಳವನ್ನು ಹೂಡಿ ಪಡೆದ ನೀರನ್ನು ಬಳಸುವ ಬಳಕೆದಾರರು ಅದರ ಮೇಲಿನ ಭಾಗಶಃ ವೆಚ್ಚವನ್ನಾದರೂ ಭರಿಸಲಿ ಎನ್ನುವ ಸದಾಶಯದಿಂದ ನೀರಿನ ದರವನ್ನು ಹೆಚ್ಚಿಸಲಾಗಿದೆ.

142. ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮುಂದಿಡುತ್ತೇನೆ.

ವಾಣಿಜ್ಯ ತೆರಿಗೆಗಳು

143. ವಾಣಿಜ್ಯ ತೆರಿಗೆಗಳು ರಾಜ್ಯದ ತೆರಿಗೆ ಆದಾಯದ ಬಹು ಮುಖ್ಯ ಮೂಲವಾಗಿದ್ದು, ಇದರ ಪ್ರಮಾಣ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಹೆಚ್ಚುತ್ತಿದ್ದು, ಪ್ರಸ್ತುತ ವರ್ಷದಲ್ಲಿ ಇದರ ಕೊಡುಗೆ ಶೇ. 68ನ್ನು ದಾಟುವ ನಿರೀಕ್ಷೆ ಇದೆ.

144. ತೆರಿಗೆ ಪದ್ಧತಿಯು ಸರ್ಕಾರಕ್ಕೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಮಾತ್ರ ಸೀಮಿತವಾಗಿರದೆ ಬಂಡವಾಳ ಹೂಡಿಕೆ ಮತ್ತು ಆರ್ಥಿಕ ಬೆಳವಣಿಗೆಗೂ ಪೂರಕವಾಗುವುದರ ಜೊತೆಗೆ ಸಮಾಜದ ಎಲ್ಲಾ ವರ್ಗಗಳ ನಡುವೆ ಆದಾಯವು ಸೂಕ್ತವಾಗಿ ಹಂಚಿಕೆಯಾಗಲು ಸಹಕಾರಿಯಾಗಿರಬೇಕು.

145. ಈ ಉದ್ದೇಶಕ್ಕನುಗುಣವಾಗಿ, ತೆರಿಗೆ ನೀತಿ ಮತ್ತು ವಿಧಾನಗಳಲ್ಲಿ ಪ್ರಗತಿಪರತೆ, ವೈಜ್ಞಾನಿಕತೆ, ವೈಚಾರಿಕತೆ ಮತ್ತು ಪಾರದರ್ಶಕತ್ವವನ್ನು ಅಳವಡಿಸುವ ಪ್ರಯತ್ನವನ್ನು ನಾನು ನಿರಂತರವಾಗಿ ಮಾಡುತ್ತಾ ಬಂದಿದ್ದೇನೆ.

146. ಈ ವಿಚಾರಗಳು ರಾಷ್ಟ್ರದ ವಿವಿಧ ವೇದಿಕೆಗಳಲ್ಲಿ ಚರ್ಚಿತವಾಗಿದ್ದು, 1995ನೇ ಡಿಸೆಂಬರ್‌ನಲ್ಲಿ ನವದೆಹಲಿಯಲ್ಲಿ ನಡೆದ ರಾಜ್ಯಗಳ ಅರ್ಥಸಚಿವರ ಸಮ್ಮೇಳನದಲ್ಲೂ ಸಹ ವಿಮರ್ಶಿಸಲ್ಪಟ್ಟು, ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿದೆ :

- (i) ತೆರಿಗೆ ವಿಧಿಗಳನ್ನು ಕಡಿಮೆ ಮಾಡುವುದು ;
- (ii) ತೆರಿಗೆ ದರಗಳ ಸಂಖ್ಯೆಯನ್ನು ನಾಲ್ಕು ಸಾಮಾನ್ಯ ಕನಿಷ್ಠ ದರಗಳಿಗೆ ಇಳಿಸಲು (0, 4, 8 ಮತ್ತು 12) ಮತ್ತು ವಿಶೇಷ ಕನಿಷ್ಠ ದರಗಳಾಗಿ 1 ಮತ್ತು 20ನ್ನು ಅನುಸರಿಸುವುದು;
- (iii) ಕೈಗಾರಿಕೆಗಳಿಗೆ ನೀಡುವ ತೆರಿಗೆಗೆ ಸಂಬಂಧಪಟ್ಟ ಉತ್ತೇಜನ ರಿಯಾಯಿತಿಯನ್ನು ರದ್ದು ಪಡಿಸುವುದು; ಹಾಗೂ
- (iv) ಮೌಲ್ಯವರ್ಧಿತ ತೆರಿಗೆಯನ್ನು ಅಳವಡಿಸುವುದು.

147. ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಸಮಾನತೆಯನ್ನು ಸಾಧಿಸಲು, ಮೇಲಿನ ಶಿಫಾರಸ್ಸುಗಳನ್ನು ಅಳವಡಿಸುವ ಅವಶ್ಯಕತೆಯು ನನಗೆ ಮನವರಿಕೆಯಾಗಿದೆ. ಮುಂದೊಂದು ದಿನ ಭಾರತದಲ್ಲಿ ಸಾಮಾನ್ಯ ಮಾರುಕಟ್ಟೆ ರೂಪಿತವಾಗಿ, ರಾಜ್ಯ ರಾಜ್ಯಗಳ ನಡುವೆ ಸರಕುಗಳ ಮುಕ್ತ ಸಾಗಣೆ ಮತ್ತು ವ್ಯಾಪಾರ ಅನಿವಾರ್ಯ. ಜೊತೆಗೆ ತೆರಿಗೆ ಸ್ವರೂಪ ಸರಳವಾಗಿ ಮತ್ತು ತೆರಿಗೆ ದರಗಳು ಸೂಕ್ತವಾಗಿರಬೇಕು.

148. ನಾನು ಈ ದಿಶೆಯಲ್ಲಿ ಕಳೆದೆರಡು ಆಯವ್ಯಯ, ಪತ್ರಗಳಲ್ಲಿ ಕೆಲವೊಂದು ಕ್ರಮಗಳನ್ನು ಕೈಗೊಂಡು ತೆರಿಗೆ ದರಗಳ ಸಂಖ್ಯೆಯನ್ನು 21 ರಿಂದ 4ಕ್ಕೆ ಇಳಿಸಿರುತ್ತೇನೆ. ಆದರೂ ಸಹ ನಮ್ಮಲ್ಲಿ ವಿವಿಧ ರೀತಿಯ ತೆರಿಗೆ ವಿಧಿಗಳಿವೆ. ಉದಾಹರಣೆಗೆ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ಮಾರಾಟ ತೆರಿಗೆಯ ಜೊತೆಗೆ ಸರ್‌ಚಾರ್ಜ್, ವಹಿವಾಟು ತೆರಿಗೆ ಇತ್ಯಾದಿ ವಿಧಿಗಳಿವೆ. ಈ ಬಹು ವಿಧಿಗಳನ್ನು ಕಡಿಮೆ ಮಾಡುವ ಅನಿವಾರ್ಯತೆ ಇದೆ.

149. ಮೌಲ್ಯಾಧಾರಿತ ತೆರಿಗೆ ಪದ್ಧತಿಯೆಡೆಗೆ ಸಾಗಲು ನಮ್ಮಲ್ಲಿ ಸರಕುಗಳ ಮೇಲೆ ಏಕ ಮಾತ್ರ ವಿಧಿಯಲ್ಲದೆ, ಕಡಿಮೆ ಸಂಖ್ಯೆ ತೆರಿಗೆ ದರಗಳನ್ನು ಅಳವಡಿಸಬೇಕಾಗುತ್ತದೆ. ಈ ದಿಶೆಯಲ್ಲಿ ವ್ಯಾಪಾರ ಮತ್ತು ಕೈಗಾರಿಕೋದ್ಯಮಿಗಳ ಪ್ರತಿನಿಧಿಗಳು ಮತ್ತು ತಜ್ಞರ ಜೊತೆ ಸಮಾಲೋಚಿಸಿದ್ದೇನೆ. ಹಾಗೂ ರಾಜ್ಯದಲ್ಲಿ ಮತ್ತು ನೆರೆ ರಾಜ್ಯಗಳಲ್ಲಿ ಇರುವ ತೆರಿಗೆ ಪದ್ಧತಿಯನ್ನು ಅವಲೋಕಿಸಿರುತ್ತೇನೆ.

150. ಈ ಎಲ್ಲಾ ಪ್ರಯತ್ನಗಳ ಫಲಶ್ರುತಿಯಾಗಿ ತೆರಿಗೆ ಪದ್ಧತಿಯನ್ನು ಸುಧಾರಣೆ ಮತ್ತು ಸರಳೀಕರಣಗೊಳಿಸುವ ಅಂಗವಾಗಿ ಹಲವಾರು ಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಪ್ರಸ್ತಾಪಿಸುತ್ತೇನೆ. ಅದರ ವಿವರಗಳನ್ನು ನಾನು ಮಂಡಿಸುತ್ತೇನೆ.

ಮಾರಾಟ ತೆರಿಗೆ

ಸರ್‌ಚಾರ್ಜ್‌ನ್ನು ರದ್ದು ಪಡಿಸುವುದು

151. ಮಾರಾಟ ತೆರಿಗೆ ಕಾಯ್ದೆ ಅಡಿಯಲ್ಲಿ ಈಗಾಗಲೇ ನಾನು ತಿಳಿಸಿದಂತೆ ನಾಲ್ಕು ವಿಧದ ತೆರಿಗೆಗಳಿರುತ್ತವೆ. ನಾನು ಸರ್‌ಚಾರ್ಜ್‌ನ್ನು ರದ್ದುಗೊಳಿಸಲು ಪ್ರಸ್ತಾಪಿಸುತ್ತೇನೆ. ಈ ರದ್ಧತಿ ಕ್ರಮದಿಂದ ಮೇಲ್ನೋಟಕ್ಕೆ ರೂ. 150 ಕೋಟಿಗಳು ಆದಾಯ ಕಡಿಮೆಯಾಗುವಂತೆ ಕಂಡರೂ ಸಹ ಈ ತೆರಿಗೆ ರದ್ದತಿಯಿಂದ ಸಾಮಾನ್ಯ ಜನತೆಗೆ ಪರಿಹಾರ ಲಭ್ಯವಾಗುತ್ತದೆ. ಜೊತೆಗೆ ಇದರಿಂದ ತೆರಿಗೆ ಸಂದಾಯ ಮಾಡುವ ಪ್ರವೃತ್ತಿಯು ಹೆಚ್ಚುತ್ತದೆ. ಇದಲ್ಲದೆ ಬಹುವಿಧದ ತೆರಿಗೆಗಳ ಸಂಖ್ಯೆ ಕಡಿಮೆಯಾಗುವುದರಿಂದ ಮೌಲ್ಯಾಧಾರಿತ ತೆರಿಗೆ ಪದ್ಧತಿಯನ್ನು ಅಳವಡಿಸುವ ದಿಶೆಯಲ್ಲಿ ಒಂದು ಪ್ರಮುಖ ಪ್ರಯತ್ನವಾಗಿರುತ್ತದೆ. ಈ ಕ್ರಮದಿಂದ ಆಗುವ ಕೊರತೆಯನ್ನು ನೀಗಿಸಲು, ಸಮಾಜದಲ್ಲಿ ಹೆಚ್ಚು ಕರಭಾರ ಹೊರುವ ಶಕ್ತಿಯುಳ್ಳ ವರ್ಗ ಬಳಸುವ ಕೆಲವು ಸರಕುಗಳ ಮೇಲೆ ಈಗಿರುವ ತೆರಿಗೆ ದರವನ್ನು ಹೆಚ್ಚಿಸುವ ಮೂಲಕ ಸರಿದೂಗಿಸಲು ಆಲೋಚಿಸಿದ್ದು, ಅಂತಹ ಕ್ರಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಿದ್ದೇನೆ.

ಮಾರಾಟ ತೆರಿಗೆಯಡಿಯಲ್ಲಿ ಹೊಂದಾಣಿಕೆ ಪದ್ಧತಿಯ ತೆರಿಗೆ

(i) ವಾರ್ಷಿಕ ವಹಿವಾಟು ರೂ. ಐದು ಲಕ್ಷದ ಒಳಗೆ ಇರುವ ವರ್ತಕರಿಗೆ

152. ಈ ಪರಿಮಿತಿಯಲ್ಲಿ ಇರುವ ವರ್ತಕರಿಗೆ ಹೊಸ ಹೊಂದಾಣಿಕೆ ಪದ್ಧತಿಯಡಿಯಲ್ಲಿ, ವಹಿವಾಟಿಗನುಗುಣವಾಗಿ ಸ್ವಲ್ಪ ಪ್ರಮಾಣದ ಹೊಂದಾಣಿಕೆ ತೆರಿಗೆಯನ್ನು ಕಟ್ಟಲು ಅವಕಾಶವನ್ನು ಕೊಡಲು ಉದ್ದೇಶಿಸಿದ್ದೇನೆ. ಈ ಪದ್ಧತಿಯ ವಿವರಗಳನ್ನು ಕೆಳಕಂಡಂತಿವೆ.

ವಾರ್ಷಿಕ ವಹಿವಾಟು	ಹೊಂದಾಣಿಕೆ ಮೊತ್ತ
ರೂ. ಮೂರು ಲಕ್ಷದವರೆಗೆ	ರೂ. 1,500,
ರೂ. ಮೂರು ಲಕ್ಷದಿಂದ ರೂ. ಐದು ಲಕ್ಷದವರೆಗೆ	ರೂ. 1,500 ಹಾಗೂ ಮೂರು ಲಕ್ಷಕ್ಕೆ ಮೀರಿದ ವಹಿವಾಟಿನ ಮೇಲೆ ಶೇಕಡಾ 2 ರಂತೆ.

ಈ ಪದ್ಧತಿಯಲ್ಲಿ ಬರುವ ವರ್ತಕರು, ಖರೀದಿ ಮತ್ತು ಮಾರಾಟದ ಲೆಕ್ಕಗಳನ್ನು ಹೊರತುಪಡಿಸಿ, ಇನ್ನಾವುದೇ ಸವಿವರವಾದ ಲೆಕ್ಕಗಳನ್ನು ನಿರ್ವಹಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಈ ಸೌಲಭ್ಯವು ಮದ್ಯ ಮತ್ತು ಬಿಯರ್ ಮಾರಾಟಗಾರರು, ಹೋಟೆಲ್, ಬಾರ್ ಮತ್ತು ಉಪಹಾರ ಗೃಹಗಳನ್ನು ನಡೆಸುವವರು ಮತ್ತು ಪರ ರಾಜ್ಯಗಳಿಂದ ರಿಯಾಯಿತಿ ದರದಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳುವವರಿಗೆ ಅನ್ವಯಿಸುವುದಿಲ್ಲ. ಈ ಪದ್ಧತಿಯಿಂದ ಸಣ್ಣ ಪುಟ್ಟ ವರ್ತಕರಿಂದ ತೆರಿಗೆ ಸಂಗ್ರಹಣೆ ಸುಲಭವಾಗುತ್ತದೆ.

(ii) ವಾರ್ಷಿಕ ವಹಿವಾಟು ಐವತ್ತು ಲಕ್ಷ ರೂಪಾಯಿ ಮೀರದಿರುವ ಹೋಟೆಲು ಮತ್ತು ಉಪಹಾರ ಗೃಹಗಳಿಗೆ

ಈಗಿನ ಪದ್ಧತಿಯಲ್ಲಿ ವಾರ್ಷಿಕ ವಹಿವಾಟು ರೂ. 25 ಲಕ್ಷದ ಒಳಗಿನ ಹೋಟೆಲು ಮತ್ತು ಉಪಹಾರ ಗೃಹಗಳು ಹೊಂದಾಣಿಕೆ ಪದ್ಧತಿಯಡಿಯಲ್ಲಿ ತೆರಿಗೆ ಕಟ್ಟುತ್ತಿದ್ದು, ಆ ಮೊತ್ತವು ಶೇಕಡಾ 3.5 ರಿಂದ 5.6ರ ವರೆಗೆ ಆಗುತ್ತದೆ. ಈ ಪದ್ಧತಿಯನ್ನು ಸರಳೀಕೃತಗೊಳಿಸುವ ಉದ್ದೇಶದಿಂದ, ವಾರ್ಷಿಕ ವಹಿವಾಟು ಪರಿಮಿತಿಯನ್ನು ರೂ. 25 ಲಕ್ಷದಿಂದ ರೂ. 50 ಲಕ್ಷದವರೆಗೆ ವಿಸ್ತರಿಸಿ, ಈ ಪರಿಮಿತಿಯಲ್ಲಿ ಒಳಪಡುವ ಹೋಟೆಲು ಮತ್ತು ಉಪಾಹಾರ ಗೃಹಗಳು ಶೇ. 4 ರಂತೆ ಹೊಂದಾಣಿಕೆ ಮೊತ್ತವನ್ನು ತೆರಿಗೆಯಾಗಿ ನೀಡುವ ಅವಕಾಶವನ್ನು ಕಲ್ಪಿಸಿ ಕೊಡಲು ಪ್ರಸ್ತಾಪಿಸುತ್ತೇನೆ.

(iii) ಗುತ್ತಿಗೆ ಕಾಮಗಾರಿ ಕೆಲಸಗಳನ್ನು ನಿರ್ವಹಿಸುವ ವರ್ತಕರಿಗೆ

ಈಗಿನ ಹೊಂದಾಣಿಕೆ ಪದ್ಧತಿಯಲ್ಲಿ ವಿವಿಧ ಕಾಮಗಾರಿಗಳಿಗೆ, ಬೇರೆ ಬೇರೆ ದರಗಳಲ್ಲಿ ಅಂದರೆ ಶೇ. 2, 4 ಮತ್ತು 8ರಂತೆ ತೆರಿಗೆ ಅನ್ವಯಿಸುತ್ತದೆ. ಸಾಮಾನ್ಯವಾಗಿ ಒಂದು ಗುತ್ತಿಗೆ ಕಾಮಗಾರಿಯು ಸಿವಿಲ್, ಎಲೆಕ್ಟ್ರಿಕಲ್, ಫ್ಯಾಬ್ರಿಕೇಶನ್ ಮುಂತಾದ ಹಲವು ವಿಧದ ಕಾಮಗಾರಿ ಕೆಲಸಗಳನ್ನು ಒಳಗೊಂಡಿರುತ್ತದೆ. ಗುತ್ತಿಗೆದಾರರು ಒಟ್ಟು ಗುತ್ತಿಗೆಯನ್ನು, ವಿವಿಧ ಗುತ್ತಿಗೆಗಳಾಗಿ ವಿಭಜಿಸುವ ಮೂಲಕ ತೆರಿಗೆ ಉಳಿಸುವ ಪ್ರಯತ್ನ ಮಾಡುವುದರ ಜೊತೆಗೆ ಲೆಕ್ಕ ಪತ್ರಗಳನ್ನೂ ಸಹ ಕ್ಲಿಷ್ಟಗೊಳಿಸುತ್ತಾರೆ. ಇದರಿಂದಾಗಿ ತೆರಿಗೆ ಸೋರುವಿಕೆಗೆ ಅವಕಾಶವಿರುತ್ತದೆ. ಈ ಎರಡು ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಗುತ್ತಿಗೆಗಳ ಮೇಲೆ ಈಗಿರುವ ವಿವಿಧ ಹೊಂದಾಣಿಕೆ ದರಗಳ ಬದಲು, ಎಲ್ಲ ವಿಧವಾದ ಕಾಮಗಾರಿ ಗುತ್ತಿಗೆಗಳ ಮೇಲೆ ಶೇ. 4 ರಂತೆ ಏಕರೂಪ ಹೊಂದಾಣಿಕೆ ತೆರಿಗೆಯನ್ನು ಕೊಡಲು ಉದ್ದೇಶಿಸಿದ್ದೇನೆ.

153. 1996ಕ್ಕೆ ಮುಂಚೆ ಗುತ್ತಿಗೆ ಕಾಮಗಾರಿ ಹೊಂದಾಣಿಕೆ ತೆರಿಗೆಗೆ ಸಂಬಂಧಪಟ್ಟ ಉಪಬಂಧಗಳನ್ನು ತಪ್ಪಾಗಿ ಅರ್ಥೈಸುವ ಮೂಲಕ, ಕೂಲಿಗೆ ಸಂಬಂಧಪಟ್ಟ ಅಂಶದ ಮೇಲೆ ತೆರಿಗೆ ವಿನಾಯಿತಿಯನ್ನು ಕೊಡುವ ಸಂದರ್ಭ ಉದ್ಭವಿಸಿದ್ದು, ತೆರಿಗೆ ರಕ್ಷಣೆ ಮಾಡುವ ಮತ್ತು ಇಂತಹ ತಪ್ಪಾಗಿ ಅರ್ಥೈಸುವುದನ್ನು ತಪ್ಪಿಸುವ ಸಲುವಾಗಿ, ಸಂಬಂಧಪಟ್ಟ ಉಪಬಂಧಗಳನ್ನು ಪೂರ್ವಾನ್ವಯವಾಗಿ ಸೂಕ್ತವಾಗಿ ಮಾರ್ಪಡಿಸಲು ಪ್ರಸ್ತಾಪಿಸುತ್ತೇನೆ.

ಸಂಕ್ಷಿಪ್ತ ಕರನಿರ್ಧರಣಾ ಪದ್ಧತಿ

154. ಸಂಕ್ಷಿಪ್ತ ಕರನಿರ್ಧರಣಾ ಪದ್ಧತಿಯನ್ನು ಜನಪ್ರಿಯಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿರುತ್ತೇನೆ :

(i) ಸಂಕ್ಷಿಪ್ತ ಕರನಿರ್ಧರಣೆಗಾಗಿ ಈಗ ಇರುವ ವಾರ್ಷಿಕ ವಹಿವಾಟಿನ ಮಿತಿಯನ್ನು ರೂ. 10 ಲಕ್ಷದಿಂದ ರೂ. 25 ಲಕ್ಷಕ್ಕೆ ನಿಗದಿಪಡಿಸಲು;

(ii) ಚಾಲ್ತಿಯಲ್ಲಿರುವ ನಿರ್ಬಂಧಗಳನ್ನು ಸುಲಭಗೊಳಿಸುವುದು ; ಹಾಗೂ

(iii) ಸಂಕ್ಷಿಪ್ತ ಕರನಿರ್ಧಾರಣೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೊಡುವ ಕಾಲಮಿತಿಯನ್ನು ಆರು ತಿಂಗಳು ವಿಸ್ತರಿಸುವುದು.

ತೆರಿಗೆ ವಿನಾಯಿತಿ

155. ಕೃಷಿವಲಯವನ್ನು ಉತ್ತೇಜಿಸುವ ಸಲುವಾಗಿ ಮತ್ತು ರೈತಾಪಿ ವರ್ಗಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ರಾಸಾಯನಿಕ ಗೊಬ್ಬರಗಳ ಮಾರಾಟ ತೆರಿಗೆಯನ್ನು ರದ್ದುಗೊಳಿಸುವ ಪ್ರಸ್ತಾವನೆಯನ್ನು ಮಾಡುತ್ತೇನೆ. ಆದರೆ ವಹಿವಾಟು ಮತ್ತು ಶೇ. 2ರಂತೆ ಕೇಂದ್ರ ಮಾರಾಟ ತೆರಿಗೆ ಮುಂದುವರಿಯುತ್ತದೆ.

156. ಕೈಮಗ್ಗ ವಲಯವನ್ನು ಪ್ರೋತ್ಸಾಹಿಸುವ ಸಲುವಾಗಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕೈಮಗ್ಗ ನೇಕಾರರ ಸಹಕಾರ ಸಂಘಗಳು ಮತ್ತು ಮಹಾಮಂಡಳಿಗೆ ಮಾರಾಟವಾಗುವ 'ಹ್ಯಾಂಕ್' ನೂಲಿನ ಮೇಲೆ ಇರುವ ತೆರಿಗೆಯನ್ನು ರದ್ದುಗೊಳಿಸಲು ಉದ್ದೇಶಿಸಿದ್ದೇನೆ.

157. 'ದ್ವಾಕ್ರಾ' ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳಾ ಉದ್ಯಮಿಗಳು ತಯಾರಿಸಿ ಮಾರಾಟ ಮಾಡುವ ಸರಕುಗಳಿಗೆ ಮಾರಾಟ ತೆರಿಗೆಯಿಂದ ವಿನಾಯಿತಿ ಕೊಡಲು ಪ್ರಸ್ತಾಪಿಸುತ್ತೇನೆ.

158. ಈ ಕೆಳಕಂಡ ವಸ್ತುಗಳ ಮೇಲೆ ಇರುವ ಮಾರಾಟ ತೆರಿಗೆಗೆ ವಿನಾಯಿತಿಕೊಡಲು ಪ್ರಸ್ತಾಪಿಸುತ್ತೇನೆ:-

(i) ಒಣದ್ರಾಕ್ಷಿ;

(ii) ಕರ್ನಾಟಕ ಹಾಲು ಮಹಾ ಮಂಡಲಿ ಮತ್ತು ಅದರ ಒಕ್ಕೂಟಗಳು ತಮ್ಮಗಳ ನಡುವೆ ಪರಸ್ಪರ ಮಾರಾಟ ಮಾಡುವ ಸ್ಕಿಮ್ಡ್ ಹಾಲಿನ ಪುಡಿ; ಮತ್ತು

(iii) ಒಣಗಿದ ಅಥವಾ ಹಸಿ ಹುಲ್ಲು.

159. ಕಳೆದ ವರ್ಷಗಳಲ್ಲಿ ನೀಡಿದ ಜೀವರಕ್ಷಕ ಔಷಧಿಗಳು ಮತ್ತು ಜೈವಿಕ ಕೃತಕ ಬೆಳೆವಣಿಗೆ ಹಾರ್ಮೋನುಗಳ ಮೇಲೆ ನೀಡಿದ ವಿನಾಯಿತಿಯನ್ನು ಈ ವರ್ಷವೂ ಮುಂದುವರಿಸಲು ಪ್ರಸ್ತಾಪಿಸುತ್ತೇನೆ.

ತೆರಿಗೆ ದರಗಳ ಸುಧಾರಣೆ ಮತ್ತು ಪರಿಹಾರ

160. ತೆರಿಗೆ ದರಗಳ ಸುಧಾರಣೆ ಮತ್ತು ಪರಿಹಾರ ಅಂಗವಾಗಿ ಕೆಳಕಂಡ ಸರಕುಗಳ ಮೇಲೆ ತೆರಿಗೆ ದರವನ್ನು ಇಳಿಸಲು ಉದ್ದೇಶಿಸಿದ್ದೇನೆ :

(i) ವಿದ್ಯುತ್ ಯೋಜನೆಗಳಲ್ಲಿ ಹಾಗೂ ಸ್ವಯಂ ಶಕ್ತಿ ಉತ್ಪಾದನಾ ಘಟಕಗಳಲ್ಲಿ ಉಪಯೋಗಿಸಲ್ಪಡುವ ಟ್ರಾನ್ಸ್‌ಫಾರ್ಮರ್‌ಗಳು, ವಾಹಕಗಳು, ಕುಲುಮೆ ಎಣ್ಣೆ, ಎಲ್.ಎಸ್.ಎಚ್.ಎಸ್. ಕೀಲೆಣ್ಣೆ ಮತ್ತು ಡೀಸೆಲ್ ಇವುಗಳ ತೆರಿಗೆ ದರಗಳನ್ನು ಶೇ. 12/20 ರಿಂದ ಶೇ. 4 ಕ್ಕೆ;

(ii) ಅಗರಬತ್ತಿ ತೆರಿಗೆ ದರವನ್ನು ಶೇ. 8 ರಿಂದ ಶೇ. 4 ಕ್ಕೆ;

(iii) ಎಕ್ಸಿಮ್/ಆರ್‌ಇಪಿ ತರಹದ ಸ್ಕ್ರಿಪ್ ಹಾಗೂ ಲೈಸನ್ಸ್‌ಗಳ ಮೇಲೆ ತೆರಿಗೆ ದರ ಶೇ. 12 ರಿಂದ ಶೇ. 4ಕ್ಕೆ;

(iv) ವ್ಯಾಪಾರ ಪಲ್ಲಟವನ್ನು ನಿವಾರಿಸಲು ಕೆಲವೊಂದು ಎಲೆಕ್ಟ್ರಾನಿಕ್ ವಸ್ತುಗಳ ಮೇಲಿನ ತೆರಿಗೆ ದರವನ್ನು ಶೇ. 8 ರಿಂದ ಶೇ. 4ಕ್ಕೆ;

(v) ಕಾಫಿ ಬೀಜ (ಕಚ್ಚಾ ಅಥವಾ ಹುರಿದ) ದ ತೆರಿಗೆ ದರವನ್ನು ಶೇ. 6 ರಿಂದ ಶೇ. 4ಕ್ಕೆ; ಆದರೆ ಕಾಫಿ ಬೀಜದ ಮೇಲಿರುವ ವಹಿವಾಟು ತೆರಿಗೆ ವಿನಾಯಿತಿಯನ್ನು ರದ್ದುಪಡಿಸಲು;

(vi) ಎಲ್ಲಾ ವಿಧದ ಸ್ಕ್ರಾಪಸ್ ಮೇಲೆ ಈಗಿರುವ ವಿವಿಧ ದರಗಳಾದ ಶೇ. 4, 8 ಮತ್ತು 12ರ ಬದಲು ಏಕರೂಪವಾಗಿ ಶೇ. 4 ರಷ್ಟು ತೆರಿಗೆ ದರವನ್ನು ವಿಧಿಸಲು ; ಹಾಗೂ

(vii) ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಯಂ ಉದ್ಯೋಗವನ್ನು ಪ್ರೋತ್ಸಾಹಿಸುವ ಸಲುವಾಗಿ ಆಟೋರಿಕ್ಷಾಗಳ (ತ್ರಿಚಕ್ರ ವಾಹನಗಳು) ಮೇಲೆ ಇರುವ ತೆರಿಗೆ ದರವನ್ನು ಶೇ. 6ರಿಂದ ಶೇ. 4ಕ್ಕೆ.

161. ವನಸ್ಪತಿ, ಖಾದ್ಯವಲ್ಲದ ತೈಲಗಳು, ಗೋಡಂಬಿ ಸಿಪ್ಪೆಯ ಎಣ್ಣೆ ಮತ್ತು ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳ ಮೇಲೆ ತೆರಿಗೆ ದರವನ್ನು ಇಳಿಸಿದ ಪಕ್ಷದಲ್ಲಿ ತೆರಿಗೆ ಸಂಗ್ರಹಣೆ ಹೆಚ್ಚಾಗುತ್ತದೆ ಎಂದು ಸಂಬಂಧಪಟ್ಟ ವಣಿಕೆ ಸಂಸ್ಥೆಗಳ ಪ್ರತಿನಿಧಿಗಳು ಭರವಸೆ ನೀಡಿರುವುದರಿಂದ, ಒಂದು ವರ್ಷದ ಮಟ್ಟಿಗೆ ಪ್ರಯೋಗಾತ್ಮಕವಾಗಿ ಈ ಕೆಳಕಂಡಂತೆ ತೆರಿಗೆ ದರವನ್ನು ಕಡಿಮೆ ಮಾಡಲು ಪ್ರಸ್ತಾಪಿಸುತ್ತೇನೆ:

(i) ಎಲ್ಲ ವಿಧದ ಖಾದ್ಯ ಮತ್ತು ಖಾದ್ಯವಲ್ಲದ ಸಸ್ಯಜನಿತ ಎಣ್ಣೆಗಳು (ಸಂಸ್ಕರಿಸಿದ ಮತ್ತು ಸಂಸ್ಕರಿಸದ) ಮತ್ತು ವನಸ್ಪತಿಯ ಮೇಲೆ ತೆರಿಗೆ ದರ ಶೇ. 2 ರಷ್ಟು; ಮತ್ತು ವಹಿವಾಟು ತೆರಿಗೆಯಿಂದ ವಿನಾಯಿತಿ;

(ii) ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳ ಮೇಲೆ ಶೇ. 8 ರಿಂದ 4ಕ್ಕೆ.

ತೆರಿಗೆ ದರಗಳಲ್ಲಿ ಹೆಚ್ಚಳ

162. ಈ ಕೆಳಕಂಡ ಸರಕುಗಳ ಮೇಲಿನ ತೆರಿಗೆ ದರಗಳನ್ನು ಹೆಚ್ಚಿಸಲು ಉದ್ದೇಶಿಸಿದ್ದೇನೆ :

(i) ಗುಟ್ಕಾ ಮತ್ತು ಇನ್ನಿತರ ತಂಬಾಕು ಪದಾರ್ಥಗಳ ಮೇಲಿನ ತೆರಿಗೆ ದರವನ್ನು ಶೇ. 8 ರಿಂದ ಶೇ. 20ಕ್ಕೆ;

(ii) ಇಂಡಿಯನ್ ಮೇಡ್ ಲಿಕ್ಕರ್ (ಮದ್ಯ) ಮೇಲಿನ ತೆರಿಗೆ ದರವನ್ನು ಶೇ. 50 ರಿಂದ ಶೇ. 60ಕ್ಕೆ ಮತ್ತು ಬಿಯರ್‌ನ ಮೇಲಿನ ತೆರಿಗೆ ದರವನ್ನು ಶೇ. 50 ರಿಂದ ಶೇ. 55ಕ್ಕೆ;

(iii) ಸಿಮೆಂಟ್ ಮೇಲೆ ಇರುವ ತೆರಿಗೆ ದರವನ್ನು ಶೇ. 12 ರಿಂದ ಶೇ. 15ಕ್ಕೆ;

(iv) ರೆಕ್ಟಿಫೈಯ್ಡ್ ಸ್ಪಿರಿಟ್‌ನ ಮೇಲೆ ಇರುವ ತೆರಿಗೆ ದರವನ್ನು ಶೇ. 12 ರಿಂದ ಶೇ. 20ಕ್ಕೆ;

(v) ತಾರಾ ಹೋಟೆಲುಗಳಲ್ಲಿ ಮಾರಾಟವಾಗುವ ಆಹಾರ ಮತ್ತು ಪಾನೀಯಗಳ ಮೇಲೆ ವಿಧಿಸುವ ತೆರಿಗೆ ದರವನ್ನು ಶೇ. 12 ರಿಂದ ಶೇ. 20ಕ್ಕೆ;

(vi) ಹೋಟೆಲುಗಳ ಮತ್ತು ಉಪಹಾರ ಗೃಹಗಳಲ್ಲಿ ಮಾರಾಟವಾಗುವ ಆಹಾರ ಮತ್ತು ಪಾನೀಯಗಳ ಮೇಲೆ ವಿಧಿಸುವ ತೆರಿಗೆ ದರವನ್ನು ಶೇ. 4 ರಿಂದ ಶೇ. 8ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಈಗಾಗಲೇ ಪ್ರಸ್ತಾಪಿಸಿರುವಂತೆ ರೂ. 50 ಲಕ್ಷ ವಹಿವಾಟು ಮಿತಿಯ ವರೆಗೆ ಹೋಟೆಲು ಮತ್ತು ಉಪಹಾರ ಗೃಹಗಳಿಗೆ ಹೊಂದಾಣಿಕೆ ತೆರಿಗೆ ಪದ್ಧತಿಯಲ್ಲಿ ಶೇ. 4 ತೆರಿಗೆ ದರವಿರುತ್ತದೆ; ಮತ್ತು

(vii) ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟ್‌ಮೆಂಟಿಗೆ ಮಾರಾಟವಾಗುವ ಮದ್ಯ ಮತ್ತು ಬಿಯರ್‌ಗೆ ತೆರಿಗೆ ವಿನಾಯಿತಿ ಇರುತ್ತದೆ. ಈ ಮಾರಾಟಕ್ಕೆ ಇನ್ನು ಮುಂದೆ ಶೇ. 4ರಷ್ಟು ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

(viii) ಪ್ರಸ್ತುತ ತೈಲ ನಿಗಮಗಳ ನಡುವೆ ಮಾರಾಟವಾಗುವ ಪೆಟ್ರೋಲ್, ಡೀಸಲ್ ಮತ್ತು ಕೆಲವು ಪೆಟ್ರೋಲಿಯಮ್ ಉತ್ಪಾದನೆಗಳು ತೆರಿಗೆ ವಿನಾಯಿತಿಯನ್ನು ಹೊಂದಿರುತ್ತವೆ. ಈ ಸೌಲಭ್ಯಗವನ್ನು ಎಲ್ಲಾ ಪೆಟ್ರೋಲಿಯಮ್ ವಸ್ತುಗಳಿಗೂ ವಿಸ್ತರಿಸಲು ಉದ್ದೇಶಿಸಿರುತ್ತೇನೆ.

163. ನಾನು ಇನ್ನೂ ಕೆಲವು ವಸ್ತುಗಳ ತೆರಿಗೆ ದರದಲ್ಲಿ ಹೊಂದಾಣಿಕೆ ಮಾಡಲು ಪ್ರಸ್ತಾಪಿಸುತ್ತೇನೆ. ವಿವರಗಳನ್ನು ಅನುಬಂಧ-IIರಲ್ಲಿ ನೀಡಲಾಗಿದೆ.

ನೋಂದಣಿ

164. 1985ನೇ ಇಸವಿಯಲ್ಲಿ ನೊಂದಣಿ ಮತ್ತು ನವೀಕರಿಸುವ ಶುಲ್ಕವನ್ನು ರೂ. 250ಕ್ಕೆ ನಿಗದಿ ಪಡಿಸಲಾಗಿತ್ತು ಈ ಶುಲ್ಕವನ್ನು 500 ರೂಪಾಯಿಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

165. ಮದ್ಯ ಮತ್ತು ಆಭರಣ ವರ್ತಕರುಗಳ ವಹಿವಾಟಿನ ಮಿತಿಯನ್ನು ಪರಿಗಣಿಸದೆ ಅವರುಗಳು ಕಡ್ಡಾಯವಾಗಿ ನೊಂದಣಿ ಮಾಡಿಸುವ ಪದ್ಧತಿಯನ್ನು ಜಾರಿಗೆ ತರಲು ಉದ್ದೇಶಿಸಿದ್ದೇನೆ.

ವಹಿವಾಟು ತೆರಿಗೆಯ ಸುಧಾರಣೆ

166. ಈಗಿರುವ ನಾಲ್ಕು ವಹಿವಾಟು ತೆರಿಗೆ ದರಗಳಾದ ಶೇ. 1, 1.25, 1.75 ಮತ್ತು 2.75ರ ಬದಲು ಮೂರು ದರಗಳು ಅಂದರೆ ಶೇ. 1, 2 ಮತ್ತು 3ನ್ನು ಜಾರಿಗೆ ತರಲು ಪ್ರಸ್ತಾಪಿಸುತ್ತೇನೆ. ಈಗಿರುವ ವಹಿವಾಟು ತೆರಿಗೆ ವಿನಾಯಿತಿ ಮಿತಿಯನ್ನು ರೂ. 15 ಲಕ್ಷಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

ವಾರ್ಷಿಕ ವಹಿವಾಟು ರೂ. 15 ಲಕ್ಷದಿಂದ 5 ಕೋಟಿ ರೂ.ಗಳ ವರೆಗಿನ ವರ್ತಕರ ಮೇಲೆ ಶೇ. 1 ರಂತೆ, ರೂ. 5 ಕೋಟಿಯಿಂದ ರೂ. 10 ಕೋಟಿ ವಹಿವಾಟು ಹೊಂದಿರುವ ವರ್ತಕರ ಮೇಲೆ ಶೇ. 2 ರಂತೆ ಹಾಗೂ ರೂ. 10 ಕೋಟಿಗೂ ಮೀರಿದ ವಹಿವಾಟು ಉಳ್ಳವರ್ತಕರ ಮೇಲೆ ಶೇ. 3 ರಂತೆ ವಹಿವಾಟು ತೆರಿಗೆ ವಿಧಿಸಲು ಉದ್ದೇಶಿಸಿದ್ದೇನೆ. ಈಗ ಇರುವ ಮೊದಲ ರೂ. 10 ಲಕ್ಷ ವಹಿವಾಟಿನ ಮೇಲೆ ಇರುವ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲು ಪ್ರಸ್ತಾಪಿಸುತ್ತೇನೆ.

167. ಎರಡನೇ ಮತ್ತು ತದನಂತರದ ಮಾರಾಟದ ಮೇಲೆ ಇರುವ ಶೇ. 1 ವಹಿವಾಟು ತೆರಿಗೆಯು ಮುಂದುವರಿಯುತ್ತದೆ.

168. ಮಾರಾಟ ತೆರಿಗೆಗಳ ಸುಧಾರಣೆಯ ಬಗ್ಗೆ ವಿವರಗಳನ್ನು ಅನುಬಂಧ-II ರಲ್ಲಿ ನೀಡಲಾಗಿದೆ.

ಪ್ರವೇಶ ತೆರಿಗೆ

169. ಸಕ್ಕರೆ ಮೇಲಿನ ತೆರಿಗೆ ದರವನ್ನು ಶೇ. 2 ರಿಂದ 1ಕ್ಕೆ ಇಳಿಸಲು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳು ಸಕ್ಕರೆ ಮೇಲಿನ ಪ್ರವೇಶ ತೆರಿಗೆಯನ್ನು ಮೂಲದಲ್ಲೇ ಸಂಗ್ರಹಿಸಿ ಸರ್ಕಾರಕ್ಕೆ ಪಾವತಿ ಮಾಡುವ ಉಪಬಂಧಗಳನ್ನು ತರಲು ಉದ್ದೇಶಿಸಿದ್ದೇನೆ.

170. ಮಾರಾಟ ತೆರಿಗೆಗೆ ಸಮಾನಾಂತರವಾಗಿ, ತ್ರಿಚಕ್ರ ವಾಹನಗಳ ಮೇಲಿನ ತೆರಿಗೆಯನ್ನು ಶೇ. 6 ರಿಂದ ಶೇ. 4ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ.

171. ಸಿಗರೇಟು ಮತ್ತು ಇತರ ತಂಬಾಕು ಪದಾರ್ಥಗಳ ಮೇಲಿನ ತೆರಿಗೆಯನ್ನು ಶೇ. 2 ರಿಂದ ಶೇ. 4ಕ್ಕೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

172. ನ್ಯಾಯ ಸಮ್ಮತವಾದ ಮಾರಾಟ ತೆರಿಗೆ ಆದಾಯದ ರಕ್ಷಣೆ ದೃಷ್ಟಿಯಿಂದ ನಮೂದಿತ ಸರಕುಗಳಿಗೆ ಉಪಯೋಗ ಅಥವಾ ಬಳಕೆಗಾಗಿ ಮಾತ್ರ ಹೊರ ರಾಜ್ಯದಿಂದ ಸ್ಥಳೀಯ ಪ್ರದೇಶವನ್ನು ಪ್ರವೇಶಿಸಿದಲ್ಲಿ ಶೇ. 2 ರಿಂದ ಶೇ. 4ರವರೆಗೆ ಪ್ರವೇಶ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ. ಆದರೆ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶವನ್ನು ಪ್ರವೇಶಿಸುವ ಇಂತಹ ಸರಕುಗಳಿಗೆ ಪ್ರವೇಶ ತೆರಿಗೆ ಇರುವುದಿಲ್ಲ.

173. ರೆಕ್ಟಿಫೈಡ್ ಸ್ಪಿರಿಟ್, ಡಿನೇಚರ್ಡ್ ಸ್ಪಿರಿಟ್ ಮತ್ತು ಕ್ರೂಡ್ ಆಯಿಲ್‌ಗಳಿಗೆ ಕಚ್ಚಾ ವಸ್ತುಗಳಿಗಾಗಿ ಉಪಯೋಗಿಸಿದಾಗ ಇರುವ ರಿಯಾಯಿತಿ ದರದಿಂದ ಹೊರತು ಪಡಿಸಿ, ರೆಕ್ಟಿಫೈಡ್ ಸ್ಪಿರಿಟ್ ಮತ್ತು ಡಿನೇಚರ್ಡ್ ಸ್ಪಿರಿಟ್‌ಗಳಿಗೆ ಶೇ. 4 ರಂತೆ ತೆರಿಗೆ ವಿಧಿಸಲು ಹಾಗೂ ಕೂಡ ಆಯಿಲ್‌ಗೆ ಶೇ. 2 ರಂತೆ ತೆರಿಗ ದರವನ್ನು ಮುಂದುವರಿಸಲು ಉದ್ದೇಶಿಸಿದ್ದೇನೆ.

174. ವಿವರಗಳನ್ನು ಅನುಬಂಧ-III ರಲ್ಲಿ ನೀಡಲಾಗಿದೆ.

175. ಪ್ರವೇಶ ತೆರಿಗೆ ಮರು ಪಾವತಿ ವಿಳಂಬವಾದ ಪಕ್ಷದಲ್ಲಿ ಅದರ ಮೇಲೆ ಕೊಡುವ ಬಡ್ಡಿ ದರವನ್ನು ಶೇ. 9 ರಿಂದ ಶೇ. 12ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

ಮನರಂಜನಾ ತೆರಿಗೆ

'ಮನರಂಜನೆ' ಪರಿಭಾಷೆಯ ಅರ್ಥ ವಿಸ್ತರಣೆ

176. ಇತ್ತೀಚಿಗೆ ಬೆಂಗಳೂರು ನಗರದಲ್ಲಿ ಭುವನ ಸುಂದರಿ ಸ್ಪರ್ಧೆ ನಡೆಯಿತು. ಅಂತರ ರಾಷ್ಟ್ರೀಯ ಮಟ್ಟದ ಕ್ರೀಡೆಗಳು ಮತ್ತು ಆಟಗಳು, ಉದಾಹರಣೆಗೆ ಜಾಗತಿಕ ಕುಸ್ತಿ ಸ್ಪರ್ಧೆ (ಡಬ್ಲ್ಯೂ.ಡಬ್ಲ್ಯೂ.ಎಫ್) ಮತ್ತು ಹಲವು ವಿಧವಾದ ವಿವಿಧ ವಿನೋದಾವಳಿಗಳಿಗು ನಡೆಯಲ್ಪಟ್ಟಿವೆ. ಈ ಕಾರ್ಯಕ್ರಮಗಳಿಗೆ ಅತಿ ಹೆಚ್ಚಿನ ಪ್ರವೇಶ ದರವಿದ್ದರೂ ಹಾಗೂ ರಾಜ್ಯದ ಸೌಲಭ್ಯಗಳನ್ನು ಬಳಸಿಕೊಂಡಿದ್ದರೂ ಅವುಗಳಿಂದ ರಾಜ್ಯದ ಬೊಕ್ಕಸಕ್ಕೆ ಯಾವುದೇ ಆದಾಯ ಬರಲಿಲ್ಲ. ಆದುದರಿಂದ ಮನರಂಜನಾ ತೆರಿಗೆ ಕಾಯ್ದೆಯಡಿಯಲ್ಲಿ 'ಮನರಂಜನೆ' ಪರಿಭಾಷೆಯ ಅರ್ಥದಲ್ಲಿ ವಿನೋದಾವಳಿಗಳು, ಗೋಷ್ಠಿಗಳು, ಕ್ರೀಡೆಗಳು ಮತ್ತು ಆಟಗಳು ಬರುವಂತೆ ವಿಸ್ತರಿಸಿ, ಅಂತಹ ಮನರಂಜನೆಗಳ ಮೇಲೆ, ಪ್ರವೇಶ ದರ ರೂ. 100ಕ್ಕಿಂತ ಹೆಚ್ಚಿದ್ದರೆ ಹಾಗೂ ಮಾನ್ಯತೆ ಪಡೆದ ಕ್ರೀಡೆ ಮತ್ತು ಆಟಗಳ ಪ್ರವೇಶ ದರ ರೂ. 250ಕ್ಕಿಂತ ಹೆಚ್ಚಿದ್ದ ಪಕ್ಷದಲ್ಲಿ ಶೇ. 10ರಷ್ಟು ಮನರಂಜನಾ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

ಚಲನ ಚಿತ್ರಮಂದಿರಗಳಿಗೆ ಮೊಹರು ಪದ್ಧತಿಯನ್ನು ಪುನಃ ಜಾರಿಗೊಳಿಸುವ ಬಗ್ಗೆ

177. ದಿನಾಂಕ 27-9-1994 ರಿಂದ ಚಲನ ಚಿತ್ರಮಂದಿರಗಳಿಗೆ ಸಂಬಂಧ ಪಟ್ಟಂತೆ ಜಾರಿಯಲ್ಲಿರುವ ಹೊಂದಾಣಿಕೆ ಮೂಲಕ ತೆರಿಗೆ ಕಟ್ಟುವ ಪದ್ಧತಿಯಿಂದ ರಾಜ್ಯದ ಆದಾಯಕ್ಕೆ ಸಾಕಷ್ಟು ನಷ್ಟವಾಗಿರುತ್ತದೆ. ಈ ಪದ್ಧತಿಯನ್ನು ಜಾರಿಗೆ ತರಲು ಆಧಾರವಾದ ಸುಬ್ಬರಾವ್ ಸಮಿತಿ ವರದಿಯು, 2 ವರ್ಷದ ಅವಧಿ ಮುಗಿದ ನಂತರ, ಹೊಂದಾಣಿಕೆ ಪದ್ಧತಿಯನ್ನು ಪುರ್ನವಿಮರ್ಶಿಸಲು ಶಿಫಾರಸ್ಸು ಮಾಡಿರುತ್ತದೆ. ಆದುದರಿಂದ ಈಗಿರುವ ಪದ್ಧತಿಯನ್ನು ಪುನರ್‌ವಿಮರ್ಶಿಸಿ, ಮೊಹರು ಟಿಕೆಟ ಪದ್ಧತಿಯನ್ನು ಜಾರಿಗೊಳಿಸಿ, ಹೊಂದಾಣಿಕೆ ಪದ್ಧತಿಯನ್ನು 50,000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಹಿಂತೆಗೆದುಕೊಳ್ಳಲು ಉದ್ದೇಶಿಸಿರುತ್ತೇನೆ. ಆದರೆ ಕನ್ನಡ ಕೊಡುವ, ಕೊಂಕಣಿ ಮತ್ತು ತುಳು ಭಾಷೆಯ ಚಲನ ಚಿತ್ರಗಳಿಗೆ ಈಗ ಇರುವ ಶೇ. 100ರಷ್ಟು ತೆರಿಗೆ ವಿನಾಯಿತಿಯನ್ನು 1997-98ನೇ ಸಾಲಿನಲ್ಲೂ ಸಹಮುಂದುವರಿಸಲು ಉದ್ದೇಶಿಸಿರುತ್ತೇನೆ. ಜನಸಂಖ್ಯೆ 50,000ಕ್ಕಿಂತ ಕಡಿಮೆ ಇರುವ ಪ್ರದೇಶಗಳಲ್ಲಿರುವ ಚಲನಚಿತ್ರ ಮಂದಿರಗಳು ಹೊಂದಾಣಿಕೆ ಪದ್ಧತಿಯ ಮೂಲಕವಾಗಲಿ ಅಥವಾ ಮೊಹರು ಪದ್ಧತಿಯ ಮೂಲಕವಾಗಲಿ ತೆರಿಗೆ ಕೊಡಲು ಅವಕಾಶವಿರುವುದು.

178. ಚಲನಚಿತ್ರ ವಿತರಕರು ತಾವು ಪ್ರದರ್ಶನಕ್ಕೆ ಹಂಚಿದ ಚಲನಚಿತ್ರಗಳ ವಿವರಗಳನ್ನು ಸಂಬಂಧಿತ ಅಧಿಕಾರಿಗಳಿಗೆ ಕಡ್ಡಾಯವಾಗಿ ನೀಡುವಂತೆ ಮಾಡಲು ಉದ್ದೇಶಿಸಿದ್ದೇನೆ.

ಕೃಷಿ ವರಮಾನ ತೆರಿಗೆ

179. ನಾವು ಅನುಸರಿಸುತ್ತಿರುವ ಪ್ರಗತಿಪರ ಧೋರಣೆಗಳನ್ನು ಗಮನದಲ್ಲಿಟ್ಟುಕೊಂಡು, ವರಮಾನದ ವಿನಾಯಿತಿ ಮಿತಿಯನ್ನು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರೂ. 30,000 ದಿಂದ ರೂ. 40,000ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಹಾಗೂ ವರಮಾನ ತೆರಿಗೆಯ ಗರಿಷ್ಠ ದರಗಳನ್ನು ವ್ಯಕ್ತಿಗಳಿಗೆ ಸಂಬಂಧಿಸಿದಂತೆ

ಶೇ. 45 ರಿಂದ ಶೇ. 40ಕ್ಕೂ ಮತ್ತು ಕಂಪನಿಗಳ ಪ್ರಕರಣಗಳಲ್ಲಿ ಶೇ. 60 ರಿಂದ ಶೇ. 50ಕ್ಕೂ ಇಳಿಸಲು ಪ್ರಸ್ತಾಪಿಸುತ್ತೇನೆ. ಇವುಗಳ ವಿವರಗಳು ಅನುಬಂಧ-IVರಲ್ಲಿ ನೀಡಲಾಗಿದೆ. ಈ ಕ್ರಮದಿಂದ ರಾಜ್ಯದ ಕೃಷಿ ವರಮಾನ ತೆರಿಗೆ ದರಗಳು ರಾಷ್ಟ್ರದಲ್ಲೇ ಅತ್ಯಂತ ಕಡಿಮೆ ದರಗಳಾಗಿರುತ್ತವೆ.

180. ಏಪ್ರಿಲ್ 1995ರಿಂದ ಜಾರಿಯಲ್ಲಿರುವ ಇನ್‌ವೆಸ್ಟ್‌ಮೆಂಟ್ ಡಿಪಾಸಿಟ್ ಸ್ಕೀಮ್‌ನಲ್ಲಿ ನಿರೀಕ್ಷಿಸಿದ್ದಷ್ಟು ಹಣ ಹೂಡಿಕೆ ಆಗದಿದ್ದರಿಂದ ಹಾಗೂ ಅದರ ಕಾರ್ಯಾಚರಣೆಯ ಜಟಿಲವಾದುದರಿಂದ ಈ ಸ್ಕೀಮನ್ನು ಹಿಂತೆಗೆದುಕೊಳ್ಳಲು ಪ್ರಸ್ತಾಪಿಸುತ್ತೇನೆ.

181. ಕಾಫಿ ಬೆಳೆಗಾರರು ತಾವು ಬೆಳೆದ ಕಾಫಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು, ಸ್ವಾತಂತ್ರ್ಯ ಹೊಂದಿದ್ದು ಇಂತಹ ಮಾರಾಟದ ಮೇಲೆ ಬರುವ ತೆರಿಗೆ ಪ್ರಮಾಣವನ್ನು ರಕ್ಷಿಸಲು 50 ಎಕರೆಗಿಂತ ಹೆಚ್ಚು ಹಿಡುವಳಿ ಹೊಂದಿರುವ ಕಾಫಿ ಬೆಳೆಗಾರರು ಲೆಕ್ಕ ಪತ್ರಗಳನ್ನು ನಿರ್ವಹಿಸಲು ಸೂಕ್ತ ಉಪಬಂಧಗಳನ್ನು ತರಲು ಉದ್ದೇಶಿಸಿದ್ದೇನೆ.

182. ತೆರಿಗೆ ಮರುಪಾವತಿಯಲ್ಲಿ ವಿಳಂಬವಾದರೆ, ಈಗ ನೀಡುತ್ತಿರುವ ಬಡ್ಡಿ ದರವನ್ನು ಶೇ. 4 ರಿಂದ ಶೇ. 12ಕ್ಕೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

183. ಪರಿಗಣಿತ ಕರನಿರ್ಧರಣೆ, ವ್ಯವಹಾರ ನಿಲ್ಲಿಸಿದ ಮೇಲೆ ಮತ್ತು ಇತರೆ ಸಂದರ್ಭಗಳಲ್ಲಿ ಬಂದ ಬ್ಯಾಕ್ ಪೂಲ್ ವರಮಾನದ ಮೇಲೆ ಕರನಿರ್ಧರಣೆ ಮತ್ತು ಕರ ವಸೂಲಿಗೆ ಸಂಬಂಧಪಟ್ಟಂತೆ ಕೆಲವೊಂದು ತಿದ್ದುಪಡಿಗಳನ್ನು ತರಲು ಪ್ರಸ್ತಾಪಿಸುತ್ತೇನೆ.

ವೃತ್ತಿ ತೆರಿಗೆ

ಸಂಬಳದಾರರಿಗೆ ಪರಿಹಾರ

184. ಹಾಲಿ ತಿಂಗಳಿಗೆ ರೂ. 1,500 ಕ್ಕಿಂತ ಹೆಚ್ಚು ಸಂಬಳ/ಮಜೂರಿ ಪಡೆಯುವ ವ್ಯಕ್ತಿಗಳು ವೃತ್ತಿ ತೆರಿಗೆಯನ್ನು ನೀಡುತ್ತಿದ್ದಾರೆ. ವೃತ್ತಿ ತೆರಿಗೆಯನ್ನು ನೀಡುತ್ತಿದ್ದಾರೆ. ವೃತ್ತಿ ತೆರಿಗೆಯ ವಿನಾಯಿತಿ ಮಿತಿಯನ್ನು ರೂ. 3,000ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ತಿಂಗಳಿಗೆ ರೂ. 10,000ಕ್ಕಿಂತ ಕಡಿಮೆ ಸಂಬಳ ಬರುವ ಸಂಬಳದಾರರಿಗೆ ತೆರಿಗೆಯಲ್ಲಿ ಕೆಲವೊಂದು ಪರಿಹಾರವನ್ನು ನೀಡಲು ಉದ್ದೇಶಿಸಿದ್ದೇನೆ.

ತೆರಿಗೆ ದರಗಳಲ್ಲಿ ಪರಿಷ್ಕರಣೆ

185. ಈಗ ಸ್ವಯಂ ವೃತ್ತಿನಿರತ ವ್ಯಕ್ತಿಗಳು/ಕಸಬುದಾರರು ರೂ. 110ರಿಂದ ರೂ. 2,500 ಗಳವರೆಗೆ, ಹದಿನೆಂಟು ವಿವಿಧ ದರಗಳಲ್ಲಿ ವೃತ್ತಿ ತೆರಿಗೆಯನ್ನು ನೀಡುತ್ತಲಿದ್ದು ಸದರಿ ದರಗಳನ್ನು ರೂ. 300, ರೂ. 600, ರೂ. 900, ರೂ. 1,200, ರೂ. 1500, ರೂ. 1,800 ಮತ್ತು ರೂ. 2,500 ಪ್ರಕಾರ 7 ದರಗಳಿಗೆ ಪರಿಷ್ಕರಿಸಲು ಪ್ರಸ್ತಾಪಿಸುತ್ತೇನೆ.

186. ವಿವರಗಳನ್ನು ಅನುಬಂಧ-Vರಲ್ಲಿ ನೀಡಲಾಗಿದೆ.

ಜೂಜು ತೆರಿಗೆ

187. ಬೆಂಗಳೂರು ಟರ್ಫ್ ಕ್ಲಬ್‌ಗೆ 1996-97ರಲ್ಲಿ ನಿಗದಿಪಡಿಸಲಾಗಿದ್ದ ಟೋಟಲೈಸೇಟರ್ ತೆರಿಗೆಯ ಬದಲು ಸಂಯುಕ್ತ ಮೊತ್ತವಾದ ರೂ. 2.75 ಕೋಟಿಗಳಿಂದ 1997-98ನೇ ಸಾಲಿಗೆ ರೂ. 6 ಕೋಟಿಗಳಿಗೆ ನಿಗದಿ ಪಡಿಸಲು ಪ್ರಸ್ತಾಪಿಸುತ್ತೇನೆ. ಹಾಗೆಯೇ ಮೈಸೂರು ರೇಸ್ ಕ್ಲಬ್‌ಗೆ ಸಂಯುಕ್ತ ಮೊತ್ತವನ್ನು ರೂ. 16 ಲಕ್ಷಗಳಿಂದ ರೂ. 20 ಲಕ್ಷಗಳಿಗೆ ನಿಗದಿ ಪಡಿಸಲು ಪ್ರಸ್ತಾಪಿಸುತ್ತೇನೆ.

188. ತೆರಿಗೆ ಸಂಗ್ರಹಣೆಯನ್ನು ಉತ್ತಮಗೊಳಿಸುವ ಉದ್ದೇಶದಿಂದ ಜೂಜಾಟದ ವ್ಯಾಪಾರಿಗಳ ಮೇಲೆ ಇರುವ ಜೂಜು ತೆರಿಗೆಯನ್ನು ಆನ್‌ಕೋರ್ಸ್ ಜೂಜಿನ ಮೇಲೆ ಶೇ. 20 ರಿಂದ ಶೇ. 15ಕ್ಕೆ ಮತ್ತು ಆಫ್ ಕೋರ್ಸ್ ಜೂಜಿನ ಮೇಲೆ ಶೇ. 15 ರಿಂದ ಶೇ. 10ಕ್ಕೆ ಇಳಿಸಲು ಉದ್ದೇಶಿಸಿದ್ದೇನೆ.

189. ಜೂಜು ತೆರಿಗೆ ಕಾಯ್ದೆಯಡಿಯಲ್ಲಿ ತನಿಖೆ ಮತ್ತು ತನಿಖೋತ್ತರ ಕರನಿರ್ಧರಣೆ, ಮರುಕರ ನಿರ್ಧರಣೆ ವಸೂಲಾತಿ ಮತ್ತು ಇತರ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಉಪ ಬಂಧಗಳನ್ನು ತರಲು ಪ್ರಸ್ತಾಪಿಸುತ್ತೇನೆ.

ವಿಲಾಸ ತೆರಿಗೆ

190. ಧೂಮಪಾನವು ಆರೋಗ್ಯಕ್ಕೆ ಹಾನಿಕರವಾದರೂ ಅನೇಕರಿಗೆ ಅದೊಂದು ವಿಲಾಸೀ ಹವ್ಯಾಸವಾಗಿದೆ. ಅಂತ ವಿಲಾಸೀ ಹವ್ಯಾಸದ ವಸ್ತುಗಳಾದ ಸಿಗರೇಟ್ ಮತ್ತು ಇತರ ತಂಬಾಕು ಪದಾರ್ಥಗಳ ಮೇಲೆ ಶೇ. 4 ರಷ್ಟು ವಿಲಾಸ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ. ಆದರೆ ಇನ್ನು ಮುಂದೆ ಸಿಗರೇಟು ಮತ್ತು ಇತರ ತಂಬಾಕು ಪದಾರ್ಥಗಳು ವಿಲಾಸ ತೆರಿಗೆ ಅಥವಾ ಪ್ರವೇಶ ತೆರಿಗೆ, ಯಾವುದಾದರೂ ಒಂದು ಅಧಿನಿಯಮದಡಿಯಲ್ಲಿ ಮಾತ್ರ ತೆರಿಗೆಗೊಳಪಡುತ್ತವೆ.

ಶಾಸನಾತ್ಮಕ ಮತ್ತು ಆಡಳಿತ ಕ್ರಮಗಳು

191. ತೆರಿಗೆ ಪದ್ಧತಿಯನ್ನು ಪರಿಣಾಮಕಾರಿ ಮತ್ತು ಸಮರ್ಥವಾಗಿ ಮಾಡಲು, ಹಲವಾರು ಶಾಸನಾತ್ಮಕ ಮತ್ತು ಆಡಳಿತ ಕ್ರಮಗಳನ್ನು ಪ್ರಸ್ತಾಪಿಸುತ್ತೇನೆ. ವಿವರಗಳು ಈ ರೀತಿ ಇವೆ :

(i) ಕರನಿರ್ಧರಣೆ ಕಾಲಮಿತಿಯನ್ನು ಮೂರು ವರ್ಷದಿಂದ ಎರಡು ವರ್ಷಕ್ಕೆ ಇಳಿಸಲು;

(ii) ವಿವಿಧ ಕಾಯ್ದೆಗಳಡಿಯಲ್ಲಿ ಅಪರಾಧಗಳಿಗೆ ಇರುವ ದಂಡನೆಗಳನ್ನು ಮರು ನಿಗದಿಪಡಿಸುವುದು;

(iii) ಮರು ಕರನಿರ್ಧರಣೆ ಮತ್ತು ಪರಿಷ್ಕರಣೆ ಪ್ರಕರಣಗಳಲ್ಲಿ ನಡಾವಳಿಗಳು ಪ್ರಾರಂಭವಾದಾಗಿನಿಂದ ಎರಡು ವರ್ಷದೊಳಗೆ ಮುಕ್ತಾಯಗೊಳಿಸಲು;

(iv) ರೂ. 25 ಲಕ್ಷ ತೆರಿಗೆ ಬಾಕಿ ಇರುವ ಪ್ರಕರಣಗಳಲ್ಲಿ, 24 ಮಾಸಿಕ ಕಂತುಗಳಲ್ಲಿ ತೀರಿಸುವಂತೆ ಅನುಮತಿ ನೀಡಲು ಆಯುಕ್ತರಿಗೆ ಅಧಿಕಾರ ನೀಡುವುದು;

(v) ಅರ್ಹ ಪ್ರಕರಣಗಳಲ್ಲಿ ಬಡ್ಡಿ ಮತ್ತು ದಂಡ ಹಣವನ್ನು ರೂ. ಐದು ಲಕ್ಷದ ಮಿತಿಗೊಳಪಟ್ಟು ಮನ್ನಾ ಮಾಡುವ ಅಧಿಕಾರವನ್ನು, ಆಯುಕ್ತರಿಗೆ ನೀಡುವುದು;

(vi) ಸರಕುಗಳು ಬೆಲೆಯನ್ನು ಕಡಿಮೆ ಮಾಡಿ, ತೆರಿಗೆ ವಂಚನೆಯ ಪ್ರಯತ್ನ ಮಾಡುವ ಪ್ರಕರಣಗಳಲ್ಲಿ, ಅಂತಹ ವಸ್ತುಗಳನ್ನು, ಗೊತ್ತುಮಾಡಿದ ಅಧಿಕಾರಿಗಳಿಗೆ ಖರೀದಿಸುವ ಅಧಿಕಾರ ನೀಡಲು;

(vii) ವಿವಿಧ ವರ್ಗಗಳ ಕರನಿರ್ಧರಣ ಅಧಿಕಾರಿಗಳ, ಅಧಿಕಾರ ವ್ಯಾಪ್ತಿಯನ್ನು ಪುನರ್ ವಿಮರ್ಶಿಸುವುದು;

(viii) ಹತ್ತನೇ ವಿತ್ತೀಯ ಆಯೋಗವು 'ಪ್ರಾಬ್ಲಂ ಏರಿಯ ಗ್ರಾಂಟ್ಸ್ ಅಡಿಯಲ್ಲಿ ನೀಡುತ್ತಿರುವ ಹಣದಲ್ಲಿ ರೂ. 1.50 ಕೋಟಿಯನ್ನು ತನಿಖಾಠಾಣೆಗಳ ಗಣಕೀಕರಣಕ್ಕೆ ಖರ್ಚು ಮಾಡುವುದು; ಮತ್ತು

(ix) ತೆರಿಗೆ ರಿಯಾಯಿತಿಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಎಲ್ಲಾ ಅಧಿಸೂಚನೆಗಳನ್ನು ಮುಂದುವರೆಸುವ ಅಥವಾ ಹಿಂತೆಗೆದುಕೊಳ್ಳುವುದಕ್ಕಾಗಿ ಪರಿಶೀಲಿಸಿ, ಅವಶ್ಯವಿರುವ ಕಡೆ ಹೊಸ ಅಧಿಸೂಚನೆಗಳನ್ನು ನೀಡಲಾಗುವುದು.

ತತ್ಸಂಬಂಧ ತಿದ್ದುಪಡಿಗಳು

192. ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಹಲವಾರು ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ತರಬೇಕಾಗುತ್ತದೆ. ಈ ತಿದ್ದುಪಡಿಗಳು ಮತ್ತು ಇತರ ಬದಲಾವಣೆಗಳ ವಿವರಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

ಅಬಕಾರಿ

193. 1997-98ನೇ ಅಬಕಾರಿ ವರ್ಷಕ್ಕೆ ಅನ್ವಯಿಸಲ್ಪಡುವಂತೆ ಲೈಸೆನ್ಸ್ ಶುಲ್ಕದ ರಚನೆಯನ್ನು ಪರಿಷ್ಕರಿಸಲು ಪ್ರಸ್ತಾವಿಸುತ್ತೇನೆ. ಈ ಕ್ರಮದಿಂದಾಗಿ 12.40 ಕೋಟಿ ರೂ.ಗಳ ಹೆಚ್ಚುವರಿ ಆದಾಯವು ಸಂಗ್ರಹವಾಗುವುದಿದ್ದು, ವಿವರಗಳನ್ನು ಅನುಬಂಧ-VI ರಲ್ಲಿ ಕೊಡಲಾಗಿದೆ.

194. ಪ್ರಸ್ತುತ ಅಬಕಾರಿ ಸುಂಕದ ರಚನೆಯಲ್ಲಿ ಉತ್ತಮ ಅಥವಾ ಸಾಧಾರಣ ಬ್ರ್ಯಾಂಡ್‌ಗಳ ವೈವಿಧ್ಯತೆಯಲ್ಲಿ ವ್ಯತ್ಯಾಸವಿರುವುದಿಲ್ಲ. ಆದ್ದರಿಂದ ಕಾಕಂಬಿ ಆಧಾರಿತ ಮದ್ಯಸಾರದೊಂದಿಗೆ ಮಾಲ್ಟ್ ಸ್ಪಿರಿಟ್ ಅಥವಾ ಭಾರತಕ್ಕೆ ಹೊರದೇಶದಿಂದ ಆಮದು ಮಾಡಿಕೊಂಡ ಸ್ಕಾಚ್ ವಿಸ್ಕಿಯೊಡನೆ ಯಾವುದೇ ಶತಾಂಶ ಪ್ರಮಾಣದಲ್ಲಿ ಬ್ಲೆಂಡ್ ಮಾಡಿದ ಅಥವಾ ಸಂಮಿಶ್ರಣ ಮಾಡಿದ ಮದ್ಯದ ಮೇಲೆ ಅಥವಾ ಮಾಲ್ಟ್ ಸ್ಪಿರಿಟ್‌ನಿಂದ ತಯಾರು ಮಾಡಿದ ಮದ್ಯದ ಮೇಲೆ ಬಲ್ಕ್ ಲೀಟರ್‌ಗೆ ರೂ. 60ನ್ನು ಅಬಕಾರಿ ಶುಲ್ಕವಾಗಿ ವಿಧಿಸಲು ಪ್ರಸ್ತಾವಿಸುತ್ತೇನೆ.

195. ಪ್ರಸ್ತುತ, ಪ್ರತಿ ಪರ್ಮಿಟ್‌ಗೆ 25 ರೂ.ಗಳ ಪರ್ಮಿಟ್ ಶುಲ್ಕ ವಿಧಿಸಲಾಗುತ್ತಿದೆ. ಇದನ್ನು ಪ್ರತಿ ಪರ್ಮಿಟ್ಟಿಗೆ 100 ರೂ.ಗಳ ಪರ್ಮಿಟ್ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

196. ಪ್ರಸ್ತುತ, ಅಬಕಾರಿ ಕಾಯಿದೆಯ ಪ್ರಕರಣ 45ಎ ರೀತ್ಯಾ ವಿಧಿಸುವ ದಂಡದ ಗರಿಷ್ಠ ಮಿತಿಯು ಪ್ರತಿ ಅಪರಾಧಕ್ಕೆ ರೂ. 5000 ಇರುತ್ತದೆ. ಅಬಕಾರಿ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿ

ಪ್ರಕರಣದಲ್ಲಿ ಕನಿಷ್ಠ ರೂ. 5000 ಹಾಗೂ ಗರಿಷ್ಠ ರೂ. 25,000 ದಂಡವನ್ನು ವಿಧಿಸುವ ಪ್ರಸ್ತಾವನೆಯನ್ನು ಸೂಚಿಸಬಯಸುತ್ತೇನೆ.

197. ಮೇಲಿನ ಕ್ರಮಗಳಿಂದಾಗಿ 1997-98ನೇ ಸಾಲಿನಲ್ಲಿ ನಿವ್ವಳ 20 ಕೋಟಿ ರೂ.ಗಳ ಹೆಚ್ಚುವರಿ ಆದಾಯ ಶೇಖರಣೆಯನ್ನು ನಿರೀಕ್ಷಿಸಲಾಗಿದೆ.

ಮೋಟಾರು ವಾಹನ ತೆರಿಗೆ

ಅಪಘಾತ ಪರಿಹಾರ ನಿಧಿ

198. ಈಗಾಗಲೇ ಚಾಲ್ತಿಯಲ್ಲಿರುವ ಆಟೋರಿಕ್ಷಾ ಚಾಲಕರ ಪರಿಹಾರ ನಿಧಿಯ ಮಾದರಿಯಲ್ಲಿಯೇ ಸಾರ್ವಜನಿಕ ಸೇವಾ ವಾಹನ ಮತ್ತು ಸರಕು ವಾಹನ ಚಾಲಕರಿಗೆ ಅನ್ವಯವಾಗುವಂತೆ, ಅಂತಹ ವಾಹನ ಚಾಲಕರು, ವಾಹನ ಚಾಲನಾ ನಡೆಸುವಾಗ ಮೃತಪಟ್ಟಲ್ಲಿ ಅಥವಾ ಶಾಶ್ವತವಾಗಿ ಊನಗೊಂಡಾ ಪರಿಹಾರ ನಿಧಿ ರೂ. 50,000-00 ಅನ್ನು ಒದಗಿಸುವ ಸಲುವಾಗಿ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ, ಸುಮಾರು 2.15 ಲಕ್ಷ ಚಾಲಕರು ಈ ಯೋಜನೆಯ ವ್ಯಾಪ್ತಿಯಲ್ಲಿರುತ್ತಾರೆ.

199. ಖಾಸಗಿ ವಾಹನಗಳಿಗೆ ವಿಶೇಷ ಪರವಾನಿಗೆ ನೀಡುವ ಬಗ್ಗೆ

ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ, ಕರ್ನಾಟಕ ಸರ್ಕಾರವು, ಕರ್ನಾಟಕ ಒಪ್ಪಂದ ವಾಹನ (ಸ್ವಾಧೀನ) 1976ರ ಕಾಯ್ದೆಯ ಅಡಿಯಲ್ಲಿ ಖಾಸಗಿ ಮಾಲೀಕರು ವಿಶೇಷ ಪರವಾನಿಗೆ ಪಡೆಯಲು ಸಾಧ್ಯವಾಗುವಂತೆ 1957ನೇ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆಯಲ್ಲಿ ಪ್ರತ್ಯೇಕವಾಗಿ ತೆರಿಗೆ ರೂ. 600-00ರಂತೆ ಪ್ರತಿ ಆಸನಕ್ಕೆ, ಪ್ರತಿ ತ್ರೈಮಾಸಿಕಕ್ಕೆ ವಿಧಿಸಲು ಉದ್ದೇಶಿಸಲಾಗಿದೆ.

200. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪಾವತಿಸುವ ತೆರಿಗೆ ಕಡಿಮೆ ಮಾಡುವ ಬಗ್ಗೆ :

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರಯಾಣ ದರ ಹಾಗೂ ಸಾಗಾಣಿಕಾ ಶುಲ್ಕದ ಒಟ್ಟು ಆದಾಯದ ಮೇಲೆ ಈಗ ವಿಧಿಸುತ್ತಿರುವ ತೆರಿಗೆ ದರವನ್ನು ಶೇ. 12 ರಿಂದ ಶೇ. 8ಕ್ಕೆ ಇಳಿಸಲು ಮತ್ತು ನಗರ ಸಾರಿಗೆ ಶೇವಾ ವಾಹನಗಳಿಗೆ ಪ್ರತ್ಯೇಕವಾಗಿ ಶೇಕಡ 5 ರಂತೆ ವಿಧಿಸಲು ಉದ್ದೇಶಿಸಲಾಗಿದೆ.

201. ದ್ವಿಚಕ್ರ ವಾಹನ, ಮೋಟಾರು ಕಾರು, ಖಾಸಗಿ ಬಸ್ಸು, ಮ್ಯಾಕ್ಸಿ ಕ್ಯಾಬ್, ಪ್ರವಾಸಿ ವಾಹನಗಳಿಗೆ ಹೆಚ್ಚಿನ ತೆರಿಗೆಯನ್ನು ಮತ್ತು ಸರಕು ವಾಹನದ ಸಮಗ್ರ ವಾಹನ ತೂಕ 1000ಕ್ಕೆ ಗಿಂತಲೂ ಮೀರದ (ಡೆಲವರಿ ವಾಹನ) ಮತ್ತು ಓಮ್ನಿ ಬಸ್ಸು ಹಾಗೂ ಖಾಸಗಿ ಸೇವಾ ವಾಹನ ನೆಲ ವಿಸ್ತೀರ್ಣದ ಮೇಲೆ ವಿಧಿಸುತ್ತಿರುವ ತೆರಿಗೆಯ ಬದಲು ಜೀವಾವಧಿ ತೆರಿಗೆಯನ್ನು ವಿಧಿಸಲು ಉದ್ದೇಶಿಸಲಾಗಿದೆ. ಕೇಂದ್ರ ಸರ್ಕಾರಿ ನೌಕರರು ಮತ್ತು ರಕ್ಷಣಾ ಸಿಬ್ಬಂದಿಯವರು ಹೊಂದಿರುವ ದ್ವಿಚಕ್ರ ಮತ್ತು ಮೋಟಾರು ಕಾರುಗಳಿಗೆ ಜೀವಾವಧಿ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿ, ವಾರ್ಷಿಕ ತೆರಿಗೆ ಪಾವತಿಸಲು ಅನುಕೂಲ ಮಾಡಿ ಕೊಡಲಾಗಿದೆ. ದ್ವಿಚಕ್ರ ವಾಹನಕ್ಕೆ ವರ್ಷಕ್ಕೆ ರೂ. 100-00 ಮತ್ತು ಮೋಟರುಗಳಿಗೆ ರೂ. 750-00 ವಿಧಿಸಲು ಉದ್ದೇಶಿಸಿಲಾಗಿದೆ.

202. ಉದ್ದೇಶಿಸಿದ ಬದಲಾವಣೆಗಳನ್ನು ಅನುಬಂಧ 7 ರಲ್ಲಿ ತೋರಿಸಲಾಗಿದೆ. ಮೇಲೆ ಸೂಚಿಸಿದ ಎಲ್ಲಾ ಕ್ರಮಗಳಿಂದ ಒಟ್ಟಾರೆ ಸರ್ಕಾರಕ್ಕೆ 20.00 ಕೋಟಿ ರೂಪಾಯಿಗಳ ನಷ್ಟವನ್ನು ನಿರೀಕ್ಷಿಸಲಾಗಿದೆ.

ನೋಂದಣಿ ಹಾಗೂ ಮುದ್ರಾಂಕ

203. ಈಗ ಶೇಕಡ 1ರಷ್ಟು ಸ್ಟಾಂಪು ಶುಲ್ಕವನ್ನು ಚರಸ್ವತ್ತಿನ ಅಡಮಾನ, ಗಿರವಿ ಅಥವಾ ಒತ್ತೆಯ ಲಿಖಿತ ಪತ್ರಗಳಿಗೆ ವಿಧಿಸಲಾಗುತ್ತದೆ. ಆದರೆ ಸಾಕ್ಷಿ ಹಾಕದಿರುವಂತಹ ಅಡಮಾನ, ಗಿರಿವಿ ಅಥವಾ ಒತ್ತೆಯ ಲಿಖಿತ ಪತ್ರಗಳಿಗೆ ಮುದ್ರಾಂಕ ಶುಲ್ಕದ ರಿಯಾಯಿತಿ ಇರುತ್ತದೆ. ಸಾಲದ ಚಟುವಟಿಕೆಗಳ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಅಡಮಾನ, ಗಿರಿವಿ ಅಥವಾ ಒತ್ತೆಯ ಲಿಖಿತ ಪತ್ರಗಳಿಗೆ ಸಾಕ್ಷಿ ಹಾಕಿರುವ ಅಥವಾ ಹಾಕದಿರುವಂತಹ ಸಂದರ್ಭಗಳಲ್ಲಿಯೂ ಸಹ ಶೇಕಡ 0.25 ರಂತೆ ಮೂರು ತಿಂಗಳ ಅವಧಿಯೊಳಗೆ ಹಿಂದಿರುಗಿಸುವ ಸಾಲದ ಮೊತ್ತಕ್ಕೆ ಶುಲ್ಕವನ್ನು ವಿಧಿಸಲು ಮತ್ತು ಅಂತಹ ಸಾಲವು, ಕೇಳಿದೊಡನೆಯೇ ಅಥವಾ ಲಿಖಿತದ ದಿನಾಂಕದಿಂದ ಮೂರು ತಿಂಗಳಾದ ಮೇಲೆ, ಮರು ಸಂದಾಯವಾಗುವಂತಹ ಸಂದರ್ಭಗಳಲ್ಲಿ ಶೇಕಡ 0.50 ರಂತೆ ಶುಲ್ಕವನ್ನು ವಿಧಿಸಲು ಉದ್ದೇಶಿಸಿದ್ದೇನೆ. ಅಂತಹ ಲಿಖಿತ ಪತ್ರಗಳ ಮೇಲೆ ಗರಿಷ್ಠ ರೂ. 2 ಲಕ್ಷ ಮಿತಿಯನ್ನು ನಿಗದಿ ಮಾಡಲು ಸಹ ಉದ್ದೇಶಿಸಿದ್ದೇನೆ.

204. ಈಗ ಪ್ರವರ್ತಕ ಅಥವಾ ಭೂ ಒಡೆಯ ಅಥವಾ ಅಭಿವೃದ್ಧಿಕಾರ ಅವರನ್ನು ಯಾವುದೇ ಹೆಸರಿನಿಂದ ಕರೆಯಲಿ ಇವರು ಮೊದಲನೇ ಸಲ ಬರೆದುಕೊಡುವ ಪ್ಲಾಟ್/ಅಪಾರ್ಟ್‌ಮೆಂಟ್‌ಗಳ ಖರೀದಿ ಪತ್ರಕ್ಕೆ ಪ್ರತಿಶತ 6 ರೂಪಾಯಿಯಂತೆ ಸ್ಟಾಂಪ್ ಶುಲ್ಕವನ್ನು ಆಕರಣೆ ಮಾಡಲಾಗುತ್ತಿದೆ. ಚಿಕ್ಕದಾದ ಪ್ಲಾಟ್/ಅಪಾರ್ಟ್‌ಮೆಂಟ್‌ಗಳ ಖರೀದಿದಾರರಿಗೆ ಪರಿಹಾರ ಒದಗಿಸಲು ಹಾಗೂ ಶುಲ್ಕ ವಸೂಲಾತಿಯ ರಚನೆಯನ್ನು ಸುವ್ಯವಸ್ಥಿಗೊಳಿಸಲು ಈ ಕೆಳಗೆ ತೋರಿಸಿದ ರೀತಿಯಲ್ಲಿ ಆಕರಣೆ ಮಾಡಲು ನಾನು ಉದ್ದೇಶಿಸಿದ್ದೇನೆ.

(ಅ) ಶೇಕಡ 4 ರಂತೆ ರೂ. 5 ಲಕ್ಷದವರೆಗಿನ ಬೆಲೆಯ ಆಸ್ತಿಗೆ,

(ಆ) ಶೇಕಡ 6 ರಂತೆ ರೂ. 5 ಲಕ್ಷದ ಮೇಲ್ಪಟ್ಟು ಹಾಗೂ 15 ಲಕ್ಷದ ಒಳಗಿನ ಬೆಲೆಯ ಆಸ್ತಿಗಳಿಗೆ ಮತ್ತು

(ಇ) ಶೇಕಡ 8 ರಂತೆ ರೂ. 15 ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಬೆಲೆಯ ಆಸ್ತಿಗೆ.

205. ಚರ ಸ್ವತಿನ ಗುತ್ತಿಗೆ ಪತ್ರಗಳ ಮೇಲೆ ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಅಡಿಯಲ್ಲಿ ಈಗ ಶುಲ್ಕ ವಿಧಿಸುತ್ತಿಲ್ಲ. ಆದ್ದರಿಂದ ಗುತ್ತಿಗೆಯು ಹತ್ತು ವರ್ಷಕ್ಕೆ ಮೀರಿದ ಅವಧಿಯದ್ದೆಂದು ಕಂಡುಬಂದಲ್ಲಿ, ಕಾಯ್ದಿರಿಸಿದ ಸರಾಸರಿ ವಾರ್ಷಿಕ ಬಾಡಿಗೆಯ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ 1 ರೂಪಾಯಿಯಂತೆ, ಗುತ್ತಿಗೆಯು ಹತ್ತು ವರ್ಷಗಳಿಗೆ ಮೀರಿದ ಅವಧಿಯದ್ದಾಗಿದೆಯೆಂದು ಕಂಡುಬಂದಲ್ಲಿ ಕಾಯ್ದಿರಿಸಿದ ಸರಾಸರಿ ವಾರ್ಷಿಕ ಬಾಡಿಗೆಯ ಮೇಲೆ ಪ್ರತಿ ಒಂದು ನೂರು ರೂಪಾಯಿಗಳ ಅಥವಾ ಅದರ ಭಾಗಕ್ಕೆ 1 ರೂ. 50 ಪೈಸೆಯಂತೆ ಸ್ಟಾಂಪ್ ಶುಲ್ಕವನ್ನು ಹಾಗೂ ಗರಿಷ್ಠ ರೂ. ಎರಡು ಲಕ್ಷದ ಮಿತಿಯನ್ನು ನಿಗದಿಗೊಳಿಸಲು ಉದ್ದೇಶಿಸಿದ್ದೇನೆ.

206. ಸ್ವಾಧೀನತೆರಹಿತ ಅಡಮಾನ ಪಡೆದುಕೊಂಡ ಮೊಬಲಗಿಗಾಗಿ ಈಗ ಶೇಕಡ 5 ರಷ್ಟು ಸ್ಟಾಂಪ್ ಶುಲ್ಕವನ್ನು ವಿಧಿಸಲಾಗುತ್ತದೆ. ಹೆಚ್ಚು ಮೊತ್ತದ ಸಾಲದ ಮೇಲೆ ಸಂದಾಯ ಮಾಡಬೇಕಾದ ಸ್ಟಾಂಪ್ ಶುಲ್ಕದ ಮೊತ್ತವೂ ಹೆಚ್ಚಾಗಿರುವುದರಿಂದ, ಜನರು ಈ ಸ್ಟಾಂಪ್ ಶುಲ್ಕದ ಸಂದಾಯವನ್ನು ತಪ್ಪಿಸುವುದಕ್ಕಾಗಿ ಅನೇಕ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಸ್ಟಾಂಪ್ ಶುಲ್ಕ ತಪ್ಪಿಸಿಕೊಳ್ಳುವಿಕೆಯನ್ನು ತಡೆಯುವುದಕ್ಕಾಗಿ ಮತ್ತು ಸ್ಟಾಂಪ್ ಶುಲ್ಕ ಸಂದಾಯ ಮಾಡುವುದನ್ನು ಉತ್ತೇಜಿಸುವುದಕ್ಕಾಗಿ, ಅಂತಹ ಲಿಖಿತ ಪತ್ರಗಳ ಮೇಲೆ ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳ ಮಿತಿಯನ್ನು ನಿಗದಿ ಮಾಡಲು ಉದ್ದೇಶಿಸಿದ್ದೇನೆ.

207. ವಿಭಜನೆ ಪತ್ರದ ಮೂಲಕ ವಿಭಜನೆ ಮಾಡಲಾದ ಕೃಷಿಯೇತರ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಈಗ ಶೇಕಡ 5 ರಷ್ಟು ಸ್ಟಾಂಪ್ ಶುಲ್ಕವನ್ನು ವಿಧಿಸಲಾಗುತ್ತಿದೆ. ಶುಲ್ಕದ ದರವು ಹೆಚ್ಚಾಗಿರುವುದರಿಂದ ಅಂತಹ ಲಿಖಿತ ಪತ್ರಗಳ ಮೇಲೆ ಇಪ್ಪತ್ತೈದು ಸಾವಿರ ರೂಪಾಯಿಗಳ ಮಿತಿಯನ್ನು ನಿಗದಿಪಡಿಸಲು ಉದ್ದೇಶಿಸಿದ್ದೇನೆ.

208. ಈಗ ನಿರ್ಮಾಣ ಅಥವಾ ಅಭಿವೃದ್ಧಿಗಾಗಿ ಅಥವಾ ಮಾರಾಟ ಅಥವಾ ವರ್ಗಾವಣೆಗೆ ಅದು ಯಾವುದೇ ರೀತಿಯದ್ದಾಗಿರಲಿ ಒಬ್ಬ ಪ್ರವರ್ತಕ ಅಥವಾ ಅಭಿವೃದ್ಧಿದಾರನಿಗೆ ಸ್ಥಿರಸ್ವತ್ತಿನ ಪ್ರಾಧಿಕಾರವನ್ನು ನೀಡುವಂತಹ ಒಪ್ಪಂದದ ಪತ್ರಗಳಿಗೆ ಬೆಲೆಗೆ ತಕ್ಕಂತೆ ಶುಲ್ಕವನ್ನು ಶೇಕಡ 10 ರಷ್ಟು ಆಕರಣೆ ಮಾಡಲಾಗುತ್ತಿದೆ. ಇದನ್ನು ನಾನು ಶೇಕಡ 6ರಂತೆ ವಿಧಿಸಲು ಹಾಗೂ ಈ ರೀತಿ ಸ್ಟಾಂಪು ಶುಲ್ಕವನ್ನು ಕೊಟ್ಟಂತಹ ಒಪ್ಪಂದ ಪತ್ರದ ಅನುಗುಣವಾಗಿ ಒಂದು ವೇಳೆ ಮೊಖ್ತಾರನಾಮೆ (ಪವರ್ ಆಫ್ ಅಟಾರ್ನಿ) ಬರೆದುಕೊಟ್ಟಲ್ಲಿ ಆ ಮೊಖ್ತಿಯಾರನಾಮೆಯ (ಪವರ್ ಆಫ್ ಆಟಾರ್ನಿ) ಮೇಲೆ ಅನುಚ್ಛೇದ 41 (ಎಫ್) ರೀತ್ಯ ರೂ. 100ರಂತೆ ಆಕರಣೆ ಮಾಡಲು ಉದ್ದೇಶಿಸಿದ್ದೇನೆ. ಇದರಿಂದ ನೋಂದಣಿಯನ್ನು ಉತ್ತೇಜಿಸಲು ಹಾಗೂ ಸ್ಟಾಂಪ್ ಶುಲ್ಕ ತಪ್ಪಿಸುವುದನ್ನು ನಿರುತ್ಸಹಗೊಳಿಸಲು ಸಹಾಯವಾಗುತ್ತದೆ.

ಅನುಬಂಧ VIIIಎ ನಲ್ಲಿ ಉದ್ದೇಶಿಸಿದ ಬದಲಾವಣೆಗಳನ್ನು ವಿವರಿಸಲಾಗಿದೆ.

209. ಸೆಕ್ಯೂರಿಟೈಜೇಷನ್ ಎಂಬ ಹೊಸ ಪರಿಕಲ್ಪನೆಯಿಂದ ಔದ್ಯಮಿಕ ಹಾಗೂ ಮನೆ ಕಟ್ಟುವ ಯೋಜನೆಗಳಿಗೆ ರಾಜ್ಯಕ್ಕೆ ಹಣ ಹರಿದುಬರುವಂತಹದ್ದಾಗಿದೆ. ಈಗ ರಾಜ್ಯದ ಬೊಕ್ಕಸಕ್ಕೆ ಸೆಕ್ಯೂರಿಟೈಜೇಷನ್ ವ್ಯವಹಾರದಿಂದ ರಾಜಸ್ವ ಬರುತ್ತಿಲ್ಲ. ಅಲ್ಲದೆ ಪ್ರಸ್ತುತ ಕರ್ನಾಟಕ ಸ್ಟಾಂಪು ಅಧಿನಿಯಮದಲ್ಲಿ ಸೆಕ್ಯೂರಿಟೈಜೇಷನ್ ಪತ್ರಗಳನ್ನು ಕುರಕಿತು ಪ್ರತ್ಯೇಕ ಅನುಚ್ಛೇದ ಇಲ್ಲ. ಆದ್ದರಿಂದ ಶೇಕಡ 10 ರಷ್ಟು ಶುಲ್ಕ ಆಕರಣೆ ಮಾಡುವ "ಹಸ್ತಾಂತರ"ವೆಂದು ವ್ಯಾಖ್ಯಾನಿಸಲಾಗುತ್ತಿದೆ. ಈ ವ್ಯವಹಾರಗಳಲ್ಲಿ ಇರುವ ಲಾಭಾಂಶ ಅತಿ ಕಡಿಮೆ ಇದ್ದು ಮುದ್ರಾಂಕ ಶುಲ್ಕ ಬಹಳಷ್ಟಾಗುತ್ತದೆ. ಇದರಿಂದಾಗಿ ಸೆಕೆಂಡರಿ ಸಾಲದ ಮಾರುಕಟ್ಟೆಗಳ ಬೆಳವಣಿಗೆಯು ಕುಂಠಿತವಾಗುತ್ತದೆ. ಗೃಹ ನಿರ್ಮಾಣ ಹಾಗೂ ಔದ್ಯಮಿಕ ಚಟುವಟಿಕೆಗಳನ್ನು ಹೆಚ್ಚಿಸುವುದರಿಂದ ಉದ್ಯೋಗಾವಕಾಶವನ್ನು ಪ್ರೋತ್ಸಾಹಿಸಲು ಸೆಕ್ಯೂರಿಟೈಜೇಷನ್ ಪತ್ರಗಳ ಮೇಲೆ ಬೆಲೆಗೆ ತಕ್ಕಂತೆ ಶೇಕಡ 0.1 ರಂತೆ ಮುದ್ರಾಂಕ ಶುಲ್ಕ ಆಕರಣೆ ಮಾಡಲು ಉದ್ದೇಶಿಸಿದ್ದೇನೆ.

210. ಕೆಲವು ಅನುಚ್ಛೇದಗಳಲ್ಲಿ ಹೇಳಿದವುಗಳ ಮೇಲೆ ವಿಧಿಸಲಾಗುವ ನೋಂದಣಿ ಶುಲ್ಕವನ್ನು 1986ರಿಂದ ಪರಿಷ್ಕರಿಸಿಲ್ಲ. ನೋಂದಣಿ ಶುಲ್ಕಕ್ಕೆ ಸಂಬಂಧಿಸಿದ ಕೆಲವು ಅನುಚ್ಛೇದಗಳನ್ನು ಪರಿಷ್ಕರಿಸಲು ಉದ್ದೇಶಿಸಿದ್ದೇನೆ.

ಪ್ರಸ್ತಾವಿತ ಬದಲಾವಣೆಗಳನ್ನು ಅನುಬಂಧ VIII ಬಿ ಯಲ್ಲಿ ವಿವರಿಸಲಾಗಿದೆ.

1996-97ರ ಪರಿಷ್ಕೃತ ಅಂದಾಜುಗಳು

211. 1996-97ನೇ ಸಾಲಿನ 12286.45 ಕೋಟಿ ರೂಪಾಯಿಗಳ ಆಯವ್ಯಯದ ಅಂದಾಜಿಗೆ ಹೋಲಿಸಿದರೆ, ಪರಿಷ್ಕೃತ ಅಂದಾಜಿನ ಪ್ರಕಾರ ಒಟ್ಟು ಜಮಾ 12138.69 ಕೋಟಿ ರೂಪಾಯಿಗಳಾಗಿದೆ. 1996-97ನೇ ಸಾಲಿನ 12339.15 ಕೋಟಿ ರೂಪಾಯಿಗಳ ಆಯವ್ಯಯ ಅಂದಾಜು ವೆಚ್ಚಕ್ಕೆ ಪ್ರತಿಯಾಗಿ ಪರಿಷ್ಕೃತ ಅಂದಾಜುಗಳ ಪ್ರಕಾರ 12182.99 ಕೋಟಿ ರೂಪಾಯಿ ಒಟ್ಟು ವೆಚ್ಚ ಆಗುವುದೆಂದು ನಿರೀಕ್ಷಿಸಲಾಗಿದೆ. 1996-97 ಆಯವ್ಯಯ ಮಂಡನೆಯ ಸಮಯದಲ್ಲಿ 132.20 ಕೋಟಿ ರೂಪಾಯಿ ಕೊರತೆಯಾಗುತ್ತದೆಂದು ನಿರೀಕ್ಷಿಸಲಾಗಿತ್ತು, ಆದರೆ ಸಾರ್ವಜನಿಕ ಲೆಕ್ಕಗಳಲ್ಲಿನ ಹೆಚ್ಚುವರಿ ಮೊತ್ತವನ್ನು ಪರಿಗಣನೆಗೆ ತೆಗೆದುಕಂಡ ನಂತರ ಈ ವರ್ಷ 98.94 ಕೋಟಿ ರೂಪಾಯಿಗಳ ಅಂತಿಮ ಕೊರತೆಯಾಗುವ ಸಂಭವವಿದೆ.

1997-98ರ ಆಯವ್ಯಯದ ಅಂದಾಜುಗಳು

212. 1997-98ನೇ ಸಾಲಿನಲ್ಲಿ 11766.45 ಕೋಟಿ ರೂಪಾಯಿಗಳ ಆದಾಯ ಜಮಾ ಮತ್ತು 1878.32 ಕೋಟಿ ರೂಪಾಯಿಗಳ ಬಂಡವಾಳ ಜಮಾ ಎರಡೂ ಸೇರಿದಂತೆ 13644.77 ಕೋಟಿ ರೂಪಾಯಿ ಒಟ್ಟು ಆದಾಯ ಬರುತ್ತದೆಂದು ನಿರೀಕ್ಷಿಸಲಾಗಿದೆ. ಹಾಗೆಯೆ 13456.68 ಕೋಟಿ ರೂಪಾಯಿ ಒಟ್ಟು ವೆಚ್ಚವಾಗುತ್ತದೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ರಾಜಸ್ವ ವೆಚ್ಚವು 11,965.45 ಕೋಟಿ ರೂಪಾಯಿಗಳಷ್ಟಿರುತ್ತದೆ. ಮತ್ತು ಬಂಡವಾಳ ವೆಚ್ಚವು 1491.23 ಕೋಟಿ ರೂಪಾಯಿಗಳಷ್ಟಿರುತ್ತದೆ.

213. ನಾನು ಈಗಾಗಲೇ ನನ್ನ ಭಾಷಣದಲ್ಲಿ ತಿಳಿಸಿರುವಂತೆ ಪ್ರಮುಖ ತೆರಿಗೆ ಆದಾಯದ ಜೊತೆಗೆ, ಸರ್ಕಾರವು ಸಣ್ಣ ಉಳಿತಾಯಗಳಿಂದ 400 ಕೋಟಿ ರೂಪಾಯಿಗಳನ್ನು, ಮಾರುಕಟ್ಟೆ ಸಾಲಗಳಿಂದ 256.33 ಕೋಟಿ ರೂಪಾಯಿಗಳನ್ನು, ಒಪ್ಪಂದಮಾಡಿಕೊಂಡ ಪ್ರಕಾರ ದೊರಕುವ ಸಾಲಗಳಿಂದ 186.80 ಕೋಟಿ ರೂಪಾಯಿಗಳನ್ನು ಮತ್ತು ಕೇಂದ್ರ ಸರ್ಕಾರದಿಂದ ಒಟ್ಟು ಯೋಜನಾ ನೆರವಾಗಿ 949.49 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲು ಉದ್ದೇಶಿಸಿದೆ.

214. ಈಗಿನ ಅಂದಾಜುಗಳ ಪ್ರಕಾರ ಈ ವರ್ಷಕ್ಕೆ 188.09 ಕೋಟಿ ರೂಪಾಯಿಗಳ ಒಟ್ಟಾರೆ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ. ಆರಂಭದ ಶಿಲ್ಕು (-) 98.94 ಕೋಟಿ ರೂಪಾಯಿಗಳನ್ನು ಗಣನೆಗೆ ತೆಗೆದುಕೊಂಡು ಈಗ ಅಂದಾಜು ಮಾಡಿರುವ ತೆರಿಗೆ ದರ ಮತ್ತು ತೆರಿಗೆಯೇತರ ಆದಾಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡಲ್ಲಿ ನಮ್ಮ ಅಂತಿಮ ಶಿಲ್ಕು 89.15 ಕೋಟಿ ರೂಪಾಯಿಗಳಾಗು

ತ್ತದೆ. ಆದರೆ ನಮ್ಮ ತೆರಿಗೆ ನೀತಿಯ ವಿವಿಧ ಬದಲಾವಣೆಗಳಿಂದ ಆಗುವ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡು (-)186 ಕೋಟಿ ರೂ.ಗಳಷ್ಟು ಕೊರತೆಯನ್ನು ನಿರೀಕ್ಷಿಸಿದಲ್ಲಿ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) 1997-98ರ ಅಂತಿಮ ಶಿಲ್ಕು (-) 96.85 ಕೋಟಿ ರೂ.ಗಳಾಗಲಿದೆ.

215. ಕಟ್ಟುನಿಟ್ಟಾದ ತೆರಿಗೆ ವಸೂಲಿ ಹಾಗೂ ಅನುತ್ಪಾದಕ ಖರ್ಚು ವೆಚ್ಚಗಳನ್ನು ತಡೆಯುವ ಮೂಲಕ ಮೇಲೆ ಹೇಳಿದ ಕೊರತೆ ಉಂಟಾಗದಂತೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ನಾನು ಭರವಸೆ ನೀಡುತ್ತೇನೆ.

216. ನಾನು ಈಗ 1997-98ರ ಬಜೆಟ್ ಅಂದಾಜುಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸುತ್ತೇನೆ. ವಿಷಯ ಸಮಿತಿಗಳು ಬಜೆಟನ್ನು ಪರಾಮರ್ಶಿಸಿ ಸದನದ ಪರಿಶೀಲನೆಗಾಗಿ ತಮ್ಮ ಶಿಫಾರಸ್ಸುಗಳನ್ನು ಸದನದ ಪರಿಗಣನೆಗೆ ಸಲ್ಲಿಸುವುದರಿಂದ 1997ರ ಸೆಪ್ಟೆಂಬರ್ 30ರಂದು ಕೊನೆಗೊಳ್ಳುವ 6 ತಿಂಗಳ ಅವಧಿಗೆ ನಾನು ಲೇಖಾನುದಾನವನ್ನು ಕೋರುತ್ತೇನೆ.

ಜೈ ಹಿಂದ್ - ಜೈ ಕರ್ನಾಟಕ